
ಪುಸ್ತಕ ಪ್ರಪಂಚ

ಸಂಪುಟ ೩೭ ೧೯೮೩ ಜನವರಿ ಸಂಚಿಕೆ ೬



ವಿಷಯ ಸೂಚಿ

ಮುಖಚಿತ್ರ: ಹಸು-ಕರು

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೭ ಜನವರಿ ೧೯೮೩ ಸಂಚಿಕೆ ೭

ಗಣ್ಯ ಸಾಹಿತಿ

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್

ಆಧುನಿಕ ಕನ್ನಡ ಸಾಹಿತ್ಯ ಸರಸ್ವತಿಯ ಗುಡಿಯ ಗೋಪುರ ಕಟ್ಟಿದ ಗಣ್ಯ ಸಾಹಿತಿಗಳ ಸಾಲಿನಲ್ಲಿ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರದು ಒಂದು ವೈಶಿಷ್ಟ್ಯಮಯ ವ್ಯಕ್ತಿತ್ವ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿ ಜನಪ್ರಿಯತೆಯ ಶಿಖರವನ್ನು ಮುಟ್ಟಿದ ಮಾನ್ಯರು. ಒಂಕ್ಕೂ ಮಿಕ್ಕಿ ಕೃತಿ ಕುಸುಮಗಳನ್ನು ಅರಳಿಸಿ ಕನ್ನಡ ಸರಸ್ವತಿಯ ಶ್ರೀಮಂತಿಕೆಯನ್ನು ಸಾರಸ್ವತ ಪ್ರಪಂಚದ ಭಂಡಾರವನ್ನು ಹೆಚ್ಚಿಸಿದ್ದಾರೆ. ಅವರು ಸೃಷ್ಟಿಸಿದ ಸಾಹಿತ್ಯ ವೈವಿಧ್ಯಮಯ, ವೈಶಿಷ್ಟ್ಯಮಯ, ವರ್ಣಮಯ. ಹಳ್ಳಿಯ ಬಾಳಿನ ಸೊಗಸನ್ನು, ಅವರಷ್ಟು ನವಿರಾಗಿ ವರ್ಣಿಸಿದವರು ವಿರಳರೆಂದೇ ಹೇಳಬಹುದು. ಭಾರತ ಸ್ವಾತಂತ್ರ್ಯಸಂಗ್ರಾಮದ ಹೋರಾಟಗಾರರಾಗಿ, ಗಾಂಧೀಜಿಯವರ ತತ್ವ ಪ್ರಚಾರಕರಾಗಿ, ಖಾದಿ ಪ್ರಚಾರಕರಾಗಿ ಅವರು ಸಲ್ಲಿಸಿದ ಸೇವೆ ಅಪ್ರತಿಮ; ಅಮೋಘ. ಹುಟ್ಟು ಹೋರಾಟಗಾರರಾಗಿ ಹಳೆಯ ತಲೆಮಾರಿನ ಹಿರಿಯ ಲೇಖಕರಾಗಿ ಸಿದ್ಧಿಯನ್ನು ಪ್ರಸಿದ್ಧಿಯನ್ನು ಪಡೆದ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಂಕ್ಷಿಪ್ತ ಪರಿಚಯವಿದು.

ಜನನ ; ಶಿಕ್ಷಣ :

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ಜನ್ಮವೆತ್ತಿ ಬಂದುದು ದಿನಾಂಕ ೪-೭-೧೯೦೪ ರಂದು. ತಂದೆ ಶ್ರೀನಿವಾಸ ಅಯ್ಯಂಗಾರ್ ; ತಾಯಿ ಲಕ್ಷ್ಮಮ್ಮ. ಜನ್ಮಭೂಮಿಯಾದ ಗೊರೂರು ಹಾಸನ ಜಿಲ್ಲೆಯ ಅರಕಲಗೂಡು

ತಾಲ್ಲೂಕಿನ ಹೇಮಾವತಿ ತೀರದ ತೀರ ಸಾಮಾನ್ಯ ಹಳ್ಳಿ. ಪೈಗಳಿಂದ ಮಂಜೇಶ್ವರ, ಕಾರಂತರಿಂದ ಪುತ್ತೂರು, ಸಿಂಪಿಯವರಿಂದ ಚಡಚಣ, ಮಧುರಚೆನ್ನರಿಂದ ಹಲಸಂಗಿ, ಮಿರ್ಜಿಯವರಿಂದ ಸೇರಬಾಳ ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ವಿನೂತನ ಅಧ್ಯಾಯ ನಿರ್ಮಿಸಿದಂತೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ರಂತಹ ಅಸಾಮಾನ್ಯ ಶಕ್ತಿಗೆ ಜನ್ಮವಿತ್ತು ಪ್ರಖ್ಯಾತಿ ಪಡೆಯಿತು. ಹೇಮಾವತಿ ನದಿಯೆಂದರೆ ರಾಮಸ್ವಾಮಿಗಳಿಗೆ ಸ್ವರ್ಗಲೋಕ; ನವರಸ ರಸಾಯನ. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಮಾತಿಗೆ ನಿತಾಂತ ನಿದರ್ಶನ ವಾಗಿದ್ದಾರೆ; ನಮ್ಮ ಗೊರೂರು ರಾಮಸ್ವಾಮಿ ಅಯ್ಯಂಗಾರ್.

ಗೊರೂರಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು, ಪೂರೈಸಿ ಹಾಸನದಲ್ಲಿ ಹೈಸ್ಕೂಲ ಶಿಕ್ಷಣವನ್ನು ಪಡೆದರು. ೧೯೪೦ ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆಗಲೇ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿ ಭರದಿಂದ ಬೀಸುತ್ತಿತ್ತು. ತರುಣರೂ ಉತ್ಸಾಹಿಗಳೂ ರಾಷ್ಟ್ರಪ್ರೇಮಿಗಳೂ ಆದ ರಾಮಸ್ವಾಮಿಗಳು ಅದರಲ್ಲಿ ಧುಮುಕಿದರು. ಮಹಾತ್ಮಾ ಗಾಂಧೀಜಿಯವರ ನಿಕಟ ಸಾಮಿಪ್ಯ ಪಡೆದರು. ೧೯೪೨ ರಲ್ಲಿ ಜೇಲುವಾಸ ಅನುಭವಿಸಿದರು. ಅಂದು ಖಾದಿ ವ್ರತಧಾರಿಯಾದವರು ಇಂದಿಗೂ ಖಾದಿ ವ್ರತಧಾರಿಗಳಾಗಿಯೇ ಉಳಿದಿದ್ದಾರೆ. ಖಾದಿ ಅಂದರೆ ಅವರಿಗೆ ಪಂಚ ಪ್ರಾಣ. ಈ ಸ್ವಾತಂತ್ರ್ಯ ಹೋರಾಟದಲ್ಲಿಯೇ ಹಿರಿಯಮಗ ರಾಮಚಂದ್ರ ಪೋಲೀಸರ ಗುಂಡಿಗೆ ಆಹುತಿಯಾದ. ಆದರೂ ರಾಮಸ್ವಾಮಿಗಳು ಸಮಾಜ ಸೇವಾಕಾರ್ಯದಲ್ಲಿ ನಿರತರಾಗಿ ಸ್ಥಿತಪ್ರಜ್ಞೆಯನ್ನು ಸಾಧಿಸಿದರು. ಮಹಾತ್ಮಾ ಗಾಂಧೀ ಪ್ರಣೀತ ತತ್ತ್ವಗಳಲ್ಲಿ ಅಚಲ ನಿಷ್ಠೆಯನ್ನಿಟ್ಟರು. ಖಾದಿ ಪ್ರಸಾರ ಕಾರ್ಯದಲ್ಲಿ ಅವರು ಸಲ್ಲಿಸಿದ ಸೇವೆ ನಿಜವಾಗಿಯೂ ಶ್ಲಾಘನೀಯ. ವಿಧಾಯಕ ರಚನಾತ್ಮಕ ಕಾರ್ಯಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಇಂದಿಗೂ ತೊಡಗಿರುವುದು ಅವರ ಜೀವನನಿಷ್ಠೆಗೆ ಸಾಕ್ಷಿಯಾಗಿದೆ.

ಕೆಂಗೇರಿ ಗುರುಕುಲ; ಬರಹಕ್ಕೆ ನಾಂದಿ :

ಅವರ ಬರಹ ಪ್ರಾರಂಭವಾದುದು ಕೆಂಗೇರಿ ರಾಷ್ಟ್ರೀಯ ಶಾಲೆಯಲ್ಲಿ ಕಾರ್ಯನಿರತರಾದಾಗಲೇ. ಕೇವಲ ಹತ್ತು ದಿವಸಗಳ ಅವಧಿಯಲ್ಲಿ 'ಹಳ್ಳಿಯ ಚಿತ್ರ'ಗಳನ್ನು ಬರೆದು ಮುಗಿಸಿದರು (೧೯೩೦). ಹಾಗೆಯೇ ೧೯೩೨ ರಲ್ಲಿ 'ನಮ್ಮ ಊರಿನ ರಸಿಕರು' ಹೊರಬಂದಿತು. ಅವೆರಡು ಅತ್ಯಂತ ಜನಪ್ರಿಯ

ಕೃತಿಗಳಾಗಿ ವಿಚಕ್ಷಕ ವಿಮರ್ಶಕರ ಮನ್ನಣೆ ಪಡೆದವು. ಈ ಗ್ರಂಥಗಳ ಕೆಲವು ಭಾಗಗಳು ಪಠ್ಯಪುಸ್ತಕಗಳಲ್ಲಿ ಬಂದವು. ಶಾಲು ಸಾಬಿಯ ನೇತೃತ್ವದಲ್ಲಿ 'ಹರಿಶ್ಚಂದ್ರ' ಬಯಲು ನಾಟಕವಾಡಿದ ಪ್ರಸಂಗ ಇಂದಿಗೂ ರಸಿಕ ಓದುಗರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಸರ್ವಧರ್ಮ ಸಮನ್ವಯಕ್ಕೆ ಈ ನಾಡು ಮಧುರ ಸಂಗಮವಾಗಿತ್ತೆಂಬುದಕ್ಕೆ ಮೇಲಣ ಉದಾಹರಣೆಯಿಂದ ತಿಳಿದು ಬರುತ್ತದೆ. ಹಳ್ಳಿಗಳಲ್ಲಿ ಇಂದು ಜಾತೀಯ ಸಂಕುಚಿತ ವಿಷಭಾವನೆ ಮೂಡಲು ಇಂದಿನ ರಾಜಕಾರಣಿಗಳೇ ಅಂಶತಃ ಕಾರಣರೆಂಬುದರಲ್ಲಿ ಸಂದೇಹವಿಲ್ಲ. ಗ್ರಾಮೀಣ ಬದುಕಿನ ವರ್ಣಮಯ ಜೀವಸಂಪನ್ನ ಬಹುಮುಖ ಚಿತ್ರಣ ಮೇಲಿನ ಕೃತಿಗಳಲ್ಲಿ ಒಡಮೂಡಿದೆ. ಹಾಸ್ಯ ಹೊನಲಾಗಿ ಹರಿದಿದೆ. ಯಾರನ್ನೇ ಆಗಲಿ ಗೇಲಿ ಮಾಡುವ ಮನ ನೋಯಿಸುವ ಉದ್ದೇಶ ಇವರದಲ್ಲ. ತಿಳಿಹಾಸ್ಯ ದಲ್ಲಿ ಸತ್ಯಸಂಗತಿಗಳನ್ನು ಸಾಹಿತ್ಯ ಅಭಿವ್ಯಕ್ತಿ ಮಾಧ್ಯಮದ ಮೂಲಕ ಹೊರಗೆ ಹಾಕುವುದೇ ಆಗಿದೆ. ಇವರಂತೆ ಗ್ರಾಮೀಣ ಜೀವನದ ವಿವಿಧ ಮುಖಗಳನ್ನು ಸಮಗ್ರವಾಗಿ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ ಸಾಹಿತಿಗಳು ವಿರಳ. ಅಂತೆಯೇ 'ನಮ್ಮ ಊರಿನ ರಸಿಕರು' ಕೃತಿಗೆ ದೇವರಾಜ ಬಹದ್ದೂರ ಪುರಸ್ಕಾರ ದೊರೆತಿದ್ದರೆ, 'ಸಾಹಿತ್ಯರಶ್ಮಿ' ಮತ್ತು 'ವೀರಭದ್ರಾಚಾರಿ' ಕೃತಿಗಳಿಗೆ ಮೈಸೂರು ರಾಜ್ಯ ಸರಕಾರದ ಪ್ರಶಸ್ತಿ ಬಂದಿವೆ.

ಕಥೆ ಕಾದಂಬರಿಗಳು :

ಇವರು ಕಥೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. ಸುಮಾರು ೧೪೨ ಕ್ಕೂ ಮಿಕ್ಕಿ ಕಥೆಗಳನ್ನು ಪ್ರಕಟಿಸಿದ್ದಾರೆ. ಪ್ರಾಯಶಃ ಮಾಸ್ತಿಯವರನ್ನು ಬಿಟ್ಟರೆ ಇಷ್ಟೊಂದು ಕಥೆ ಬರೆದವರು ಗೊರೂರರೆಂದು ಕಾಣುತ್ತದೆ. ಸುಗಮವಾದ ಕಥನಶೈಲಿಯಿಂದ ಇವರ ಕಥೆಗಳು ಮನೋರಂಜನೆಯೊಡನೆ ಮನೋವಿಕಾಸ ಮಾಡುತ್ತವೆ. ೧) ಉಸುಬು (೧೯೫೪), ೨) ಕಥೆಗಳು ಮತ್ತು ವಿನೋದ ಚಿತ್ರ ಗಳು (೧೯೭೨), ೩) ಕನ್ಯಾಕುಮಾರಿ ಮತ್ತು ಇತರ ಕಥೆಗಳು (೧೯೬೭), ೪) ಕಮ್ಮಾರವೀರಭದ್ರಾಚಾರಿ (೧೯೫೯), ೫) ಕೊನಪ್ಪ ಕತೆಗಳು (೧೯೫೨), ೬) ಗೋಪುರದ ಬಾಗಿಲು (೧೯೬೪), ೭) ಬೆಸ್ತರ ಕರಿಯ (೧೯೪೭), ೮) ಮರೆಯಾದ ಮಾರಮ್ಮ ಮತ್ತು ಇತರ ಕಥೆಗಳು (೧೯೭೯), ೯) ವೈಯಾರಿ (೧೯೬೭) ೧೦ ಶಿವರಾತ್ರಿ (೧೯೪೭), ಇವು ಅವರ ಕೆಲವು ಪ್ರಮುಖ ಕಥಾ ಸಂಕಲನಗಳು. ಅನೇಕ ಕೃತಿಗಳು ಮೂರು ನಾಲ್ಕು ಆವೃತ್ತಿಗಳನ್ನು ಕಂಡಿವೆ.

ಹಾಗೆಯೇ ಕಾದಂಬರಿ ಬರೆಯುವುದರಲ್ಲಿ ಇವರ ಪ್ರತಿಭೆ ಮೆರೆದಿದೆ. ತಾವು ಬಾಳಿ ಬೆಳಗಿದ ಜೀವನಾಡಿಯಾದ 'ಹೇಮಾವತಿ' ನದಿಯ ಹೆಸರಿನಲ್ಲಿ ಕಾದಂಬರಿ ಸೃಷ್ಟಿಯಾಗಿದೆ. ಹೇಮಾವತಿ ನದಿಯ ದಟ್ಟ ಪರಿಸರದ ಪರಿಚಯ ಇಲ್ಲಿದೆ. ಹೇಮಾವತಿ ಸಂಸ್ಕೃತಿ ಇಲ್ಲಿ ಅರಳಿದರೂ ಒಂದು ಮೂಲೆಗೆ ಸೀಮಿತವಾದರೂ ಅವುಗಳಲ್ಲಿ ವಿಸ್ತೃತ ಪ್ರದೇಶವೊಂದರ ಗ್ರಾಮೀಣ ಸಂಸ್ಕೃತಿಯ ಪ್ರತಿಬಿಂಬವನ್ನು ಕಾಣಬಹುದು. ಅವರು ರಚಿಸಿದ ಕಾದಂಬರಿಗಳಿವು : ೧) ಊರ್ವಶಿ (೧೯೫೪) ೨) ಭೂತಯ್ಯನ ಮಗ ಅಯ್ಯು (೧೯೭೪), ೩) ಮಲೆನಾಡವರು (ಅನುವಾದಿತ ೧೯೪೮), ೪) ಮೆರವಣಿಗೆ (೧೯೪೭), ೫) ರಾಜನರ್ತಕಿ (ಅನುವಾದಿತ ೧೯೭೦), ೬) ಹೇಮಾವತಿ (೧೯೪೮) ೭) ಭಗವಾನ್ ಕೌಟಿಲ್ಯ (ಅನುವಾದಿತ ೧೯೭೦), ೮) ಕ್ರೌಂಚವಧೆ ಹಾಗೆ ನೋಡಿದರೆ 'ಭೂತಯ್ಯನ ಮಗ' ಕಿರುಕಾದಂಬರಿಯನ್ನು ಬಿಟ್ಟರೆ ಅವರ ಸ್ವತಂತ್ರ ಕಾದಂಬರಿಗಳು ಎರಡೇ. 'ಭೂತಯ್ಯನ ಮಗ ಅಯ್ಯು' ಚಲನಚಿತ್ರವಾಗಿ ಜನಪ್ರಿಯತೆ ಪಡೆದಿದೆ. ೧) ಉರ್ವಶಿ ೨) ಹೇಮಾವತಿ ಇವೇ ಅವರ ಸ್ವತಂತ್ರ ಕಾದಂಬರಿಗಳು. ಆ ಹೆಣ್ಣು ನಿರ್ಬಲಳು ಹಾಗೂ ನಿಸ್ಸಹಾಯಕಳು. ಸದಾ ಎಚ್ಚೆತ್ತ ವಿವೇಕ, ದೈವಾನುಗ್ರಹ ಮಾತ್ರ ಅವಳ ಶೀಲವನ್ನು ರಕ್ಷಿಸಬಲ್ಲುದು" ಎಂಬುದೇ ಕಾದಂಬರಿಯ ಸಾರಸರ್ವಸ್ವ. ಹೇಮಾವತಿ ನದಿ ಕಾದಂಬರಿಯ ಒಂದು ಅವಿಭಾಜ್ಯ ಅಂಗವಾಗಿ ಅದನ್ನು ಶಾಂತಿಗೊಳಿಸಿವೆ. ಹೇಮಾವತಿ ಎಂಬ ಹೆಣ್ಣಿನ ಸುತ್ತ ಹರಡಿದ ಇನ್ನೊಂದು ಕಾದಂಬರಿ (ಹೇಮಾವತಿ) ಅವಳ ಮೂಲಕ ಜೀವನದ ಹಾಡನ್ನು ರಸಮಯವಾಗಿ ಹಾಡಿದ್ದಾರೆ. ಡಾ|| ಗೊರೂರು 'ಭಗವಾನ್ ಕೌಟಿಲ್ಯ' ಮುನ್ಷಿಯವರ ಕಾದಂಬರಿ. ಭರತವರ್ಷದ ರಾಷ್ಟ್ರಪುರುಷನೊಬ್ಬನ ಜೀವನವನ್ನು ಮನಮುಟ್ಟುವಂತೆ ಚಿತ್ರಿಸುವ ಈ ಕಾದಂಬರಿ ಉಜ್ವಲ ರಾಷ್ಟ್ರಪ್ರೇಮಿಗಳಾದ ಗೊರೂರರ ಕೈಯಿಂದ ಕನ್ನಡಕ್ಕೆ ಬಂದುದು ಸುಯೋಗ. ಹೀಗೆ ಅನುವಾದ ಮಾಡುವಲ್ಲಿ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರರು ಪರಿಣತಮತಿಗಳು ಎಂಬುದಕ್ಕೆ ಅವರ ನಾಲ್ಕೂ ಅನುವಾದಿತ ಕಾದಂಬರಿಗಳು ನಮ್ಮ ಮುಂದಿವೆ.

ಪ್ರಬಂಧಗಳು ; ಜೀವನಚಿತ್ರಗಳು :

ಡಾ|| ರಾಮಸ್ವಾಮಿ ಅಯ್ಯಂಗಾರರು ಪೂರ್ಣ ಪಡೆದುದು ಪ್ರಬಂಧಗಳಲ್ಲಿಯೇ ಎನ್ನಬಹುದು. ಅವರ ಅಪಾರವಾದ ಜನಪ್ರಿಯತೆಗೆ ಪ್ರಬಂಧಗಳೇ ಬಹುಮಟ್ಟಿಗೆ ಕಾರಣವಾಗಿವೆ. ಅವುಗಳಲ್ಲಿ ನಾವು ಡಾ|| ಅಯ್ಯಂಗಾರರ

ನಿರ್ದಾಕ್ಷಿಣ್ಯ ಪ್ರವೃತ್ತಿ ಮತ್ತು ನಿರ್ಮಲವಾದ ಮನಸ್ಸನ್ನು ಕಾಣುತ್ತೇವೆ. ಅಲ್ಲಿ ಮೂಡಿಬಂದಿರುವ ವಿಡಂಬನೆಗಳು ಹಾಸ್ಯದ ಕಜ್ಜಾಯಗಳು, ಒಳ್ಳೆಯ ಆರಂಭ ಮತ್ತು ಒಳ್ಳೆಯ ಮುಕ್ತಾಯಗಳಿಗೆ ಹೆಸರಾಗಿವೆ. ಅಲ್ಲಿ ಆಕರ್ಷಣೆ ಇದೆ, ಬನಿಯಿದೆ; ಸೊಗಸಿದೆ; ಮಾರ್ಮಿಕವಾಗಿ ಹೇಳುವ ಜಾಣ್ಮೆಯಿದೆ. ಹೀಗಾಗಿ ಅವರ ಪ್ರಬಂಧಗಳು ಓದಿಸಿಕೊಂಡು ಹೋಗುತ್ತವೆ. ಭಾಷೆ ಜನ ಭಾಷೆಗೆ ಹತ್ತಿರವಾಗಿದೆ. 'ಇವು ಅವರ ಬದುಕಿನ ಪರಿಸರದ ಸಾಮಾಜಿಕ ಚರಿತ್ರೆಯನ್ನು ಕಡೆದಿಟ್ಟಿರುವ, ಕಡೆದಿಡುತ್ತಿರುವ ಚಿರಂತನ ಶಾಸನಗಳು ಎಂಬ ವಿಮರ್ಶಕರ ನುಡಿಮುತ್ತುಗಳು ಇಲ್ಲಿ ಗಮನಾರ್ಹ. ಅಂತೆಯೇ ಅವರು ಆಧುನಿಕ ಕನ್ನಡ ಸಾಹಿತ್ಯಶಿಲ್ಪಿಗಳು. ಪ್ರಬಂಧಗಳಲ್ಲಿ ಪ್ರಮುಖ ಸಂಕಲನಗಳನ್ನು ಹೀಗೆ ಸಂಕಲಿಸಬಹುದು. ೧) ಗರುಡಗಂಬದ ದಾಸಯ್ಯ (೧೯೩೯) ೨) ನಮ್ಮ ಊರಿನ ರಸಿಕರು (೧೯೭೫), ೩) ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು (೧೯೭೧), ೪) ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು (೬೬), ೫) ಹೊಸಗನ್ನಡ ಪ್ರಬಂಧ ಸಂಕಲನ (೧೯೬೧) ಜೀವನಚಿತ್ರಗಳನ್ನು ರೇಖಿಸುವುದರಲ್ಲಿಯೂ ಇವರ ಸೇವೆ ಸಂದಿದೆ. ೧) ಜಗತ್ತಿನ ಮಹದ್ವ್ಯಕ್ತಿಗಳು (೧೯೫೫), ೨) ಸತಿ ಕಸ್ತೂರಿಬಾ (೧೯೪೪), ೩) ಮೌಲಾನ ಅಬುಲ್ ಕಲಾಂ ಅಜಾದ್ (೧೯೫೩) ೪) ತಿರುಮಲಾರ್ಯ ಇವು ಅವರು ಬರೆದ ಕೆಲವು ವ್ಯಕ್ತಿ ಚಿತ್ರಗಳು.

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರರು ಸನಾತನ, ನೂತನ, ಮೂಡಣ-ಪಡುವಣಗಳ ಸಾಮರಸ್ಯದಿಂದ ಹಸನಾದ ವ್ಯಕ್ತಿತ್ವ. ಅಭಿಜಾತ ಶ್ರೇಷ್ಠ ಸಾಹಿತಿಗಳಾಗಿ ವಿಜೃಂಭಿಸುತ್ತಾರೆ. ಈ ಅದಮ್ಯಚೇತನ ತನ್ನ ಕಿಟಕಿ ಬಾಗಿಲುಗಳನ್ನೆಲ್ಲ ತೆರೆದಿಟ್ಟು ಎಲ್ಲೆಡೆಗಳಿಂದ ಗಾಳಿ ಬೆಳಕುಗಳನ್ನು ಬರಮಾಡಿಕೊಳ್ಳುವಂಥದು. ಈ ಮಾತಿಗೆ 'ಸಾಹಿತ್ಯರಶ್ಮಿ' ನಿದರ್ಶನ. ಜೀವನದ ಹಲವಾರು ಮುಖಗಳಾದ ಸಾಹಿತ್ಯ, ಶಿಲ್ಪಕಲೆ, ಶಿಕ್ಷಣ, ವೃತ್ತಪತ್ರಿಕೆ, ಜೀವನತತ್ವ ಹೀಗೆ ಹಲವು ಹನ್ನೊಂದು ವಿಷಯಗಳ ಮೇಲೆ ವೈಚಾರಿಕ ವಿಶ್ಲೇಷಣೆ ಮಾಡಿರುವುದನ್ನು ನೋಡಿದರೆ, ಅವರ ಪಾಂಡಿತ್ಯ, ಪ್ರತಿಭೆ ಗೋಚರಿಸದಿರದು, 'ಸಾಹಿತ್ಯದ ಜೀವಾಳ' ಎಂಬುದು ಷೋಪನ್‌ಹೌರನ ನಾಲ್ಕೂ ಪ್ರಬಂಧಗಳ ಅನುವಾದ. ಪಾಶ್ಚಾತ್ಯ ತತ್ವ ಶಾಸ್ತ್ರಜ್ಞನೊಬ್ಬನ ಸಾಹಿತ್ಯವನ್ನು ಕುರಿತಾದ ಆಲೋಚನೆಗಳಿಲ್ಲಿವೆ. ಭಾರತದ ಭಾಗ್ಯವಿಧಾತ 'ಗೊರೂರರ ಸಾಹಿತ್ಯ ಸೃಷ್ಟಿಯ ವೈವಿಧ್ಯದಲ್ಲಿ ಸತ್ವಶಾಲಿಯಾಗಿ ಉಳಿಯುವ ವಿಶಿಷ್ಟ ಕೃತಿ'ಯೆಂದು ತಿಪ್ಪೇರುದ್ರಸ್ವಾಮಿ ವರ್ಣಿಸಿದ್ದಾರೆ. ಇದರಲ್ಲಿ ಗಾಂಧೀಜಿಯವರ ಜೀವನದ ಬಹುಮುಖಗಳನ್ನು

ಕಾಣಬಹುದು. ಅಂತೆಯೇ 'ಮಹಾತ್ಮಾಗಾಂಧಿಯವರ ದಕ್ಷಿಣಯಾತ್ರೆ' 'ಮಹಾದೇವದೇಸಾಯಿಯವರ ಕೃತಿಗಳು' ಹೆಸರಿಸಬೇಕಾಗಿದೆ. ಅವು ಗೊರೂರರರು ಕಟ್ಟಾ ಗಾಂಧೀವಾದಿಗಳೆಂದು ಸಾರುತ್ತವೆ.

ಜಾನಪದ ತಜ್ಞರು

ಜಾನಪದ ಸಾಹಿತ್ಯವನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡುವವರಲ್ಲಿ ಡಾ॥ ಗೊರೂರು ಒಬ್ಬರು. 'ಹಳ್ಳಿಯ ಹಾಡುಗಳು' ಅವರ ಉತ್ತಮ ಗೀತಸಂಕಲನ (೧೯೩೮), 'ಹಳ್ಳಿಯ ಬಾಳು' (೧೯೪೩) ನಮ್ಮ ದೇಶದ ರೈತನ ಬದುಕಿನ ಮೇಲೆ ಬೆಳಕು ಚೆಲ್ಲುವ ಕೃತಿ. ಮೂರನೆಯ ಸಂಗ್ರಹವೇ 'ಜನಪದ ಜೀವನ ಮತ್ತು ದರ್ಶನ' (೧೯೭೪), ಇದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪರವಾಗಿ ಮಾಡಿದ ಮೂರು ಉಪನ್ಯಾಸಗಳ ವಿಸ್ತೃತ ರೂಪ. ನಾಲ್ಕೂ ದಶಕಗಳ ಅವಿರತ ತಪಸ್ಸಿನ ನವನೀತ. ಜಾನಪದವನ್ನು ಕುರಿತು ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಅವುಗಳ ಸಂಗ್ರಹವಾದರೆ ಕನ್ನಡ ಜಾನಪದ ಭಂಡಾರ ಸಂಪದ್ಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ೧೯೭೧ರ ತೃತೀಯ ಜಾನಪದ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿದ್ದರು.

ವಿಧಾನಪರಿಷತ್ತಿನ ಸದಸ್ಯರು; ವಿಶ್ವವಿದ್ಯಾಲಯದ ಸೆನೇಟರರು

ಸಾಮಾಜಿಕ, ಶೈಕ್ಷಣಿಕರಂಗದಲ್ಲಿಯೂ ಇವರು ದುಡಿದಿದ್ದಾರೆ. ೧೯೫೨ ರಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ ನಾಮಕರಣಗೊಂಡರು. ಸಭೆಯ ಕಾರ್ಯಗಳಲ್ಲಿ ಶ್ರದ್ಧೆಯಿಂದ ಭಾಗವಹಿಸಿದರು. ಹಾಗೆಯೇ ಶಾಸನಸಭೆಗಳಿಂದ ವಿಶ್ವವಿದ್ಯಾಲಯದ ಸೆನೇಟರರಾಗಿ ಆಯ್ಕೆ ಹೊಂದಿದರು. ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದಾಗ ಮತ್ತೊಂದು ಅವಧಿಗೆ ವಿಧಾನ ಪರಿಷತ್ತಿಗೆ ನಾಮಕರಣಗೊಂಡರು. ಹೀಗೆ ಅವರ ವ್ಯಕ್ತಿತ್ವ ಬಹುಮುಖವಾಗಿದೆ.

ಅಮೆರಿಕದಲ್ಲಿ ಗೊರೂರು :

ಇದೊಂದು ಉತ್ತಮ ಪ್ರವಾಸಿ ಸಾಹಿತ್ಯ ಗ್ರಂಥ. ಇತ್ತೀಚೆಗೆ ಸಪತ್ನಿತರಾಗಿ ಅಮೆರಿಕವನ್ನು ಸಂಚರಿಸಿ ಬರೆದ ಕೃತಿ. ಈ ಕೃತಿಯ ಬಗೆಗೆ ಹೀಗೆ ಬರೆದಿದ್ದಾರೆ. "ಡಾ॥ ಗೊರೂರು ಶ್ರೋತ್ರಿಯರು, ಸಂಪ್ರದಾಯಸ್ಥರು, ವಯೋವೃದ್ಧರು. ಇಂಥವರು ಮಡದಿಯೊಡನೆ ಅಮೆರಿಕದ ಪ್ರವಾಸ ಮುಗಿಸಿಕೊಂಡು ಹಿಂತಿರುಗಿದ

ರೆಂದ ಮೇಲೆ ಸಹಜವಾಗಿಯೇ ಅವರ ಅನುಭವಕ್ಕೆ ವಿಶೇಷತೆ ಬಂದಿದೆ. ಅವರು ಅಲ್ಲಿ ಪಟ್ಟ ಪಾಡುಗಳು ಇಲ್ಲಿ ಹಾಡಾಗಿ ಮರುಹುಟ್ಟು ಪಡೆದಿವೆ. ಅವರ ಕವಿ ಹೃದಯ, ಜೀವನವನ್ನು ನೋಡುವ ಹಾಸ್ಯದೃಷ್ಟಿ, ಸಮಸ್ಯೆಗಳನ್ನು ಸರಸವಾಗಿ ಬಿಡಿಸಿ ವಿವರಿಸಬಲ್ಲ ಸಾಮರ್ಥ್ಯ ಇವೆಲ್ಲ ಇಲ್ಲಿ ಮುಪ್ಪುರಿಗೊಂಡಿವೆ. ನಾಗರಿಕತೆಯ ಶಿಖರಸ್ಥಿತಿಯಲ್ಲಿರುವ ಅಮೆರಿಕದ ಜನಜೀವನದ ದಟ್ಟ ಪರಿಚಯವಿದೆ. ಆ ಜನ ಸಾಧಿಸಿರುವ ಯಾಂತ್ರಿಕ, ವೈಜ್ಞಾನಿಕ, ಲೌಕಿಕ ಸೌಲಭ್ಯಗಳನ್ನು ಅವುಗಳ ಒಟ್ಟು ಪರಿಣಾಮ ಹಾಗೂ ಪ್ರಭಾವಗಳನ್ನು ಸರಳವಾಗಿ ನಿರೂಪಿಸುವ ಬೃಹತ್ಕೃತಿಯಿದು. ಹೀಗೆ ಹಲವಂದು ದೃಷ್ಟಿಯಿಂದ ಸ್ವಾರಸ್ಯಕರವಾಗಿರುವ ಈ ಪ್ರವಾಸ ಕಥನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. (೧೯೮೦) ಇದೀಗ ಅದರ ಎರಡನೆಯ ಆವೃತ್ತಿ ಬಂದಿದೆ. ಪದವಿ ಪರೀಕ್ಷೆಗೆ ಪಠ್ಯಪುಸ್ತಕವಾಗಿದೆ. ನಿಜವಾಗಿಯೂ ಇದೊಂದು ಅಪೂರ್ವ ಪ್ರವಾಸ ಕಥನ.

ವ್ಯಕ್ತಿ ವೈಶಿಷ್ಟ್ಯ

ಬಹುಮುಖ ವ್ಯಕ್ತಿತ್ವದಿಂದ ಈ ನಾಡುನುಡಿಗೆ ಅಮೋಘ ಸೇವೆ ಸಲ್ಲಿಸಿದ ಡಾ॥ ಗೊರೂರಿಗೆ ೭೮ ವರುಷಗಳು ತುಂಬಿವೆ. ಆದರೂ ತರುಣರನ್ನೂ ನಾಚಿಸುವ ಚೈತನ್ಯದ ಚಿಲುಮೆಯಾಗಿದ್ದಾರೆ; ಉತ್ಸಾಹದ ಕಾರಂಜಿಯಾಗಿದ್ದಾರೆ. ಇಂದಿಗೂ ಅಪ್ಪಟ ಖಾದಿಧಾರಿ. ಸರಳತೆಗೆ ಸೌಜನ್ಯತೆಗೆ ಇನ್ನೊಂದು ಹೆಸರು. ಎರಡು ವರುಷಗಳ ಹಿಂದೆ ರಾಷ್ಟ್ರೋತ್ಥಾನ ಪರಿಷತ್ತಿನ 'ಭಾರತ ಭಾರತಿ' ಶೀರ್ಷಿಕೆಗಳ ಗ್ರಂಥ ಸಮಾಪ್ತಿ ಸಮಾರಂಭದ ಸಂದರ್ಭದಲ್ಲಿ ಅವರನ್ನು ಸಂದರ್ಶಿಸುವ ಸೌಭಾಗ್ಯ ನನಗೊದಗಿಬಂದಿತ್ತು. ನನ್ನ ಹೆಗಲ ಮೇಲೆ ಕೈಹಾಕಿ ಅತ್ಯಂತ ವಾತ್ಸಲ್ಯದಿಂದ ನನ್ನ ಕ್ಷೇಮ ಸಮಾಚಾರ ವಿಚಾರಿಸಿಕೊಂಡ ಸನ್ನಿವೇಶ ಮರೆಯದಂತಹದು. ಇದೇ ನವೆಂಬರ್ ಒಂದರ ರಾಜ್ಯೋದಯದ ಸಂದರ್ಭದಲ್ಲಿ ಅವರನ್ನು ಸರಕಾರ ಸನ್ಮಾನ ಸಮಾರಂಭ ಏರ್ಪಡಿಸಿ ಸತ್ಕರಿಸಿದೆ. ಇಂಥವರು ಕಳೆದ ತಿಂಗಳು ಸಿರ್ಸಿಯಲ್ಲಿ ನೆರವೇರಿದ ೫೫ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದುದು ಅಭಿಮಾನದ ವಿಷಯ.

ಎಸ್. ಎಸ್. ಭೂಸರಡ್ಡಿ

ಆರೋಗ್ಯವೇ ಜಯ; ಅನಾರೋಗ್ಯವೇ ಸೋಲು.

—ಕಾರ್ಲೈಲ್

ಗರ್ಭಿಣಿಯರ ಬಗ್ಗೆ ವಹಿಸಬೇಕಾದ ಜಾಗರೂಕತೆ

ದೇಶದ ಮುಂದಿನ ಪೀಳಿಗೆಯನ್ನು ಧರಣಿಗೆ ತರುವ ತಾಯಂದಿರ ಕಲ್ಯಾಣಕ್ಕೆ ಸರ್ಕಾರದವರು ಭಾರತಾದ್ಯಂತ ಬಹಳ ಊರುಗಳಲ್ಲಿ ಹೆರಿಗೆ ಆಸ್ಪತ್ರೆ, ಪ್ರಥಮ ಆರೋಗ್ಯ ಕೇಂದ್ರ (PHC) ಮತ್ತು ಉಪಕೇಂದ್ರಗಳನ್ನು ಕಟ್ಟಿ ತರಪೇತು ಹೊಂದಿದ ಸಿಬ್ಬಂದಿಯನ್ನು ನೇಮಿಸಿದ್ದಾರೆ. ಭಾರತ ಬೆಳೆಯುತ್ತಿರುವ ಬಡದೇಶ. ಆರೋಗ್ಯ, ಕುಟುಂಬ ಕಲ್ಯಾಣ, ಕುಟುಂಬ ಯೋಜನೆಗಳು ರಾಷ್ಟ್ರನೀತಿಯಾಗಿ ಪ್ರಾಮುಖ್ಯತೆ ಪಡೆದಿವೆ. ೧೮೮೦ರಲ್ಲಿ ಲೂಯಿಪ್ಯಾಶ್ಚರನು ಕ್ರಿಮಿಗಳಿಂದ ರೋಗಗಳುಂಟಾಗುವುದನ್ನು ಕಂಡು ಹಿಡಿಯುವವರೆಗೆ ಲೋಕದಲ್ಲಿ ಶುಚಿ ಆರೋಗ್ಯಗಳ ಹತ್ತಿರ ಸಂಬಂಧ ಗೊತ್ತಿಲ್ಲದೆ ಯೂರೋಪ್ ಮತ್ತು ಇತರ ದೇಶಗಳಲ್ಲಿ ಬಹಳ ಸ್ತ್ರೀಯರೂ ಅವರು ಹೆತ್ತ ಮಕ್ಕಳೂ ಹೆರಿಗೆ ಬಾಣಂತಿ ಕಾಲಗಳಲ್ಲಿ ಸಾಯುತ್ತಿದ್ದರು. ಈಚಿನ ವರ್ಷಗಳಲ್ಲಿ ಗರ್ಭಿಣಿ ಬಾಣಂತಿಯರ ಮರಣಸಂಖ್ಯೆ ಬಹಳ ಇಳಿದಿದೆ.

ಭಾರತದಲ್ಲಿ ಶೇ. ೮೦ರಷ್ಟು ಜನರು ಹಳ್ಳಿಗಳಲ್ಲಿದ್ದಾರೆ. ವೈದ್ಯತಜ್ಞರ ಸಹಾಯ ಬೇಕಾದಾಗ ರೋಗಿಗಳನ್ನು ಅವರಲ್ಲಿಗೆ ಆರೋಗ್ಯ ಕೇಂದ್ರಗಳಿಂದ ಕಳುಹಿಸಲಾಗುತ್ತದೆ. ಗರ್ಭಿಣಿಯರ ಬಗ್ಗೆ ಕಾಳಜಿಯ ಮುಖ್ಯ ಉದ್ದಿಶ್ಯ ಅವರ ಆರೋಗ ಕಾಪಾಡಿ ಅವರಿಗೆ ಅಪಾಯವಿಲ್ಲದ ಹೆರಿಗೆಯಾಗಿ ಆರೋಗ್ಯವುಳ್ಳ ಕೂಸಿಗೆ ಜನ್ಮ ಕೊಡುವುದು. ಅದಕ್ಕೆ ಗರ್ಭಿಣಿಯರು ಪ್ರಸೂತಿ ತಂತ್ರದಲ್ಲಿ ತಜ್ಞರಾದ ವೈದ್ಯರ ಪರೀಕ್ಷೆಗೆ, ೮ ತಿಂಗಳವರೆಗೆ ತಿಂಗಳಿಗೊಂದು ಸಲ, ೯ ನೇ ತಿಂಗಳು ವಾರಕ್ಕೊಂದು ಸಲ, ಒಳಗಾಗಿ ಅವರ ಸಲಹೆಪಡೆದು ಅದರಂತೆ ನಡೆಯಬೇಕು.

ಸಣ್ಣ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಂಡು ಗರ್ಭಿಣಿಯರು ಬರಿದೇ ಮರುಗಬಾರದು. ಪರದಾಟದಿಂದ ಹಲವರಿಗೆ ಗರ್ಭಪಾತವಾಗಿ ಹಾಸಿಗೆ ಹಿಡಿದು ಗೃಹಕೃತ್ಯ ಅಸ್ತವ್ಯಸ್ತವಾಗುತ್ತದೆ. ಗರ್ಭಿಣಿಯರು ಶಾಂತಿ ಚಿತ್ತರಾಗಿರಬೇಕು. ಸಣ್ಣತೊಂದರೆಗಳಿಗೆ ಬೇಕಾದ ಚಿಕಿತ್ಸೆ ಪಡೆಯಬೇಕೆ ಹೊರತು ಸುಮ್ಮನೆ ಗಾಬರಿ ಗೊಳ್ಳಬಾರದು.

ಆಹಾರ: ಗರ್ಭಿಣಿಯ ಊಟ ಹಗುರವಾಗಿ ಪುಷ್ಟಿಕರವಾಗಿರಬೇಕು. ಅತಿಕಮ್ಮಿ ಅಥವಾ ಅತಿ ಹೆಚ್ಚು ತಿನ್ನಬಾರದು. ದಪ್ಪಗಿರುವವರು ಹೆಚ್ಚು ತಿನ್ನಲೇಬಾರದು. ಉಪ್ಪು ಆದಷ್ಟು ಕಮ್ಮಿ ಇರಬೇಕು. ಸೊಪ್ಪು ಹೆಚ್ಚಿದ್ದಷ್ಟು ಆವಶ್ಯವಾದ ಕಬ್ಬಿಣಾಂಶ ದೇಹಸೇರಿ ರಕ್ತ ಕೆಂಪಗೆ ಪುಷ್ಟಿಕರವಾಗಿರುತ್ತದೆ.

ಹಣ್ಣು ತರಕಾರಿಯಿಂದ ದೇಹಕ್ಕೆ ಬೇಕಾದ ಖನಿಜ ಮತ್ತು ಜೀವಸತ್ವಗಳು ಸಿಗುತ್ತವೆ ಮತ್ತು ಮಲಬದ್ಧತೆಯಾಗುವುದಿಲ್ಲ. ತುಪ್ಪ, ಕೊಬ್ಬುಗಳು ಆದಷ್ಟು ಕಮ್ಮಿಯಿರಬೇಕು. ದಿನಕ್ಕೆ ಅರ್ಧ ಲೀಟರ್ ಹಾಲು ಕುಡಿಯಬೇಕು. ಮಾಂಸ, ಮೀನು, ಮೊಟ್ಟೆ, ಬ್ರೆಡ್, ಅನ್ನ, ಮೊಸರು, ಆಹಾರದಲ್ಲಿದ್ದರೆ ಒಳ್ಳೆಯದು. ತನಗೇ ಅಲ್ಲದೆ ಗರ್ಭಿಣಿ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಶಿಶುವಿಗೂ ಪುಷ್ಟಿ ಒದಗಿಸಬೇಕು. ಪುಷ್ಟಿ ಸಾಲದಿದ್ದರೆ ಮಗು ಕೃಶವಾಗಿ ಹುಟ್ಟುವುದು, ಗರ್ಭಪಾತವಾಗುವುದು, ೭ ತಿಂಗಳಿಗೆ ಹೆರಿಗೆಯಾಗುವುದು ಇತ್ಯಾದಿ ತೊಂದರೆಗಳಾಗುತ್ತವೆ. ಬಿಳಿಚಿಕೊಳ್ಳದಿರಲು ಕಬ್ಬಿಣಾಂಶವಿರುವ ಮಾತ್ರೆಗಳನ್ನು ದಿನಕ್ಕೆ ಎರಡರಂತೆ, ವೈದ್ಯರು ಹೇಳಿದರೆ ಜೀವಸತ್ವಗಳಿರುವ ಮಾತ್ರೆಯನ್ನು ನುಂಗಬೇಕು.

ಸ್ತನಗಳ ಆರೈಕೆ: ಬಸುರಿಯಲ್ಲಿ ಸ್ತನಗಳು ದೊಡ್ಡವಾಗುತ್ತವೆ. ಅವುಗಳ ಮೇಲೆ ಒತ್ತಡ ಬೀಳದಂಥ ಉಡುಪಿರಬೇಕು. ಬಿಗಿಯಾಗಿ ಕಟ್ಟಬಾರದು. ಅವು ಹೆಚ್ಚು ಭಾರವಾದರೆ ಸ್ವಲ್ಪ ಬಿಗಿಯುಳ್ಳ ಆಧಾರ (ಬ್ರೇಸಿಯರ್) ಕೊಡಬೇಕು. ಕೊನೆ ತಿಂಗಳಲ್ಲಿ ದಿನವೂ ತೊಟ್ಟುಗಳನ್ನು ಸಾಬೂನಿನಿಂದ ತೊಳೆದು ಎಳೆಯಬೇಕು. ಬಿರುಕುಗಳಿದ್ದರೆ ಶುಚಿಯಾದ ಎಣ್ಣೆ ತುಸು ಸವರಬೇಕು.

ಗರ್ಭಿಣಿಯರಿಗೆ ಆಯಾಸವಾಗುವ ಕೆಲಸ ಕೂಡದು. ಆದರೆ ಸುಮಾರು ವ್ಯಾಯಾಮ ಲಾಭಕರ. ಉಡುಪು ಹಗುರ ಹಾಗೂ ಅನುಕೂಲದ್ದಾಗಿರಬೇಕು. ನಿತ್ಯಸ್ನಾನವಿರಬೇಕು. ಗರ್ಭದ ಮೊದಲವಾರಗಳಲ್ಲಿ ಹಾಗೂ ಕಡೇವಾರಗಳಲ್ಲಿ ಸಂಭೋಗವರ್ಜ್ಯ ಮಧ್ಯ ದಿನಗಳಲ್ಲಿ ಮಿತವಾಗಿರಬೇಕು, ಹೆಚ್ಚಾದರೆ ಹೊಟ್ಟೆ ನೋವಾಗಿ ಪಿಂಡ ಇಳಿಯಬಹುದು. ಮಲಬದ್ಧತೆಯಿದ್ದರೆ ರಾತ್ರಿ ಮಲಗುವಾಗ ೧–೨ ಚಮಚ ಪ್ಯಾರಫಿನ್ ಎಣ್ಣೆ ಕುಡಿಯಬೇಕು. ಇತರ ಭೇದಿ ಔಷಧಿಗಳನ್ನು ನುಂಗಬಾರದು. ತಿನ್ನುವುದನ್ನು ಕ್ರಮಪಡಿಸಿಕೊಳ್ಳುವುದರಿಂದ ಕಾಲಪ್ರವೃತ್ತಿ ಕ್ರಮಗೊಳ್ಳುವುದು. ಮನಸ್ಸು ಸದಾ ಪ್ರಸನ್ನವಾಗಿರಬೇಕು. ಕೋಪಗೊಳ್ಳಬಾರದು, ಅಳಬಾರದು, ಹೊಟ್ಟೆಹುಣ್ಣಾಗುವಂತೆ ನಗಬಾರದು. ಬಸಿರು, ಹೆರಿಗೆ, ಬಾಣಂತಿತನಗಳು ರೋಗಗಳಲ್ಲ; ಸ್ತ್ರೀಯರಿಗೆ ನೈಸರ್ಗಿಕವಾದವು ಮತ್ತು ಹೆಮ್ಮೆ, ಆನಂದ ತರುವಂತವು, ತಾಯ್ತನದ ಹಂಬಲಿನ ಪುಸ್ತಕಗಳನ್ನೋದಬೇಕು ಅಥವಾ ಓದಿಸಿ ಕೇಳಬೇಕು. ಗರ್ಭಧರಿಸಿದ ಹೆಮ್ಮೆ, ತೃಪ್ತಿ, ಆನಂದಗಳಿರಬೇಕು.

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವಾಂತಿಭೇದಿ, ವಿಷಮಶೀತಜ್ವರ ಇತ್ಯಾದಿ ಸೋಂಕುರೋಗಗಳಿಗೆ ರಕ್ಷಣೆಕೊಡುವ ಇಂಜೆಕ್ಷನ್‌ಗಳನ್ನು

ಪಡೆಯಬೇಕು. ಭಾರತದಂಥ ಉಷ್ಣ ದೇಶದಲ್ಲಿ ಬಾಣಂತಿಯರಿಗೆ ಧನುರ್ವಾಯು ಬರಬಹುದು. ಅದಕ್ಕೆ ರಕ್ಷಣೆಕೊಡುವ ಟಿಟನಸ್ ಸೂಜಿ ಮದ್ದನ್ನು ಪಡೆಯಬೇಕು. ಗರ್ಭಿಣಿ ತೆಗೆದುಕೊಳ್ಳುವ ಸೂಜಿ ಮದ್ದುಗಳಿಂದ ತನ್ನ ಹೊಟ್ಟೆಯಲ್ಲಿರುವ ಕಂದನಿಗೂ ಕೆಲವು ತಿಂಗಳು ಆ ರೋಗಗಳ ವಿರುದ್ಧ ರಕ್ಷಣೆ ಸಿಗಬಹುದು.

ರಕ್ತಸ್ರಾವ, ಕಮ್ಮಿಮೂತ್ರ, ಕಾಲೂತ, ಬಿಡದ ತಲೆನೋವು, ದೃಷ್ಟಿಮಾಂದ್ಯ, ಜಾಗರಣೆ, ಕಾಲುಗಳ ಹಿಡಿತ, ಗರ್ಭಕೋಶದ ನೋಯುವ ಸಂಕೋಚ, ಗರ್ಭದ ನೀರು ಆಚೆ ಬರುವುದು ಮುಂತಾದ ತೊಂದರೆಗಳನ್ನು ವೈದ್ಯಶಾಲೆಗೆ ಗರ್ಭಿಣಿ ಹೋದಾಗ ಪ್ರಸವ ವೈದ್ಯೆಗೆ ತಿಳಿಸಬೇಕು. ತನಗೆ ಹೆರಿಗೆಯಾಗುವ ಕಾಲವನ್ನು ತಿಳಿದು, ಆ ಕಾಲಕ್ಕೆ ಸರಿಯಾಗಿ ಹೆರಿಗೆ ಆಸ್ಪತ್ರೆಗೆ ಸೇರಿಕೊಳ್ಳಬೇಕು.

ಸುರಕ್ಷಿತ ಹೆರಿಗೆ ಹಾಗೂ ಬಾಣಂತಿತನ ಗರ್ಭಿಣಿಗೆ ನಡೆಯುವಂತೆ ಎಚ್ಚರಿಕೆ ವಹಿಸಬೇಕು. ಹೆರಿಗೆ ಕಾಲದಲ್ಲಿ ಉಚಿತ ವೈದ್ಯರಿಲ್ಲದೆ ಹೆಚ್ಚುಕಮ್ಮಿಯಾದಲ್ಲಿ ಆ ಮೇಲೆ ಏನು ಮಾಡುವುದಕ್ಕೂ ಕಷ್ಟವಾಗುತ್ತದೆ. ಬಹಳ ವೈದ್ಯರು ಸಾಮಾನ್ಯ ಹೆರಿಗೆಗಳನ್ನು ನಡೆಸಬಲ್ಲರು. ಆದರೆ ತೊಂದರೆ ಕೊಡುವ ಕಷ್ಟದ ಹೆರಿಗೆಗೆ ಪ್ರಸೂತಿ ವೈದ್ಯತಜ್ಞರು ಬೇಕಾಗುತ್ತಾರೆ. ತೊಂದರೆಗೊಳಗಾಗಬಹುದಾದ ಗರ್ಭಿಣಿಯನ್ನು ತಜ್ಞರು ಮೊದಲೇ ಬೇರ್ಪಡಿಸಿ ಅವರಿಗೆ ಬೇಕಾದ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳುವರು. ಹೀಗೆ ತೊಂದರೆಗೊಳಗಾಗುವರನ್ನು ಮೊದಲೇ ಆರಿಸಿ ಸೂಕ್ತ ಮುಂಜಾಗ್ರತೆ ವಹಿಸುವುದರಿಂದ ಹೆರಿಗೆ ವೈದ್ಯಶಾಲೆಗಳಲ್ಲಾಗಬಹುದಾದ ಬಹು ಮರಣಗಳನ್ನು ತಜ್ಞರು ತಪ್ಪಿಸುತ್ತಾರೆ.

ವೈದ್ಯ ಪರೀಕ್ಷೆಗೆ ಮೊದಲು ಬೇಕಾದ ಮಾಹಿತಿಗಳು

ತೊಂದರೆಗಳನ್ನು ಕಂಡು ಹಿಡಿದು ರೋಗವನ್ನು ಗುರ್ತಿಸುವುದು ಪತ್ತೇದಾರಿ ಸಾಹಸವಿದ್ದಂತೆ. ಮೊದಲು ಮುಚ್ಚುಮರೆಯಿಲ್ಲದೆ ಪ್ರಶ್ನೆಗಳಿಗೆ ಸರಿಯಾದ ಉತ್ತರಕೊಡುವುದರಿಂದ ವೈದ್ಯೆಗೆ ತೊಂದರೆಗಳ ನಿಜವಾದ ಸುಳಿವು, ಕಾರಣಸ್ವಭಾವಗಳು ತಿಳಿಯುತ್ತವೆ.

ಸಾಮಾನ್ಯ ಚರಿತ್ರೆ : ವಯಸ್ಸು, ಮಕ್ಕಳ ಸಂಖ್ಯೆ, ಗರ್ಭಗಳ ಸಂಖ್ಯೆ, ಮುಟ್ಟಿನ ತೊಂದರೆ ಮತ್ತು ಕ್ರಮ, ಮನೆಯವರ ತೊಂದರೆಗಳು, ತಾಯಿ ತಂದೆಗಳ ವಿಚಾರ ಇತ್ಯಾದಿಗಳಿಂದ ವೈದ್ಯೆಗೆ ಸಹಾಯವಾಗುತ್ತದೆ. ಸಕ್ಕರೆ

ರೋಗ, ರಕ್ತದೊತ್ತಡ ಮೊದಲಾದ ತೊಂದರೆಗಳಿದ್ದರೆ ತಿಳಿಸಿದಾಗ ನಿಜ ಸಮಸ್ಯೆ ತಿಳಿಯುತ್ತದೆ.

ಹೆರಿಗೆ ಚರಿತ್ರೆ: ಹಿಂದಿನ ಹೆರಿಗೆ ಕಷ್ಟಗಳು, ಗರ್ಭಪಾತ, ಸತ್ತಮಗು ಹುಟ್ಟಿದುದು, ರಕ್ತಸ್ರಾವ, ಬಾಣಂತಿ ಕಾಲದ ತೊಂದರೆಗಳು ಮುಂತಾದವಿದ್ದರೆ ತಿಳಿಸಬೇಕು.

ಪ್ರಸ್ತುತ ಗರ್ಭದ ಚರಿತ್ರೆ: ಕೊನೆಮುಟ್ಟು (ತೊಂದರೆಗಳು?) ವಾಂತಿ, ಓಕರಿಕೆ, ಕಾಲೂತ, ಮುಖದೂತ, ಮಲಬದ್ಧತೆ, ಜಾಗರಣೆಗಳಿದ್ದರೆ ವೈದ್ಯರಿಗೆ ತಿಳಿಸಬೇಕು.

ವೈದ್ಯ ಪರೀಕ್ಷೆಗಳು:

ಸಾಮಾನ್ಯ ವೈದ್ಯಪರೀಕ್ಷೆ: ನಾಡಿ, ಹೃದಯ ಶಬ್ದಗಳು, ಶ್ವಾಸವೇಗ, ಜೀರ್ಣ ಮತ್ತು ಇತರ ಅಂಗಗಳ ವಿಚಾರ. ಎತ್ತರ, ತೂಕ, ರಕ್ತದೊತ್ತಡ ಮುಂತಾದ ವಿವರಗಳು. ಉದಾ:—ಕುಳ್ಳಾದವರ ಅಸ್ಥಿಶ್ರೋಣಿ ಚಿಕ್ಕದಾಗಿರುತ್ತದೆ. ಆದರೆ ಅವರ ಮಕ್ಕಳೂ ಸಾಮಾನ್ಯವಾಗಿ ಸಣ್ಣಗಿರವುದರಿಂದ ತೊಂದರೆಯಿರುವುದಿಲ್ಲ. ತೂಕ ಸಾಧರಣವಾಗಿ ಒಂದು ವಾರಕ್ಕೆ ಅರ್ಧ ಕೆ.ಜಿ. ಹೆಚ್ಚುತ್ತದೆ. ಅದಕ್ಕಿಂತ ಹೆಚ್ಚು ಹೆಚ್ಚಿದರೆ ಸಂದೇಹಕ್ಕಾಸ್ಪದ.

ರಕ್ತದೊತ್ತಡ: ಗರ್ಭಿಣಿ ಪ್ರತಿಸಲ ಹೆರಿಗೆ ವೈದ್ಯಶಾಲೆಗೆ ಹೋದಾಗ, ರಕ್ತದೊತ್ತಡ ಅಳೆಯಲಾಗುತ್ತದೆ. ಏರು ಒತ್ತಡ ಗರ್ಭ ನಂಜಿನ ಚಿಹ್ನೆಯಿರಬಹುದು.

ಹಲ್ಲು ಪರೀಕ್ಷೆ: ಹಲ್ಲಿನ ತೊಂದರೆಯಿದ್ದರೆ ಔಷಧಿ ಚಿಕಿತ್ಸೆಯಾಗಬೇಕು.

ಸ್ತನಗಳು, ತೊಲೆ ತೊಟ್ಟುಗಳು: ತೊಂದರೆಯಿದ್ದರೆ ಚಿಕಿತ್ಸೆಯಾಗಬೇಕು.

. **ಗರ್ಭಾಶಯ**: ಎತ್ತರ, ಹೆಚ್ಚು ನೀರು? ಅರ್ಬುದ? ಇತರ ಅಕ್ರಮಗಳು,


ಉದರ ಪರೀಕ್ಷೆ: ಶಿಶುವಿನ ಭಂಗಿ ಸಾಮಾನ್ಯವೇ ಅಸಾಮಾನ್ಯವೆ. ೩೪–೩೬ ವಾರಗಳಾಗಿದ್ದರೆ ತಪ್ಪುಭಂಗಿಯನ್ನು ಸರಿಪಡಿಸದಿದ್ದರೆ ಹೆರಿಗೆಯಲ್ಲಿ ತೊಂದರೆಯಾಗುತ್ತದೆ.

ಅಸ್ಥಿಶ್ರೋಣಿ: ಚಿಕ್ಕದಾಗಿದ್ದರೆ ಮಗುವಿನ ತಲೆ ತೂರುವುದಿಲ್ಲ. ಹೊಟ್ಟೆ ಕುಯ್ದು ಮಗುವನ್ನು ಆಚೆ ತೆಗೆಯಬೇಕು. ಕ್ಷಕಿರಣದಿಂದ-ಅಸ್ಥಿಶ್ರೋಣಿ ಮಗುವಿನ ತಲೆ ಅಪ್ರಮಾಣಯುತವಾಗಿವಾಗಿರುವುದು ತಿಳಿಯುತ್ತದೆ.

ಯೋನಿಪರೀಕ್ಷೆ: ನಿಜವಾದ ಗರ್ಭವೇ? ಗರ್ಭಾಶಯ ಬಹಿರ್ಗರ್ಭವೇ? ಅರ್ಬುದವೇ? ಮುಂತಾದ ವಿಷಯಗಳು ತಿಳಿಯುತ್ತವೆ.

ರಾಸಾಯನಿಕ ಪರೀಕ್ಷೆ: ಮೂತ್ರ ರಕ್ತಪರೀಕ್ಷೆಗಳಿಂದ ಅವುಗಳಲ್ಲಿರಬಹುದಾದ ವಿಪರೀತಗಳು ತಿಳಿಯುತ್ತವೆ. ಉದಾ:-ರಕ್ತರಂಗು ಕಮ್ಮಿಯಿದ್ದರೆ ಅದಕ್ಕೆ ಚಿಕಿತ್ಸೆ ಕೊಡಬಹುದು. ಇತರ ರಕ್ತಪರೀಕ್ಷೆಗಳಿಂದ ಕೆಲವು ಕಾಯಿಲೆಗಳಿರುವುದು ತಿಳಿದು ಚಿಕಿತ್ಸೆ ನೀಡಬಹುದು.

ಎಂ. ದಯಾಕರ



ಅಧಿಕಾರ ಎಂಬುದು ಮುಳ್ಳಿನ ಹಾಸಿಗೆ.

—ಷೇಕ್ಸ್‌ಪಿಯರ್

ವಿಶ್ವದ ಚರಿತ್ರೆಯ ಎಲ್ಲ ರೀತಿಯ ಅಪರಾಧಗಳನ್ನು ಎರಡು ಪದಗಳಲ್ಲಿ ಸಂಗ್ರಹಿಸಬಹುದು: ಅಧಿಕಾರದ ದುರುಪಯೋಗ.

—ಆರ್. ಜಿ. ಇಂಗರ್‌ಸಾಲ್

ಮಿಂಚು-ನಯನ ಮನೋಹರ ಗಗನ ಪ್ರದರ್ಶನ

ಪ್ರಬಲ ವಿದ್ಯುತ್ ಬಿರುಗಾಳಿಗೆ ಸರಿಸಾಟಿ ಕೌತುಕ ಬೇರೊಂದಿಲ್ಲ. ಬಿರುಮಳೆ ಪ್ರತಿಯೊಂದನ್ನೂ ಸತತವಾಗಿ ಹೊಡೆದರೆ, ಸಿಡಿಲು ಕರುಣೆ ಇಡದೆ ಹೊಡೆಯುತ್ತದೆ. ಮಿಂಚು ರೇಖೆ ಆಗಸವನ್ನು ಓರೆಕೋರೆಯಾಗಿ ಕತ್ತರಿಸುತ್ತದೆ. ಮಿಂಚಿನ ಪ್ರಭಲ ಸತ್ವ ನಮ್ಮೆಲ್ಲರ ಊಹೆಗೆ ನಿಲುಕದಷ್ಟು ವಿನಾಶಕಾರಿ. ಮನೆ-ಕಟ್ಟಡಗಳನ್ನು ಹಾಳುಗೆಡಹುವ ತಾಕತ್ತು ಆದಕ್ಕಿದೆ. ಬೆಂಕಿಯಂತಹ ಆಕಸ್ಮಿಕ ವಿಪತ್ತುಗಳಿಂದ ಸಾವು ತರಬಲ್ಲದು.

ಮಿಂಚು ಎಂದರೇನು?

ಭಾರಿ ಮಳೆ ಮೋಡಗಳು ವಿದ್ಯುತ್ ಆವೇಶಗಳನ್ನು ವೃದ್ಧಿಸಿಕೊಳ್ಳುತ್ತವೆ (ಮೋಡದ ಮೇಲ್‌ಭಾವ ಧನಾವೇಶ ಮತ್ತು ಕೆಳಭಾಗ ಋಣಾವೇಶದಿಂದ ಕೂಡಿದೆ). ಪರಿಣಾಮವಾಗಿ ನೆಲದ ಮೇಲೆಲ್ಲ ಧನಾವೇಶ ಪಸರಿಸುತ್ತದೆ. ಈ ಧನಾವೇಶ ಮೋಡವನ್ನು ನೆರಳಿನಂತೆ ಅನುಸರಿಸುತ್ತದೆ. ಮೋಡ ಮತ್ತು ನೆಲದ ನಡುವೆ ಇರುವ ವಿಭವ (Potential) ಹಲವು ಮಿಲಿಯ ವೋಲ್ಟ್‌ಗಳು. ಧನ ಮತ್ತು ಋಣ ಆವೇಶಗಳು ಪರಸ್ಪರ 'ಇಚ್ಛಿಸುತ್ತವೆ' (ಕಾಂತದಲ್ಲಿ ವಿರುದ್ಧ ಧ್ರುವಗಳ ಆಕರ್ಷಣೆಯಂತೆ). ವಾಯು ಕ್ಷೀಣವಾಹಕವಾದ್ದರಿಂದ ಸಮಾಗಮ ಸುಲಭಸಾಧ್ಯವಲ್ಲ. ಮೋಡದ ಋಣಾವೇಶವನ್ನು ತಲುಪಲು ನೆಲದ ಧನಾವೇಶ ಪ್ರವಾಹ ಪರ್ವತ, ಚರ್ಚ್, ಜನರ ಮೇಲೆಲ್ಲ ಪ್ರವಹಿಸುತ್ತದೆ.

ಇದೇ ಸಮಯದಲ್ಲಿ, ಮೋಡಗಳ ಋಣಾವೇಶ ನೆಲಕ್ಕೆ ತೀರ ಸಮೀಪ ಹರಿಯುವ ಪ್ರಯತ್ನ ಮಾಡುತ್ತಲೇ ಇರುತ್ತದೆ. ಕೊನೆಗೆ ಗಾಳಿ ಪ್ರತಿರೋಧವನ್ನು ಮೀರಿ ಧನ ಮತ್ತು ಋಣ ಆವೇಶಗಳ ಸಂಪರ್ಕವೇರ್ಪಡುತ್ತದೆ. ಈ ಗಾಳಿ ವಾಹಕಪಥದ ಮೂಲಕ ಉಕ್ಕೇರಿದ ಅಗಾಧ ವಿದ್ಯುತ್ ನೆಲದಿಂದ ಮೋಡಕ್ಕೆ ಚಿಮ್ಮಿದಾಗ ಕಣ್ಣು ಕೋರೈಸುವ ಪ್ರಕಾಶ ಮಿಂಚಿ ಮಾಯವಾಗುತ್ತದೆ (ತೋರ್ಕೆಗೆ ಮಿಂಚು ಮೋಡದಿಂದ ಭೂಮಿಗೆ ಬಂದಂತನ್ನಿಸಿದರೂ ವಾಸ್ತವವಾಗಿ ಭೂಮಿಯಿಂದ ಮೋಡಕ್ಕೆ ವಿದ್ಯುತ್ ಪ್ರವಹಿಸುತ್ತದೆ). ಮಿಂಚಿನ

೧೯೮೬ರ ಜುಲೈ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಡಾನ್ ಕ್ಲಾರಿನಸ್ಕಿ ಅವರ 'ಲೈಟ್‌ನಿಂಗ್: ಸ್ಕೈ ಶೊ ಸ್ಪೆಕ್ಟ್ಯಾಕ್ಯುಲರ್' ಎಂಬ ಲೇಖನದ ಭಾವಾನುವಾದ.

ಒಂದು ಹೊಡೆತ ಕೆಲವು ನೂರು ಮೀಟರ್‌ಗಳಿಂದ ಹಲವು ಕಿ.ಮೀ.ಗಳಷ್ಟು ಉದ್ದ ಇರಬಹುದು.

ಮಿಂಚಿನ ಉಷ್ಣತೆ ಹೆಚ್ಚಾಗಿ ೧೭,೦೦೦ ದಿಂದ ೨೮,೦೦೦ ಡಿಗ್ರಿ ಸೆಂಟಿಗ್ರೇಡ್‌ಗಳಷ್ಟಿರುತ್ತದೆ. ಅರ್ಥಾತ್ ಸೂರ್ಯನ ಮೇಲ್ಮೈ ಉಷ್ಣತೆಯ ಮೂರರಿಂದ ಐದುಪಾಲು ಉಷ್ಣತೆ ಹೊಂದಿದೆ. ಸೆಕೆಂಡಿನ ಸಾವಿರದೊಂದರಷ್ಟು ಕಡಿಮೆ ಅವಧಿಯವರೆಗೆ ಮಾತ್ರ ಇರಬಲ್ಲ ಮಿಂಚಿಗೆ ವಿಜ್ಞಾನಿಗಳು 'ಶೀತಲಮಿಂಚು' ಎನ್ನುತ್ತಾರೆ. ಸುಡು ಮಿಂಚಾದರೊ ಸೆಕೆಂಡಿನ ಹತ್ತನೆ ಒಂದರಷ್ಟು ಅವಧಿಯವರೆಗೆ ಇರಬಲ್ಲವು. ಸುಡು ಮಿಂಚು ಬೆಂಕಿ ಉತ್ಪಾದಿಸಿದರೆ, ಶೀತಲ ಮಿಂಚು, ಸ್ಫೋಟನೆಯುಂಟುಮಾಡೀತು.

ಮಿಂಚಿನ ತೀಕ್ಷ್ಣ ಉಷ್ಣದಿಂದ ಅದರ ಹೊಡೆತದ ಪಥದಲ್ಲಿರುವ ಗಾಳಿ ಬಿರುಸಾಗಿ ವಿಕಸನವಾಗುತ್ತದೆ. ವಿಕಸನದ ತೀವ್ರ ವೇಗದ ಪರಿಣಾಮವಾಗಿ ಅಲೆಗಳ ಉತ್ಪಾದನೆಯಾಗುತ್ತದೆ. ಮಿಂಚು ನಮಗೆ ಹತ್ತಿರವಿದ್ದಾಗ ಅಲೆ ಉತ್ಪಾದನಾ ಕ್ರಿಯೆ ಕಠೋರ, ಹೊಡೆತವಾಗಿಕೇಳಿಸಿದರೆ, ದೂರದಲ್ಲಿದ್ದಾಗ ಮಂದವಾದ ಗಂಭೀರ ನಿನಾದ ಮಾತ್ರ ಮೊಳಗುತ್ತವೆ (ಗುಡುಗು ಸುಮಾರು ೧೧ ಕಿ. ಮೀ. ದೂರದಲ್ಲಿದ್ದರೂ ಕೇಳಿಸುತ್ತದೆ. ಕೆಲವೊಮ್ಮೆ ಈ ಅಂತರದ ಮೂರು ನಾಲ್ಕು ಪಟ್ಟು ದೂರದಲ್ಲಿದ್ದರೂ ಕೂಡ).

ಬೆಳಕು ಸೆಕೆಂಡಿಗೆ ೩೦,೦,೦೦೦ ಕಿ.ಮೀ. ವೇಗದಲ್ಲಿ ಚಲಿಸುವುದರಿಂದ ಕ್ಷಣ ಮಾತ್ರದಲ್ಲಿ ಮಿಂಚಿನ ಬೆಡಗನ್ನು ಕಾಣಬಹುದು. ಶಬ್ದ ಮೂರು ಸೆಕೆಂಡುಗಳಲ್ಲಿ ಒಂದು ಕಿ.ಮೀ. ಪ್ರಯಾಣಿಸುತ್ತದೆ, ಮಿಂಚಿನ ಥಳಕನ್ನು ನೋಡಿದ ತಕ್ಷಣ ಗಡಿಯಾರದ ಸೆಕೆಂಡು ಮುಳ್ಳನ್ನು ಗಮನಿಸಿ. ಗುಡುಗು ಕೇಳಿಸಿದೊಡನೆ ಎಣಿಕೆ ನಿಲ್ಲಿಸಿ. ಸೆಕೆಂಡುಗಳನ್ನು ಮೂರರಿಂದ ವಿಭಾಗಿಸಿದಾಗ ಮಿಂಚಿನ ಬೆಳಕು ನಿಮ್ಮಿಂದ ಎಷ್ಟು ಕಿ.ಮೀ. ದೂರದಲ್ಲುಂಟಾಯಿತೆಂದು ತಿಳಿಯಬಹುದು.

ಮಿಂಚಿನ ವಿಧಗಳು

ಹಲವು ಶಾಖೆಗಳಾಗಿ ಹೊಡೆದ ಓರೆಕೋರೆ ಮಿಂಚಿಗೆ-ರೇಖಾಮಿಂಚೆಂದು ಹೆಸರು. ಕೆಲವೊಮ್ಮೆ ರೇಖಾಮಿಂಚು ಒಂದು ಬದಿಗೆ ವಾಲಿದ್ದು ಅದಕ್ಕೆ ಹಲವು ಸಮಾನಾಂತರ ಸೆಳವುಗಳು ಕಂಡು ಬರುತ್ತವೆ. ಇಂತಹ ಮಿಂಚಿಗೆ-ರಿಬ್ಬನ್ ಮಿಂಚೆನ್ನುತ್ತಾರೆ. ಕವಲು ಮಿಂಚಿನಲ್ಲಿ ಎರಡು ಶಾಖೆಗಳು ಒಂದೆ ಸಮಯದಲ್ಲಿ ನೆಲವನ್ನು ಸೇರುತ್ತದೊ ಎನ್ನುವಂತೆ ಕಾಣುವ ರಚನೆ ಇರುತ್ತದೆ. ತಾಪ

ಮಿಂಚು ಅದೆಷ್ಟು ದೂರದಲ್ಲಿರುವುದೆಂದರೆ ಪ್ರತಿಯೊಂದು ಹೊಡೆತವನ್ನು ಪ್ರತ್ಯೇಕವಾಗಿ ಗುರುತಿಸಲಾರೆವು ; ಗುಡುಗು ಕೇಳಿಸದು.

ಮೋಡಗಳ ಧನ ಮತ್ತು ಋಣಭಾಗಗಳ ನಡುವೆ ಮಿಂಚು ಪ್ರಜ್ವಲಿಸಿದಾಗ ವಿಸ್ತಾರ ಪ್ರದೇಶ ಪ್ರಕಾಶಮಾನವಾಗಿ ಬೆಳಗುತ್ತದೆ. ಈ ರೀತಿಯ ಮಿಂಚಿಗೆ ಹರಡು ಮಿಂಚೆನ್ನುತ್ತಾರೆ.

ಮೋಡಗಳೊಳಗೆ ಅಥವಾ ಮೋಡಗಳ ನಡುವೆ ಝಳಪಿಸುವ ಮಿಂಚಿಗೆ ಅಂತರ್-ಮೋಡ ಮಿಂಚೆನ್ನುತ್ತಾರೆ. ಮೋಡಗಳು ಮಿಂಚಿನ ಬೆಳಕನ್ನು ತಡೆ ಹಿಡಿಯುವುದರಿಂದ ಸಿಡಿಲು ಮೇಲ್ಗಡೆ ಉಂಟಾಗುತ್ತಿರುವುದು ತಿಳಿಯದೆ ಹೋಗಬಹುದು.

ಮಹಾಸಿಡಿಲು

ಇವು ಕೆಲವೊಂದು ಅಪರೂಪದ ಸಿಡಿಲುಗಳು. ಎಂದಿನ ಮಿಂಚಿಗಿಂತ ನೂರು ಪಟ್ಟು ಶಕ್ತಿಯುತ ಮಿಂಚಿನಿಂದ ಮಹಾಸಿಡಿಲುಗಳು ಉದ್ಭವಿಸುತ್ತವೆ. ಸಾಮಾನ್ಯ ಸಿಡಿಲು ಒಂದು ಸಾವಿರ ಮಿಲಿಯನ್ ವಾಟ್ ಶಕ್ತಿ ಹೊರಸೂಸಿದರೆ, ಮಹಾಸಿಡಿಲು ಕಡಿಮೆ ಎಂದರೂ ಸಾವಿರ ಮಿಲಿಯನ್ ವಾಟ್ ಶಕ್ತಿ ಬಿಡುಗಡೆ ಮಾಡುತ್ತದೆ; ಬಹುಶಃ ಮಿಲಿಯನ್ ಮಿಲಿಯನ್‌ಗಟ್ಟಲೆ-ಇನ್ನೂ ಹೆಚ್ಚು! ಇತ್ತೀಚೆಗೆ ಪತ್ತೆಹಚ್ಚಲಾದ ಈ ಮಹಾಸಿಡಿಲುಗಳು ಜಪಾನಿನ ತೀರ ಪ್ರದೇಶಕ್ಕೆ ಆಗಾಗ ಹೊಡೆಯುತ್ತಿವೆ ಎಂದು ನಂಬಲಾಗಿದೆ, ಹೆಚ್ಚಾಗಿ ಮಹಾ ಸಿಡಿಲುಗಳು ನೀರಿಗೆ ಹೊಡೆಯುತ್ತವೆ! ಕೆಲವೊಮ್ಮೆ ನೆಲಕ್ಕೆ ಕೂಡ.

೧೯೭೮ ರಲ್ಲಿ ನ್ಯೂ ಫೌಂಡ್‌ಲ್ಯಾಂಡಿನ ಬೆಲ್ ದ್ವೀಪಕ್ಕೆ ಮಹಾ ಸಿಡಿಲೊಂದು ಹೊಡೆದ ಪರಿಣಾಮವಾಗಿ ೧೩ ಕಿ.ಮೀ.ಗಳಷ್ಟು ದೂರದಲ್ಲಿರುವ ಮನೆಗಳೆಲ್ಲ ಪಾಳುಬಿದ್ದುವು. ಹಳ್ಳಿಯಾದ್ಯಂತ ಮನೆಗಳ ಕಿಂಡಿಗಳಿಂದ ನೀಲ ಜ್ವಾಲೆ ಚಿಮ್ಮಿತು. ಇದೆ ರೀತಿ ನವಮ್ಯಾಕ್ಸಿಕೊದಲ್ಲಿ ರಾಜ್ಯ ಪೋಲಿಸ್ ಆಕಾಶವಾಣಿ ಗೋಪುರಕ್ಕೆ ಸಿಡಿಲೊಂದು ಹೊಡೆದು ರಾಜ್ಯ ಸಮಾಚಾರ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತವಾಯಿತು.

ಭೂಮಿಯ ಧನಾವೇಶ ಮೋಡದ ಋಣಾವೇಶವನ್ನು ತಲುಪಿದಾಗ ಸಾಮಾನ್ಯ ಮಿಂಚುಂಟಾದರೆ, ಅಸಾಮಾನ್ಯ ಮಿಂಚು–ಭೂಮಿಯ ಋಣಾವೇಶ ಮತ್ತು ಮೋಡದ ಮೇಲ್‌ಭಾಗದಲ್ಲಿರುವ ಧನಾವೇಶದ ಸಮಾಗಮದಿಂದುಂಟಾಗುತ್ತ ದೆಂದು ಕೆಲವು ವಿಜ್ಞಾನಿಗಳು ವಿವರಿಸುತ್ತಾರೆ.

ಸಿಡಿಲು ಯಾವಾಗ ಹೊಡೆಯುತ್ತದೆ

ನೀವು ಈ ಲೇಖನ ಓದುತ್ತಿರುವಂತೆ ಪ್ರಪಂಚದಾದ್ಯಂತ ಸುಮಾರು ೧೮೦೦ ವಿದ್ಯುತ್ ಕ್ಷೋಭೆಗಳು ಪ್ರಗತಿಯಲ್ಲಿರುತ್ತವೆ. ಅವು ಪ್ರತಿ ಸೆಕೆಂಡಿಗೆ ಸುಮಾರು ಆರುನೂರು ಮಿಂಚುಗಳನ್ನುಂಟು ಮಾಡುತ್ತವೆ. ಈ ಆರುನೂರರಲ್ಲಿ ನೂರು ಭೂಮಿಯನ್ನು ತಲುಪುತ್ತವೆಂದು ಅಂದಾಜಿಸಲಾಗಿದೆ. ಒಟ್ಟಾಗಿ ೨೪ ಗಂಟೆಗಳಲ್ಲಿ ೮.೫ ಮಿಲಿಯನ್ ಮಿಂಚು ನೆಲ ಸೇರುತ್ತದೆ. ಮಿಂಚಿನ ಮೇಲೆ 'ಮಿಂಚಿನ ಪುಸ್ತಕ' (The Lightning Book) ಎಂಬ ಹೊತ್ತಗೆ ಬರೆದ ಪೀಟರ್ ವಿವ್ಮೆಸ್ಟೆಟ್ ಹೇಳುತ್ತಾರೆ—"ಹೆಚ್ಚಿನ ವಿಜ್ಞಾನಿಗಳ ಪ್ರಕಾರ, ವಾತಾವರಣಕ್ಕೆ ಭೂಮಿಯಿಂದ ನಿಯತವಾಗಿ ಸೇರ್ಪಡೆಯಾಗುತ್ತಿರುವ ಎಲೆಕ್ಟ್ರಾನುಗಳನ್ನು ಮಿಂಚು-ಸಿಡಿಲುಗಳು ಪುನಃ ಭೂಮಿಗೆ ನೀಡುತ್ತವೆ." ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮಿಂಚು-ಸಿಡಿಲುಗಳು ಭೂಮಿಯನ್ನು ವಿದ್ಯುತ್ ಸಮತೋಲದಲ್ಲಿರಿಸುವ ವ್ಯವಸ್ಥೆ.

ಮಿಂಚು ವಿದ್ಯುತ್ ರಚನೆ ಹೊಂದಿದೆ ಎಂದು ಯೋಚಿಸಿದ ಪ್ರಥಮ ವ್ಯಕ್ತಿ ಬೆಂಜಾಮಿನ್ ಫ್ರಾಂಕ್ಲಿನ್ ಅಲ್ಲದೆ ಹೋದರೂ (ಆ ಮೊದಲೆ ಸರ್ ಐಸಾಕ್ ನ್ಯೂಟನ್, ಫ್ರಾನ್ಸಿಸ್ ಹಕ್ಸ್‌ಬೀ ಮೊದಲಾದವರು ಮಿಂಚಿನ ರಚನೆ ಬಗ್ಗೆ ಆಲೋಚಿಸಿದ್ದರು). ಪ್ರಾಯೋಗಿಕವಾಗಿ ಪ್ರದರ್ಶಿಸಿದವರಲ್ಲಿ ಪ್ರಥಮ. ಫ್ರಾಂಕ್ಲಿನ್ ಮಿಂಚು ವಾಹಕ ಸಲಾಕೆಯನ್ನು ಉಪಜ್ಞಿಸಿದ. ೧೭೫೨ ರಲ್ಲಿ ಫಿಲಡೆಲ್ಫಿಯಾದ ಸಂತೆ ರಸ್ತೆಯಲ್ಲಿರುವ ತನ್ನ ಮನೆಯ ಹೊಗೆ ನಳಿಗೆಗೆ ಉಕ್ಕಿನೆಯ ಸಲಾಕೆಯೊಂದನ್ನು ಕಟ್ಟಿ, ತಂತಿಯೊಂದನ್ನು ಸಲಾಕೆಗೆ ಸಿಕ್ಕಿಸಿ, ಆ ತಂತಿಯನ್ನು ನೆಲದೊಳಗೆ ಹುಗಿದ. ಮನೆಯನ್ನು ಸಿಡಿಲ ಹೊಡೆತದಿಂದ ಮಿಂಚುವಾಹಕ ಸಲಾಕೆ ರಕ್ಷಿಸೀತೆಂದು ಫ್ರಾಂಕ್ಲಿನ್ ಯೋಚಿಸಿದ್ದ. ಹೌದು, ಕಲ್ಪನೆ ಸತ್ಯವಾಯಿತು—ಮೂವತ್ತೈದು ವರ್ಷಗಳ ನಂತರ! ಫ್ರಾಂಕ್ಲಿನ್‌ಗೆ ೮೧ ವರ್ಷವಾಗಿದ್ದಾಗ ಮನೆಗೆ ಸಿಡಿಲೊಂದು ಹೊಡೆಯಿತು. ಆದರೆ, ಸಲಾಕೆ ಚೆನ್ನಾಗಿ ಕಾರ್ಯ ನಿರ್ವಹಿಸಿತು.

ಗಾಳಿಯಲ್ಲಿರುವ ಸಾರಜನಕದ ಕೆಲವಂಶವನ್ನು ಮಿಂಚು ಸಾರಜನಕದ ಸಂಯುಕ್ತವನ್ನಾಗಿ ಮಾರ್ಪಡಿಸುತ್ತದೆ. ಸಂಯುಕ್ತಗಳು ಮಳೆಯಿಂದಾಗಿ ಭೂಮಿ ಮೇಲೆ ತಂಗುವುದರಿಂದ ಪ್ರತಿ ಹೆಕ್ಟೇರ್ ವಿಸ್ತೀರ್ಣದ ಭೂಮಿಗೆ ಕೆಲವು ಕಿಲೋಗಳಷ್ಟು ರಸಗೊಬ್ಬರ ಉದಾರ ದಾನ.

ನೆಲವಲ್ಲಿ ಬೆಳಗ್ಗಿಗಿಂತ ಮುಸ್ಸಂಜೆಯಲ್ಲಿ ಮಿಂಚಿನ ಪ್ರಮಾಣ ಅಧಿಕ. ಸಾಗರಗಳಲ್ಲಾದರೊ ಈ ಅದಲು ಬದಲಾಗುತ್ತದೆ. ಋತುಗಳಿಗನುಸಾರವಾಗಿ ಮಿಂಚು ಕಾಣಿಸಿಕೊಳ್ಳುವ ಪ್ರಮಾಣದಲ್ಲಿ ಏರಿಳಿತ ಉಂಟಾಗಬಹುದು–ಬೇಸಗೆಯಲ್ಲಿ ಚಳಿಗಾಲಕ್ಕಿಂತ ಅಧಿಕ ಮಿಂಚು.

ಕಂಪಾಲಾ, ಉಗಾಂಡಾ, ಜಾವಾ ದ್ವೀಪಗಳು ಮಿಂಚು ಸಿಡಿಲುಗಳ ಪ್ರಕೋಪಕ್ಕೆ ಹೆಚ್ಚಾಗಿ ತುತ್ತಾಗುವ ಪ್ರದೇಶಗಳು. ಜಾವಾ ದ್ವೀಪದಲ್ಲಂತೂ ವರ್ಷದ ಮುನ್ನೂರು ದಿನವಿಡಿ ಮಿಂಚು ಹೊಳೆಯುತ್ತಿರುತ್ತದೆ. ಅಮೇರಿಕ ಸಂಯುಕ್ತ ಸಂಸ್ಥಾನದ ಆಗ್ನೇಯ ಭಾಗವಾದ ಫ್ಲಾರಿಡಾ ಪ್ರದೇಶದಲ್ಲಿ ವಾರಕ್ಕೆ ಸರಾಸರಿ ಎರಡು ಮಿಂಚು-ಸಿಡಿಲುಗಳ ಪ್ರವಾಹ ಇದ್ದೆ ಇರುತ್ತದೆ. ಕ್ಯಾಲಿಫೋರ್ನಿಯ, ಕಾಲ್ಲಾಲ್ಲಿಟ್, ನುನಾತ್ (ಮೊದಲು ಗ್ರೀನ್‌ಲ್ಯಾಂಡ್), ಐಸ್ಲಾಂಡ್, ಉತ್ತರ ನಾರ್ವೆ ಮೊದಲಾದುವು ಅತ್ಯಂತ ಕಡಿಮೆ ಮಿಂಚು ಉಂಟಾಗುವ ಪ್ರದೇಶಗಳು.

'ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್.' ಅದರ ಪ್ರಕಾರ ಅತಿ ವಿನಾಶಕಾರಿ ಸಿಡಿಲು ೨೧ ಜನರನ್ನು ಬಲಿ ತೆಗೆದುಕೊಂಡಿತು.

ನಿರ್ದಿಷ್ಟ ಸ್ಥಳಕ್ಕೆ ಮೇಲಿಂದ ಮೇಲೆ ಸಿಡಿಲು ಹೊಡೆಯುವ ಸಾಧ್ಯತೆ ಇಲ್ಲದಿಲ್ಲ. ಏಕೆಂದರೆ, ಒಮ್ಮೆ ಸಿಡಿಲು ಹೊಡೆದಾಗ ವಿದ್ಯುತ್ ಪ್ರವಾಹದ ಹವನಕ್ಕೆ ಅನುಕೂಲ ದಾರಿ ದೊರೆತಂತಾಗುತ್ತದೆ. ವಾಷಿಂಗ್ಟನ್ ಸ್ಮಾರಕ ಕಟ್ಟಡ, ವೆನಿಸ್‌ನಲ್ಲಿರುವ ಸೇಯಿಂಟ್‌ಮಾರ್ಕ್ಸ್ ಚೌಕದ ಗಂಟೆ ಗೋಪುರ, ನ್ಯೂಯಾರ್ಕಿನ ಎಂಪೈರ್ ಸ್ಟೇಟ್ ಕಟ್ಟಡ ಒಂದಕ್ಕಿಂತ ಹೆಚ್ಚು ಬಾರಿ ಸಿಡಿಲು ಹೊಡೆಯಿಸಿಕೊಳ್ಳಲು ಹೆಸರಾಗಿವೆ. ಒಮ್ಮೆ ಎಂಪೈರ್ ಸ್ಟೇಟ್ ಕಟ್ಟಡಕ್ಕೆ ಇಪ್ಪತ್ತು ನಿಮಿಷಗಳಲ್ಲಿ ಒಂಬತ್ತು ಬಾರಿ ಸಿಡಿಲು ಹೊಡೆಯಿತು.

ಕೆಲವು ಮುಂಜಾಗರೂಕತೆಗಳು:

* ದೊಡ್ಡ ಮರದಡಿಯಲ್ಲಿ ನಿಲ್ಲಬೇಡಿ.
* ನಿಮ್ಮ ಸುತ್ತ ದೊಡ್ಡ ವಸ್ತುಗಳಿರದಂತೆ ಎಚ್ಚರಿಕೆ ವಹಿಸಿ (ದೋಣಿಯ

ಒಳಗೆ, ವಿಸ್ತಾರ ಬಯಲಿನಲ್ಲಿ, ಪರ್ವತದ ಮೇಲೆ) ನೀರಿನಲ್ಲಿದ್ದರೆ ಮೇಲೆ ಬನ್ನಿ.

* ಗಾಲ್ಫ್‌ದಾಂಡು, ಮೀನು ಹಿಡಿಯುವ ಕೋಲು, ಬಂದೂಕು ಇತ್ಯಾದಿ ಲೋಹದ ವಸ್ತುಗಳನ್ನು ದೂರವಿರಿಸಿ. ಬೈಸಿಕಲ್ಲು ಓಡಿಸಬೇಡಿ.
* ನಿಮ್ಮ ಕೂದಲುಗಳೆಲ್ಲ ನಿಮಿರಿ ನಿಲ್ಲುವ ಅಥವಾ ಚರ್ಮ ಜುಮ್ಮೆನ್ನುವ ಅನುಭವವಾದರೆ ಸಿಡಿಲು ನಿಮ್ಮ ಸಮೀಪ ಹೊಡೆಯುವ ಸೂಚನೆ ಇರಬಹುದು. ತಲೆ ಮುಂದೆ ಬಗ್ಗಿಸಿ ಕಾಲುಗಳನ್ನು ಮುದುರಿಸಿ ಕುಳಿತುಕೊಳ್ಳಿ. ಮೊಣಕಾಲೂರಿ ಕುಳಿತುಕೊಳ್ಳಬೇಡಿ; ಅಂಗಾತನೆ ಮಲಗಬೇಡಿ.
* ರಕ್ಷಣೆಗಾಗಿ ದೊಡ್ಡ ಕಟ್ಟಡ ಯಾ ಮನೆಯೊಳಗೆ ಪ್ರವೇಶಿಸಿ. ಕಾರಿದ್ದರೆ ಕಾರೊಳಗಾದರೂ ಕುಳಿತುಕೊಳ್ಳಿ. ಕಾರಿನ ಚಕ್ರಗಳು ಕಾರನ್ನು ಸುರಕ್ಷಿತ ಸ್ಥಳವನ್ನಾಗಿಸುವುದಿಲ್ಲ–ಬದಲಾಗಿ ಲೋಹದ ಚೌಕಟ್ಟು ನಿಮಗೆ ರಕ್ಷಣೆ ನೀಡುತ್ತದೆ. ಆದರೆ ಕಾರೊಳಗಿರುವ ಲೋಹವನ್ನು ತಪ್ಪಿಯೂ ಮುಟ್ಟಬೇಡಿ.
* ನೀವು ಕಟ್ಟಡದೊಳಗೆ ಪ್ರವೇಶಿಸಿದೊಡನೆ ಅತ್ಯಂತ ಸುರಕ್ಷಿತ ಸ್ಥಳವನ್ನಾರಿಸಿರಿ. ಕಟ್ಟಡದ ತಳಭಾಗದಲ್ಲಿರುವ ವಿಶಾಲ ಕೋಣೆ ಅತ್ಯುತ್ತಮ. ಬೆಂಕಿ ಅಥವಾ ಹೊಗೆ ಚಿಮಣಿಯಿಂದ ಸಾಧ್ಯವಾದಷ್ಟು ದೂರವಿರಿ.
* ಟೆಲಿಫೋನನ್ನು ಉಪಯೋಗಿಸಬೇಡಿ. ವಿದ್ಯುತ್ ಸಾಮಾಗ್ರಿಗಳನ್ನು ಬಳಸುವುದು ಅಪಾಯಕಾರಿ.
* ಕಿಟಕಿಬಾಗಿಲು, ಶಾಖಪ್ರಸಾರಕ ಕೋಷ್ಠ, ಮುಚ್ಚಿದ ಒಲೆ (Stove) ಸಮೀಪ ನಿಲ್ಲಬೇಡಿ.
* ಮಿಂಚು-ಸಿಡಿಲುಗಳುಂಟಾಗುತ್ತಿರುವಾಗ ಮೇಲೆ ಹೇಳಿದ ಸೂಚನೆಯ ಅನುಸರಣೆಯಿಂದ ಅಪಾಯ ತಪ್ಪಬಹುದು. ಮಿಂಚಿನ ಹೊಡೆತದ ಆಘಾತ

ತಾತ್ಕಾಲಿಕ, ಹೃದಯ ಮತ್ತು ಪುಪ್ಪುಸ ಬಹುಬೇಗನೆ ಪುನಶ್ಚೇತನಗೊಳ್ಳದೆ ಮೆದುಳಿಗೆ ತೀವ್ರ ಪೆಟ್ಟಾಗಬಹುದು. ತ್ವರಿತ ಚಿಕಿತ್ಸೆಯಿಂದ ಅಪಾಯ ತಪ್ಪಿಸಲು ಸಾಧ್ಯ.

ನೆಮ್ಮದಿ ನೀಡುವ ವಿಚಾರವೊಂದಿದೆ. ಸಿಡಿಲಿಗೆ ತೀವ್ರ ಹೆದರಿದ್ದರೆ ಕೇವಲ ಇಷ್ಟು ನೆನಪಿಡಿ-ಒಂದು ವೇಳೆ ಮಿಂಚಿನ ಹೊಳಪು ಕಂಡರೆ, ನಿಮ್ಮಿಂದ ಅದು ತಪ್ಪಿರುತ್ತದೆ.

ಸರಾಸರಿ ಒಬ್ಬ ಮಾನವ ಸಿಡಿಲು ಹೊಡೆತಕ್ಕೆ ಸಿಲುಕಿ ಮರಣಹೊಂದುವ ಸಂಭವ. ಎಷ್ಟು? ಒಂದು ವರ್ಷದಲ್ಲಿ ಸಂಭಾವ್ಯತೆ–ಒರಟಾಗಿ ಮಿಲಿಯದ ಒಂದು ಭಾಗ. ಆದರೆ ಈ ಮರಣ ಅತೀವ ದಾರುಣವಾದದ್ದು.

ಬಹುಶಃ ರೊಯ್ ಸುಲ್ಲಿವಾನ್ ಸಿಡಿಲು ಹೊಡೆಯಿಸಿಕೊಳ್ಳುವ ಛಾಂಪಿಯನ್. ಅಮೇರಿಕದ ಈ ವನರಕ್ಷಕ ಈಗಾಗಲೆ ಏಳುಬಾರಿ ಸಿಡಿಲ ಹೊಡೆತ ತಿಂದಿದ್ದಾನೆ. ಸಿಡಿಲು ಅವನ ಹುಬ್ಬನ್ನು ಕರಟಿಸಿದೆ. ತಲೆಗೂದಲಿಗೆ ಬೆಂಕಿ ಹಚ್ಚಿದೆ. ಭುಜಗಳನ್ನು ಮೊಂಡುಮಾಡಿದೆ, ಒಂದು ಸಿಡಿಲಿನ ಹೊಡೆತ ಅವನ ಪಾದ ಬಗಿದು ಕಾರಿನಿಂದ ಹೊರಕ್ಕೆ ಚಿಮ್ಮಿಸಿತು. ಸುಲ್ಲಿವಾನ್ ನಗುತ್ತ ಹೇಳುತ್ತಾನೆ—"ಸಿಡಿಲು ನನ್ನನ್ನು ಹೇಗಾದರೂ ಪತ್ತೆ ಮಾಡುತ್ತದೆ."

ಎ. ಪಿ. ರಾಧಾಕೃಷ್ಣ



ಅದೃಷ್ಟ ನಾಳೆ ದೊಡ್ಡ ಲಾಭವನ್ನು ನಿನ್ನ ಪಾಲಿಗೆ ತರಬಹುದು ; ಇಂದು ಹೋದದ್ದು ನಾಳೆ ಬಂದೀತು,

—ಸೆರವಾಂಟಿಸ್

ಯಮಲೋಕ ನೋಡಿಬಂದನೆಂದ ಮಹಿಳೆ!

ಈಗ್ಗೆ ೪೨ ವರ್ಷಗಳ ಹಿಂದೆ ಮೈಸೂರಿನ ಕೊತ್ವಾಲ ರಾಮಯ್ಯನ ಬೀದಿಯಲ್ಲಿದ್ದ ಕೃಷ್ಣಾಪಂಡಿತರ ವಠಾರದಲ್ಲಿ ನಾನು ವಾಸವಾಗಿದ್ದಾಗ ಆ ಮನೆ ಮಾಲೀಕರ ಪ್ರತಿನಿಧಿ ರುಕ್ಮಿಣಮ್ಮನವರ ಸಾಕು ತಾಯಿ ದೊಡ್ಡಮ್ಮ ಎಂಬ ೧೦೦ ವರ್ಷ ವಯಸ್ಸಿನ ಮಹಿಳೆ ೧೯೪೦ರ ಮೇ ೧೦ ರಂದು ಸಂಜೆ ಹಠಾತ್ತನೆ ಸ್ವಲ್ಪ ಹೊತ್ತು ಅಸ್ವಸ್ಥರಾಗಿ ಉಸಿರಾಟನಿಂತು, ಅವರು ಮೃತರಾದರೆಂದು ಎಲ್ಲರೂ ನಂಬಿದರು. ಶವ ವಾಹಕರು ಕೂಡಲೆ ಸಿಕ್ಕಲಿಲ್ಲವಾಗಿ ಮರುದಿನ ಬೆಳಿಗ್ಗೆ ಅಂತ್ಯಕ್ರಿಯೆ ನಡೆಸಲು ನಿಶ್ಚಯಿಸಲಾಯಿತು.

ಮರುದಿನ ಬೆಳಿಗ್ಗೆಯಾದಾಗ, ಶವವನ್ನು ಸಾಗಿಸುವ ಕಾರ್ಯ ಪ್ರಾರಂಭಿಸುತ್ತಿದ್ದಂತೆಯೆ, ಕೈಯನ್ನು ಮೇಲಕ್ಕೆತ್ತಿದ ದೊಡ್ಡಮ್ಮ "ಲೇ ರುಕ್ಮಿಣಿ, ಯಮಧರ್ಮರಾಯ, ತನ್ನ ದೂತರನ್ನು ಈಕೇನ ಈಗಲೆ ಏಕೆ ಕರೆ ತಂದಿರಿ. ಇನ್ನೂ ೩ ದಿವಸದ ಅವಧಿ ಇದೆ. ಬಿಟ್ಟು ಬನ್ನಿ ಹೋಗಿ ಎಂದು ತಿಳಿಸಿ ನನ್ನ ಬೆನ್ನಿನ ಮೇಲೆ ೩ ಮುದ್ರೆ ಒತ್ತಿ ಕಳುಹಿಸಿದ ನೋಡು" ಎಂದು ಹೇಳಿ ಚಕ್ಕನೆ ಕುಳಿತುಕೊಂಡ ಅಪೂರ್ವ ಘಟನೆ ನಡೆಯಿತು. ಆಗ ಆಕೆಯ ಬೆನ್ನನ್ನು ನೋಡಿದಾಗ ಅಲ್ಲಿ ೩ ಕಡೆ ಹಳೆಯ ಒಂದು ರೂಪಾಯಿನಷ್ಟು ಸ್ಥಳದಲ್ಲಿ ಮುದ್ರೆಯ ಬೊಬ್ಬೆ ಇದ್ದುದು ಗೋಚರಿಸಿತು.

ಮೇ ೧೩ ರಂದು ಸಂಜೆ ಆಕೆ "ನೋಡೆ ಯಮದೂತರು ಬಂದು ಕರೀತಿದ್ದಾರೆ. ಎಳೀತಿದ್ದಾರೆ. ನಾನು ಹೋಗ್ತೀನಿ" ಎನ್ನುತ್ತಾ ದೊಡ್ಡದಾಗಿ ಬಾಯಿ ತೆರೆದು ನೆಲಕ್ಕೆ ಒರಗಿಕೊಂಡರು ಕೆಲವೇ ನಿಮಿಷಗಳಲ್ಲಿ ಆಕೆಯ ದೇಹ ತಣ್ಣಗಾಯಿತು. ಇದಾದ ೪ ಗಂಟೆಗಳ ಬಳಿಕ, ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಇದು ನಾನು ಕಣ್ಣಾರೆ ಕಂಡ ಘಟನೆ.

ಹ. ಲ. ಶ್ರೀಕಂಠಮೂರ್ತಿ

ಅಲ್ಪರು ಅದೃಷ್ಟ ಎನ್ನುತ್ತಾರೆ. ಬುದ್ಧಿಶಾಲಿಗಳು ಕಾರ್ಯಕಾರಣಗಳನ್ನು ನಂಬುತ್ತಾರೆ.

—ಬಿ. ಎಂ. ಶ್ರೀಕಂಠಯ್ಯ

ಜಪಾನಿನಲ್ಲಿ ಗ್ರಾಮೀಣ ಆರೋಗ್ಯಕ್ಕಾಗಿ ವ್ಯವಸಾಯ ಸಹಕಾರ ಸಂಘಗಳು

[ಈ ಲೇಖನದ ಇಂಗ್ಲಿಷ್ ಮೂಲ ಲೇಖಕರಾದ ಶ್ರೀ ಹೆಚ್. ನಾಗರಾಜಶೆಟ್ಟಿರವರು (ಕರ್ನಾಟಕ ರಾಜ್ಯದ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್) ಆಫ್ರೋ–ಏಷ್ಯಾ ರೂರಲ್ ರಿಕನ್‌ಸ್ಟ್ರಕ್ಷನ್ ಆರ್ಗನೈಜೇಷನ್‌ರವರು ಏರ್ಪಡಿಸಿದ್ದ ಸೆಮಿನಾರ್‌ನಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಜಪಾನಿನ ಟೋಕಿಯೋ ನಗರದ "ಇನ್‌ಸ್ಟಿಟ್ಯೂಟ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಅಗ್ರಿಕಲ್ಚರಲ್ ಕೋ ಆಪರೇಶನ್ ಇನ್ ಏಷ್ಯಾ" ಸಂಸ್ಥೆಯಲ್ಲಿ ಈ ಸೆಮಿನಾರ್ ಜರುಗಿತ್ತು.)

ಜಪಾನಿನ ವ್ಯವಸಾಯ ಸಹಕಾರ ಸಂಘಗಳು ತಮ್ಮ ಸಂಘದ ಸದಸ್ಯರಿಗೆ ವಿಶಿಷ್ಟ ಸೇವೆ ಸಲ್ಲಿಸುತ್ತಿವೆ. 'ಗರ್ಭದಿಂದ ಶ್ಮಶಾನ'ದವರೆಗೆ ಎಂಬಂತೆ, ಅಷ್ಟು ದೀರ್ಘಕಾಲ ತನ್ನ ಸದಸ್ಯರಿಗೆ, ಈ ಸಂಘಗಳು ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿವೆ. ಅವು ನೀಡುವ ಸೇವೆಗಳಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದಂತೆ ಸಲಹೆ, ಸಾಲ, ಮಾರಾಟ, ಸರಕು ಸಾಮುಗ್ರಿಗಳ ವಿತರಣೆ, ವಿಮೆ, ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸೌಲಭ್ಯ ಇತ್ಯಾದಿಗಳು ಸೇರಿವೆ.

ಜಪಾನಿನಲ್ಲಿನ ಈ ಸಂಘಗಳು ತನ್ನ ಸದಸ್ಯರುಗಳ ಸುಖವೇ ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿದಂತಿದೆ. ಸಂಯುಕ್ತ ರಾಷ್ಟ್ರಗಳ ಮಾರ್ಗದರ್ಶನದ ಸೂತ್ರದಂತೆ ಮನುಷ್ಯರ ಸುಖದ ಮೊತ್ತಮೊದಲ ಆದ್ಯತೆಗಳು:

ಪೌಷ್ಟಿಕಾಂಶಗಳನ್ನು ಒದಗಿಸುವಿಕೆ, ಸುರಕ್ಷತೆ ಮತ್ತು ಆರೋಗ್ಯ.

ಈ ಅತಿ ಪ್ರಮುಖ ವಿಚಾರಗಳಿಗೆ ಗಮನ ಕೊಟ್ಟನಂತರವೇ ಇನ್ನುಳಿದ ಸುಖದ ಸಾಧನಗಳಾದ,

---

ಭಾರತ ಸರ್ಕಾರದ ಕೇಂದ್ರ ಆರೋಗ್ಯ ಶಿಕ್ಷಣ ಬ್ಯೂರೋದ ವತಿಯಿಂದ ಪ್ರಕಟಗೊಳ್ಳುತ್ತಿರುವ 'ಸ್ವಸ್ಥ ಹಿಂದ್' ಆಂಗ್ಲ ಮಾಸಿಕ ಜೂನ್ ೧೯೮೦ರ ಸಂಚಿಕೆದಲ್ಲಿನ 'ಡೆವಲಪಿಂಗ್ ಅಗ್ರಿಕಲ್ಚರಲ್ 'ಕೋ ಆಪರೇಟಿವ್ಸ್ ಫಾರ್ ರೂರಲ್ ಹೆಲ್ತ್' ಎಂಬ ಲೇಖನದ ಭಾವಾನುವಾದ.

ಮನೆ, ಪರಿಸರ, ವಿನೋದ–ಕ್ರೀಡೆ ಮತ್ತು ಶಿಕ್ಷಣಗಳಿಗೆ ಆದ್ಯತೆ ನೀಡಲಾಗುತ್ತಿದೆ.

ರೈತನ ಆರೋಗ್ಯವನ್ನು ಸುಸ್ಥಿತಿಯಲ್ಲಿಡುವುದರಿಂದ ತಮ್ಮ ಸದಸ್ಯರ ಜೀವನ ಮಟ್ಟವನ್ನು ಹೆಚ್ಚು ಸುಧಾರಿಸಬಹುದು ಎಂದು ಈ ವ್ಯವಸಾಯ ಸಂಘಗಳು ಭಾವಿಸಿವೆ. ಆರೋಗ್ಯ ಮತ್ತು ನೈರ್ಮಲ್ಯಗಳ ಬಗೆಗೆ ಭಾಷಣಗಳು; ಆರೋಗ್ಯ ತನಿಖೆಗಳು; ಆರೋಗ್ಯದ ಬಗೆಗಿನ 'ಪಾಕೆಟ್ ಬುಕ್'ಗಳು (ಕಿಸೆ ಪುಸ್ತಕಗಳು) ಇತ್ಯಾದಿಗಳನ್ನು ವಿತರಣೆ ಮಾಡುವುದರಿಂದ ರೈತರ ಮನಸ್ಸಿನಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗೆಗೆ ಹೆಚ್ಚು ವಿಚಾರಗಳನ್ನು ತುಂಬಲಾಗುತ್ತದೆ.

ರೈತರ ವೇಳಾಪಟ್ಟಿಯನ್ನು ನೋಡಿ, ಆತ ಅಗತ್ಯಕ್ಕಿಂತ ಹೆಚ್ಚು ಕೆಲಸ ಮಾಡದಂತೆ ರಕ್ಷಣೆ ನೀಡಲಾಗುತ್ತದೆ. ರೈತರ ಕಾಹಿಲೆಗಳನ್ನು ಪತ್ತೆಮಾಡಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಅಂಗಸಾಧನೆ ಮತ್ತು ರಕ್ಷಣೆ–ಶಿಕ್ಷಣಗಳ ಮಹತ್ತ್ವವನ್ನು ಜನರ ಮನಸ್ಸಿನಲ್ಲಿ ತುಂಬಲಾಗುತ್ತದೆ. ಸ್ಥಳದಲ್ಲೇ ದೊರೆಯುವ ಯಾವ ಯಾವ ಆಹಾರ ಪದಾರ್ಥಗಳನ್ನು ಬಳಸಿಕೊಂಡು ಆಹಾರವನ್ನು ಪೌಷ್ಟಿಕಾಂಶಗಳಿಂದ ಹೇಗೆ ಶ್ರೀಮಂತಗೊಳಿಸಬಹುದು ಎಂಬುದನ್ನು ತಿಳಿಸಲಾಗುತ್ತದೆ. ಪೋಷಕಾಂಶಗಳ ಬಗೆಗೆ ಹೆಚ್ಚಿನ ಮಾಹಿತಿ ನೀಡಲಾಗುತ್ತದೆ.

ಒಳ್ಳೆಯ ಕಟ್ಟಡ ಸಾಮಗ್ರಿಗಳ ಬಗೆಗೆ ಮಾಹಿತಿ ನೀಡಿ ಮನೆಯನ್ನು ಸರಿಯಾಗಿ ಕಟ್ಟಿಕೊಳ್ಳಲು ಉತ್ತೇಜನ ನೀಡಲಾಗುತ್ತದೆ. ವ್ಯವಸಾಯಕ್ಕೆ ಬೇಕಾಗುವ ಸಾಧನ ಸಲಕರಣೆಗಳ ಬಗೆಗೆ ಮತ್ತು ವಿದ್ಯುತ್‌ಶಕ್ತಿ ಬಳಸಿ ಉಪಯೋಗಿಸುವ ಸಾಧನಗಳ ಬಗೆಗೆ ತಿಳುವಳಿಕೆ ನೀಡಲಾಗುತ್ತದೆ. ನೈರ್ಮಲ್ಯದ ದೃಷ್ಟಿಯಿಂದ ಯಾವ ಹಾಸಿಗೆ ಬಟ್ಟೆಗಳನ್ನು ಬಳಸಬೇಕು, ಕೆಲಸಮಾಡುವಾಗ ಎಂಥಾ ಬಟ್ಟೆಗಳನ್ನು ತೊಡಬೇಕು ಎಂದು ತಿಳಿಸಲಾಗುತ್ತದೆ. ಸಂಘದ ಬ್ರಾಂಡಿನ ಬಟ್ಟೆಬರೆಗಳನ್ನು ಜನಪ್ರಿಯಗೊಳಿಸಿ ಅವುಗಳನ್ನು ಬಳಸಲು ಉತ್ತೇಜನ ನೀಡಲಾಗುತ್ತದೆ.

ನಗರದಿಂದ ಬಂದ ವೈದ್ಯಕೀಯ ಸಿಬ್ಬಂದಿ ಯಾವ ರೀತಿಯ ಹಾಸಿಗೆ ಬಟ್ಟೆಗಳನ್ನು ಉಪಯೋಗಿಸಬೇಕು ಎಂಬ ಬಗೆಗೆ ತಿಳುವಳಿಕೆ ನೀಡಿ, ರೈತರ ಹೊಟ್ಟೆಯ ಪರೀಕ್ಷೆ ಮಾಡುತ್ತದೆ. ರಕ್ತದೊತ್ತಡವನ್ನು ಹೇಗೆ ತೆಗೆದುಕೊಳ್ಳಬೇಕು ಎಂಬ ಬಗೆಗೆ ಭಾಷಣ ನೀಡುತ್ತದೆ. ಪೌಷ್ಟಿಕಾಂಶಗಳ ಬಗೆಗೆ ಮತ್ತು ಅಡುಗೆ, ತಿಂಡಿ–ತಿನಿಸುಗಳನ್ನು ಹೇಗೆ ತಯಾರಿಸಬೇಕು ಎಂಬ ಬಗೆಗೂ ಶಿಕ್ಷಣ

ನೀಡುತ್ತದೆ. ಜೊತೆಗೆ ರೈತ ಮಹಿಳೆಯರ ಸ್ತ್ರೀರೋಗಗಳ ಪರೀಕ್ಷೆ ಮಾಡುತ್ತದೆ. ಈ ಬಗೆಗೆ, ಈ ಸಿಬ್ಬಂದಿಯು ಸಹಾಯದಿಂದ ಗ್ರಾಮೀಣ ಜನರ ಆರೋಗ್ಯ ಸ್ಥಿತಿ ಸುಧಾರಿಸಲು ವ್ಯವಸಾಯ ಸಹಕಾರ ಸಂಘಗಳು ಪ್ರತಿ ತಿಂಗಳೂ ಇಂಥಾ ಯೋಜನೆಗಳನ್ನು ಹಮ್ಮಿಕೊಂಡಿವೆ. ಮೇಲ್ಕಾಣಿಸಿದ ಆರೋಗ್ಯ ಸಿಬ್ಬಂದಿ ಮತ್ತು ರೈತರ 'ಕಾನ್‌ಫರೆನ್ಸ್'ಗಳಿಂದ ರೈತರ ಆರೋಗ್ಯಮಟ್ಟ ಸುಧಾರಿಸುತ್ತಿದೆ.

ಆರೋಗ್ಯ ನಿಯಂತ್ರಣ ಪ್ರವರ್ತಕ ಸಮಿತಿ :

ಪ್ರಾಥಮಿಕ ಹಂತದಲ್ಲಿ ಆರೋಗ್ಯ ನಿಯಂತ್ರಣ ಪ್ರವರ್ತಕ ಸಮಿತಿ ಈ ಕೆಳಗಿನ ಸಂಘ ಸಂಸ್ಥೆಗಳನ್ನು ಒಳಗೊಂಡಿದೆ :

ವ್ಯವಸಾಯ ಸಹಕಾರ ಸಂಘಗಳು, ಪುರಸಭೆಗಳು, ಮಹಿಳಾ ಸಮಾಜಗಳು, ವ್ಯವಸಾಯ, ಸಹಕಾರ ಸಂಘದ ಯುವಕ ಸಂಘಗಳು, ಜಿಲ್ಲೆಯ ವೈದ್ಯಕೀಯ ಸಂಘಗಳು, ಮೆಡಿಕಲ್ ಪ್ರಾಕ್ಟೀಷನರ್ಸ್ ಮತ್ತು ಆರೋಗ್ಯ ಕೇಂದ್ರಗಳು.

ಈ ಸಮಿತಿಯ ಪ್ರಮುಖ ಉದ್ದೇಶ ಹಳ್ಳಿಗಾಡು ಪ್ರದೇಶದಲ್ಲಿ ಆರೋಗ್ಯ ನಿಯಂತ್ರಣ ಚಟುವಟಿಕೆಗಳನ್ನು ಇನ್ನಿತರೆ ಸಂಬಂಧಿಸಿದ ಸಂಘ ಸಂಸ್ಥೆಗಳ ಸಹಕಾರದೊಡನೆ ಹೆಚ್ಚು ಕ್ರಿಯಾಶೀಲವಾಗಿ ನಡೆಸುವುದೇ ಆಗಿದೆ.

ಈ ಸಮಿತಿ ಈ ಕೆಳಗಿನ ಕೆಲಸಕಾರ್ಯಗಳಿಗೆ ಹೆಚ್ಚು ಒತ್ತು ನೀಡುತ್ತದೆ :

(ಅ) ರೈತರ ಆರೋಗ್ಯಸ್ಥಿತಿಯ ಅವಲೋಕನ.

(ಆ) ಆರೋಗ್ಯ ನಿಯಂತ್ರಣಕ್ಕಾಗಿ ಶಿಕ್ಷಣ.

(ಇ) ಆರೋಗ್ಯ ತಪಾಸಣೆಯ ಕಾರ್ಯಕ್ರಮಗಳು.

(ಈ) ಈ ಕೆಲಸಕಾರ್ಯಗಳ ಮುಂಬರಿವು ಕ್ರಮಗಳು. (Follow-up actions)

ವ್ಯವಸಾಯ ಸಹಕಾರ ಸಂಘಗಳು, ತಮ್ಮ ಕೆಲಸವಾಗಿ, ಒಳವಿಭಾಗಗಳನ್ನು ರಚಿಸಿಕೊಂಡಿದ್ದು, ಸಲಹೆಗಾರರು ಮತ್ತು ಸಾರ್ವಜನಿಕ ಆರೋಗ್ಯ ದಾದಿಯರನ್ನು ಕೆಲಸಕ್ಕೆ ನೇಮಿಸಿಕೊಂಡಿವೆ. ವೃತ್ತಪತ್ರಿಕೆಗಳು, ಬುಲೆಟಿನ್‌ಗಳು, ಪಾಂಪ್ಲೆಟ್‌ಗಳು, ಪೋಸ್ಟರ್‌ಗಳು, ಚಲನಚಿತ್ರಗಳು ಮತ್ತು ಸ್ಲೈಡ್ಸ್ ಇತ್ಯಾದಿ

ಪ್ರಮುಖ ಪ್ರಸಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡುತ್ತಿವೆ. ಆರೋಗ್ಯ 'ಚೆಕ್-ಅಪ್' ಚಟುವಟಿಕೆಗಳಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ; ವಯಸ್ಕರಲ್ಲಿನ ಅಧಿಕ ರಕ್ತದೊತ್ತಡದ ಪರೀಕ್ಷೆ; ಹೃದ್ರೋಗಗಳು, ಕ್ಯಾನ್ಸರ್, ಕ್ಷಯ, ರಕ್ತಹೀನತೆ ಇತ್ಯಾದಿಗಳ ಪತ್ತೆ ಕಾರ್ಯಕ್ರಮಗಳನ್ನು ಒಳಗೊಂಡಿದೆ.

ಕೊನೆಯ ಪಕ್ಷ ವರ್ಷಕ್ಕೊಮ್ಮೆಯಾದರೂ ಪ್ರತಿ ರೈತ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅವನಿಗೆ ಆರೋಗ್ಯ ನಿಯಂತ್ರಣ ಕೈಪಿಡಿಯನ್ನು ನೀಡಲಾಗುತ್ತದೆ. ಈ ಕೈಪಿಡಿಯಲ್ಲಿ ಅವನ ಕುಟುಂಬ ಸದಸ್ಯರು ಮತ್ತು ಅವನ ಆರೋಗ್ಯಕ್ಕೆ ಸಂಬಂಧಿಸಿದ ಮುಖ್ಯ ಮಾಹಿತಿಗಳಿರುತ್ತವೆ. ಆರೋಗ್ಯ ಪರೀಕ್ಷೆ, ನಿವಾರಣಾ ಇಂಜಕ್ಷನ್‌ಗಳು, ಕುಟುಂಬದ ಆರೋಗ್ಯದ ಬಗೆಗೆ ಮಾಹಿತಿ, ಕುಟುಂಬದ ಜೀವನದ ರೀತಿನೀತಿ ಮತ್ತು ಪರಿಸರ, ರಕ್ತದೊತ್ತಡದ ಪರೀಕ್ಷೆ ಮಾಹಿತಿಗಳು, ಮಲಮೂತ್ರಗಳ ಪರೀಕ್ಷೆ ವರದಿ; ರಕ್ತಹೀನತೆಯ ಬಗ್ಗೆ ಮಾಹಿತಿ; ಸಮತೋಲನ ಆಹಾರದ ವಿವರ; ರೈತನ ಬಳಲಿಕೆ ನೀಗಿಸಲು ವ್ಯಾಯಾಮ; ಪ್ರಥಮ ಚಿಕಿತ್ಸೆಯ ಪಾಠಗಳು; ಗರ್ಭಿಣಿ ಹೆಂಗಸರಿಗೆ ಸಲಹೆ ಸೂಚನೆಗಳು ಮತ್ತು ಮುಖ್ಯವಾದ ರೋಗಗಳ ಬಗೆಗೆ ಮಾಹಿತಿ—ಇಷ್ಟೆಲ್ಲಾ ವಿಷಯಗಳು ಈ ಕೈಪಿಡಿಯಲ್ಲಿರುತ್ತವೆ. ರೈತ ಕಾಯಿಲೆ ಬಿದ್ದಾಗಲೆಲ್ಲಾ ಆತ ಡಾಕ್ಟರಲ್ಲಿಗೆ ಈ ಕೈಪಿಡಿಯೊಡನೆ ಚಿಕಿತ್ಸೆಗಾಗಿ ಹೋಗಬೇಕು; ಪರೀಕ್ಷೆಯ ನಂತರ ಚಿಕಿತ್ಸೆ ನೀಡಿದ ಬಗೆಗೆ ದಾಖಲು ಮಾಡಿಸಬೇಕು. ತನ್ನ ಕುಟುಂಬದ ಆರೋಗ್ಯದ ದಾಖಲೆ ಇದಾದುದರಿಂದ ಆತ ಈ ಕೈಪಿಡಿಯನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಆ ರೋಗಕ್ಕೆ ಚಿಕಿತ್ಸೆ ನೀಡಿ ಅವನ್ನು ವಾಸಿಮಾಡಿದ ನಂತರ ಹೇಗೆ ಆ ರೋಗ ಮತ್ತೆ ಬಾರದಂತೆ ಅವರ ಜೀವನರೀತಿ ಮತ್ತು ಪರಿಸರವನ್ನು ಸುಧಾರಿಸಿಕೊಳ್ಳಬೇಕಾಗುತ್ತದೆ ಎಂಬ ಬಗೆಗೆ ಸಲಹೆ ಸೂಚನೆ ನೀಡಲಾಗುತ್ತದೆ ಮತ್ತು ಅದರ ಬಗೆಗೆ ಮಾಹಿತಿಯನ್ನು ಆ ಕೈಪಿಡಿಯಲ್ಲಿ ನಮೂದಿಸಲಾಗುತ್ತದೆ.

ಇಡೀ ಜಪಾನ್ ದೇಶದಲ್ಲೇ ಜಪಾನೀಯರ ವ್ಯವಸಾಯ ಸಂಘಗಳಿಗೆ ಸೇರಿದ ೧೧೭ ಆಸ್ಪತ್ರೆಗಳಿವೆ. ಒಂದೊಂದು ಆಸ್ಪತ್ರೆಯ ಅಧಿಕಾರ ಪ್ರಾಂತ್ಯದಲ್ಲೂ ಆರೋಗ್ಯ ಮತ್ತು ಕಲ್ಯಾಣ ಸಂಘಗಳು ಕೆಲಸ ನಿರ್ವಹಿಸುತ್ತಿವೆ. ಆರೋಗ್ಯ ನಿಯಂತ್ರಣ ಚಟುವಟಿಕೆಗಳಿಗೆಂದೇ ವ್ಯವಸಾಯ ಸಂಘಗಳು ಬೇರೆ ಅಂದಾಜುಪಟ್ಟಿಯನ್ನು ಹೊಂದಿರುತ್ತವೆ. ಅವರೆ ಮೂಲತಃ ಈ ಸಂಘದ ಸದಸ್ಯರೇ ಪೂರ್ಣವಾಗಿಯೋ ಅಥವಾ ಭಾಗಶಃವಾಗಿಯೋ ಈ ಖರ್ಚಿನ

ಹೊರೆಯನ್ನು ಹೊರಬೇಕಾಗುತ್ತದೆ. ಇದರ ಜೊತೆಗೆ ವ್ಯವಸಾಯ ಸಂಘಗಳು ತನ್ನ ಸದಸ್ಯರಿಗೆ 'ಫಿಕ್ಸೆಡ್-ಟರ್ಮ್ಸ್-ಸೇವಿಂಗ್ಸ್'ನ್ನು ಆರೋಗ್ಯ ನಿಯಂತ್ರಣ ಮತ್ತು ಪ್ರವರ್ತನೆಗಾಗಿ ನೀಡಿ ಅದರಿಂದ ಬಂದ ಬಡ್ಡಿಯನ್ನು ಸದಸ್ಯರುಗಳ ಆರೋಗ್ಯ ಪ್ರವರ್ತನೆಗಾಗಿಯೇ ಭಾಗಶಃ ಖರ್ಚು ಮಾಡುತ್ತಿರುತ್ತದೆ. ಪುರಸಭೆಗಳು ಮತ್ತು ಸರ್ಕಾರದಿಂದ ಈ ವ್ಯವಸಾಯ ಸಂಘಗಳು ಅನುದಾನ ಪಡೆಯುತ್ತಿವೆ.

ಎಸ್. ವಿಶ್ವನಾಥ್



ಅದೃಷ್ಟ ಎಂಬುದು ಒಂದು ಸಂತೆಯಂತೆ. ಸ್ವಲ್ಪ ಹೊತ್ತಿನಲ್ಲಿ ಅದರ ಬೆಲೆ ಬಿದ್ದು ಹೋಗಬಹುದು.

—ಬೇಕನ್

ವಿವೇಕಕ್ಕಿಂತ ಅದೃಷ್ಟವೇ ಮನುಷ್ಯನನ್ನು ಆಳುತ್ತದೆ.

—ಸಿಸಿರೋ

ಪೌಷ್ಟಿಕ ಆಹಾರ ಮತ್ತು ರೋಗಗಳ ಚಿಕಿತ್ಸೆ

ಉತ್ತಮವಾದ ಆರೋಗ್ಯ ಆಹಾರದ ಪೌಷ್ಟಿಕತೆಯನ್ನೇ ಅವಲಂಬಿಸಿದೆ. ಆರೋಗ್ಯವಂತನಲ್ಲಿ ಪ್ರತಿರೋಧಕ ಶಕ್ತಿ ಹೆಚ್ಚಿರುತ್ತದೆ. ಪೌಷ್ಟಿಕ ಆಹಾರದ ಅಭಾವದಿಂದಾಗಿ ಬಹಳಷ್ಟು ರೋಗಗಳು ಅದೂ ಕ್ಯಾನ್ಸರ್ ಮತ್ತು ಹೃದಯ ರೋಗಗಳೂ ಉಂಟಾಗಲು ಸಾಧ್ಯ. ೧೪ನೇ ಶತಮಾನದಲ್ಲಿ ಯೂರೋಪಿನಲ್ಲಿ 'ಬ್ಲಾಕ್ ಡೆತ್' ರೋಗ ಹಬ್ಬಿತ್ತು. ಈ ರೋಗ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡಿತು. ಈ ಅಂಟುಜಾಡ್ಯಕ್ಕೆ ಜೀವಾಣು-ಸಂಕ್ರಮಣವಷ್ಟೇ ಶುದ್ಧ ಭೋಜನ ಮತ್ತು ಪೌಷ್ಟಿಕ ತತ್ವಗಳ ಅಭಾವವೂ ಕಾರಣವಾಗಿತ್ತು. ಶುದ್ಧ ಆಹಾರವನ್ನು ಸೇವಿಸುತ್ತಿದ್ದ ಗ್ರಾಮೀಣ ಜನರಲ್ಲಿ ಪ್ರತಿರೋಧಕಶಕ್ತಿ ಹೆಚ್ಚಿದ್ದು ಅವರು ಈ ಅಂಟುಜಾಡ್ಯಕ್ಕೆ ಬಲಿಯಾಗಲಿಲ್ಲ. ಕ್ಷಯರೋಗವನ್ನು ಶಮನಗೊಳಿಸಲು ವಿಶೇಷವಾದ ಚಿಕಿತ್ಸೆಗಿಂತಲೂ ಉತ್ತಮ ಪೌಷ್ಟಿಕಾಂಶಗಳುಳ್ಳ ಆಹಾರವನ್ನು ಸೇವಿಸುವ ಅಗತ್ಯವಿದೆ.

ಇಂದು ಪೌಷ್ಟಿಕ ಆಹಾರವನ್ನು ಸಾಮಾನ್ಯ ಆರೋಗ್ಯವರ್ಧಕದೊಂದಿಗೆ ಬಳಸಿ ರೋಗಗಳನ್ನು ಉಪಚರಿಸುವ ದಿಶೆಯಲ್ಲಿ ಕಾರ್ಯ ನಡೆಯುತ್ತಿದೆ. ಪೌಷ್ಟಿಕ ಆಹಾರವನ್ನು ಚಿಕಿತ್ಸಾ-ವಿಧಾನದ ರೂಪದಲ್ಲಿ ಸೇವಿಸುವುದರಿಂದ ಅನೇಕ ಲಾಭವಿದೆ. ಮೊದಲನೆಯದಾಗಿ, ಪದಾರ್ಥದ ರೂಪದಲ್ಲಿ ಆ ಪೌಷ್ಟಿಕಾಂಶಗಳು ಶರೀರದಲ್ಲಿರುವುದರಿಂದ ಅವು ಹೆಚ್ಚು ಸಹನಶೀಲ ಮತ್ತು ಸುರಕ್ಷಿತವಾಗಿರುತ್ತವೆ. ಎರಡನೆಯದಾಗಿ, ಪೌಷ್ಟಿಕ ತತ್ವಗಳು ಪ್ರಕೃತಿಯಲ್ಲಿ ಯಾವುದೇ ವಿಧದ ಖರ್ಚಿಲ್ಲದೆ ಸಹಜವಾಗಿಯೇ ದೊರೆಯುತ್ತವೆ. ಮೂರನೆಯದಾಗಿ ಪೌಷ್ಟಿಕ ತತ್ವಗಳು ಔಷಧಿಗಳಂತೆ ರೋಗದ ಲಕ್ಷಣಗಳನ್ನು ಗುಣಪಡಿಸುವುದಿಲ್ಲ, ಪ್ರತಿಯಾಗಿ ಅವು ರೋಗದ ಮೂಲ ಕಾರಣಗಳನ್ನೇ ಚಿಕಿತ್ಸೆಗೊಳಿಸುತ್ತವೆ.

ಜೀವಸತ್ವಗಳ ಶೋಧನೆ

ಜೀವಸತ್ವಗಳ ಶೋಧನೆಯಿಂದ ಪೋಷಣಾ-ವಿಜ್ಞಾನದಲ್ಲಿ ತುಂಬಾ ಪ್ರಗತಿಯಾಯಿತು. ಸನ್ ೧೭೫೩ರಲ್ಲಿ ಜೇಮ್ಸ್ ಲಿಂಡನು ಹುಳಿ ಹಣ್ಣುಗಳು 'ಸಿ' ಜೀವಸತ್ವಗಳ ಕೊರತೆಯನ್ನು ಪೂರೈಸುತ್ತವೆಯೆಂಬುದನ್ನು ಕಂಡು ಹಿಡಿದ.

ಹಿಂದಿ ಕಾದಂಬರಿಯಲ್ಲಿ ಪ್ರಕಟಗೊಂಡಿದ್ದ ಡಾ॥ ಮೈಕೇಲ್ ಲೇಸರ್‌ರವರ "ಪೌಷ್ಟಿಕ್ ಆಹಾರ್ ಔರ್ ರೋಗೋಂ ಕಾ ಇಲಾಜ್" ಲೇಖನದ ಕನ್ನಡಾನುವಾದ.

ಇವರ ಕೊರತೆಯಿಂದಾಗಿ ರಕ್ತದ ಕೊರತೆ ಉಂಟಾಗಿ ಕಡೆಗೆ ಸಾವಿಗೆ ಕಾರಣವಾಗುತ್ತದೆ. ೧೭೯೫ರಲ್ಲಿ ಬ್ರಿಟಿಷ್ ಎಡ್ಮಿರಲ್ಟಿಯು ಲಿಂಡ್‌ನ ಈ ಸರಳ ಚಿಕಿತ್ಸೆ—ಪ್ರತಿಯೊಬ್ಬನಿಗೂ ಒಂದು ಔನ್ಸ್ ನಿಂಬೆರಸವನ್ನು ಕೊಡುವುದನ್ನು ಸರ್ಕಾರಿ ವಿಧದಲ್ಲಿ ಸ್ವೀಕರಿಸಿತ್ತು. ಆಗಿನ ಬ್ರಿಟಿಷ್ ಜಲಸೈನ್ಯದ ಅಧಿಕಾರಿ (ಅವರಿಗೆ 'ಲಾಯಮೀಜ್' ಬಿರುದನ್ನು ಕೊಡಲಾಗಿತ್ತು)ಯು, ಇದರಿಂದಾಗಿ ತಮ್ಮಲ್ಲಿ ಹೋರಾಟದ ಶಕ್ತಿ ದ್ವಿಗುಣವಾಯಿತು ಎಂದು ಘೋಷಿಸಿದರು.

ಸನ್ ೧೮೮೦ರಲ್ಲಿ ಸ್ವಿಟ್ಜರ್‌ಲೆಂಡಿನ ಮಿಲ್ಲರ್, ಗೋಧಿ ಬೀಸುವ ಸ್ಟೀಲ್-ರೋಲರ್ ಯಂತ್ರವನ್ನು ತಯಾರಿಸಿದರು. ಅವರು ಈ ಯಂತ್ರವನ್ನು ಯೂರೋಪ್ ಮತ್ತು ಇತರ ಔದ್ಯೋಗಿಕ ದೇಶಗಳಲ್ಲಿ ಪ್ರಚುರ ಪಡಿಸಿದರು. ಸಂಸ್ಕೃತ ಶೋಧಿಸಿದ ಧಾನ್ಯಗಳು, ಬಿಳಿಹಿಟ್ಟು, ಬಿಳಿಸಕ್ಕರೆ, ಬಿಳಿ ಅಕ್ಕಿಯಿಂದಾಗಿ ಜೀವಸತ್ವದ ಕೊರತೆಯ ರೋಗಗಳು ಬಿರುಸಾಗಿ ಹಬ್ಬಲಾರಂಭಿಸಿದವು. ಅವುಗಳಲ್ಲಿ ಬೆರಿ-ಬೆರಿ ರೋಗವೂ ಒಂದಾಗಿತ್ತು. ಇದು ಸರಾಸರಿ ೨೫ರಿಂದ ೪೦ ಜಪಾನಿ ಸೈನಿಕರ ಮೇಲೆ ಪ್ರಭಾವ ಬೀರಿತು. ಬೆರಿ-ಬೆರಿ ರೋಗವು ಜೀವಸತ್ವ ಬಿ–೧ (ಥೈಯಾಮಿನ್)ರ ಕೊರತೆಯಿಂದಾಗುತ್ತದೆ. ಈ ರೋಗದಿಂದಾಗಿ ಶರೀರ ಜೋಮು ಹಿಡಿಯುವುದು, ಕೈ-ಕಾಲುಗಳಿಗೆ ಲಕ್ವ ಹೊಡೆಯುವುದು, ಉಸಿರಾಟದ ತೊಂದರೆಗಳು ಮತ್ತು ಕಡೆಗೆ ಸಾವಿಗೆ ಕಾರಣವಾಗುತ್ತದೆ. ಸನ್ ೧೮೮೪ರಲ್ಲಿ ಜಪಾನ್ ಮೆಡಿಕಲ್ ಸರ್ವೀಸ್‌ನ ಮಹಾನಿರ್ದೇಶಕ ಕನೆಹೀರೋ ತಾಕಾಕಿಯವರು ರೇಶನ್‌ಗಳಲ್ಲಿ ಪಾಲಿಶ್ ಮಾಡಿದ ಅಕ್ಕಿಯ ಪ್ರಮಾಣವನ್ನು ಕಡಿಮೆಗೊಳಿಸಿ, ತರಕಾರಿ, ಮಾಂಸ, ಜವೆಗೋಧಿ ಮತ್ತು ಹಾಲಿನ ಪ್ರಮಾಣವನ್ನು ಹೆಚ್ಚಿಸಿ ಈ ರೋಗದ ಹೆಚ್ಚಳವನ್ನು ತಡೆದರು.

ಜೀವನದಲ್ಲಿ ಖನಿಜಗಳ ಮಹತ್ವವೂ ಕಡಿಮೆಯೇನಲ್ಲ. ಸನ್ ೧೮೨೦ರಲ್ಲಿ ಜಿನೀವಾದ ಡಾಕ್ಟರ್ ಕಾನ್‌ಡೇಟರು ಅಯೋಡಿನ್ ಮೂಲಕ ಗಂಡಮಾಲೆ ರೋಗವನ್ನು ಗುಣಪಡಿಸಿದರು. ಶರೀರವು ಸರಿಯಾಗಿ ಕೆಲಸ ನಿರ್ವಹಿಸಲು ಅಯೋಡಿನ್ ಮತ್ತು ಕಬ್ಬಿಣದ ಅಗತ್ಯವಿದೆ. ಆಗಲೇ, ಇನ್ನೂ ಮಹತ್ವಪೂರ್ಣ ಖನಿಜಗಳಿವೆ ಎಂಬುವುದೂ ತಿಳಿದಿತ್ತು. ಸನ್ ೧೯೧೧ ರಲ್ಲಿ ಪೋಲೆಂಡಿನ ವಿಜ್ಞಾನಿ ಕಾಸ್ಮೀರ್ ಫಂಕನು ಪ್ರಪ್ರಥಮವಾಗಿ ಆಹಾರದಲ್ಲಿ ಬೆರಿ–ಬೆರಿ ಪ್ಲೇಗರ ಮತ್ತು ರಿಕೇಟ್–ವಿರೋಧಿ ತತ್ವಗಳಿರುತ್ತದೆಂದು ಪ್ರಸ್ತಾಪಿಸಿದ. ಇವುಗಳಿಗೆ ಅವನು 'ಜೀವಸತ್ವ' ವೆಂದು ಹೆಸರು ಕೊಟ್ಟ. ಶೀಘ್ರವೇ ಈ ಜೀವಸತ್ವಗಳನ್ನು ಶೋಧಿ ಮಾಡಿ ಅವುಗಳನ್ನು ರಾಸಾಯನಿಕ ರೂಪದಲ್ಲಿ ಗುರುತಿಸಲಾಯಿತು.

ಇದುವರೆಗೆ ಚಿಕಿತ್ಸೆಗೊಳಿಸದ ರೋಗಗಳ ಮೇಲೆ ಈ ಬೇರೆ ಮಾಡಲ್ಪಟ್ಟ ಜೀವಸತ್ವ ಮತ್ತು ಖನಿಜಗಳ ಪ್ರಭಾವನ್ನು ತಿಳಿಯಲು ಕೆಲವು ಚಿಕಿತ್ಸಕರು ನಿಶ್ಚಯಿಸಿದರು. ಸನ್ ೧೯೪೦ ಕನೆಕ್ಟಿಕಟ್‌ನ ಚಿಕಿತ್ಸಕರಾದ ವಿಲಿಯಮ್ ಕೌಫ್‌ಮೈನ್‌ರು 'ನೈಯಾಸಿನಾಮೈಡ್' (ಜೀವಸತ್ವ ಬಿ-೩) ನಿಂದ 'ಸೈಟಿಕಾ' ರೋಗಕ್ಕೆ ಪರಿಣಾಮಕಾರಿಯಾದ ನೆಮ್ಮದಿ ಸಿಗುತ್ತದೆ ಎಂಬುವನ್ನು ಕಂಡು ಹಿಡಿದರು. ಸನ್ ೧೯೪೮ ರಲ್ಲಿ ವರ್ಜೀನಿಯಾದ ಡಾ॥ ಫ್ರೆಡರಿಕ್ ಕ್ಲೇನರ್, ಶೋಧನೆಗೆ ಮೊದಲು ೨೮ ಲೇಖನಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಹೀಗೆ ಬರೆಯಲಾಗಿತ್ತು "……ಜೀವಸತ್ವ-'ಸಿ' ಯ ಯೋಗ್ಯ ಪ್ರಮಾಣವು ಸಾಂಕ್ರಾಮಿಕ ಜೀವಾಣುಗಳನ್ನು ನಷ್ಟಗೊಳಿಸುತ್ತವೆ." ಗಂಭೀರಸ್ವರೂಪದಲ್ಲಿ ಹರಡುತ್ತಿದ್ದ ನೆಗಡಿಯಿಂದ ಹಿಡಿದು ಯಕೃತ್ತು-ಊತದವರೆಗಿನ ಸಾಂಕ್ರಾಮಿಕ ರೋಗಗಳವರೆಗೆ ಡಾ॥ ಕ್ಲೇನರ್-ಜೀವಸತ್ವ 'ಸಿ'ಯ ೩೦ ಸಾವಿರದಿಂದ ೧ ಲಕ್ಷ ಮಿಲಿಗ್ರಾಂವರೆಗೆ 'ಇಂಟ್ರಾವೀನಸ್' ಮತ್ತು 'ಇಂಟ್ರಾ ಮಸ್ಕ್ಯುಲರ್' ಇಂಜೆಕ್ಷನ್ ಕೊಟ್ಟು ರೋಗವನ್ನು ನಿರ್ಮೂಲಗೊಳಿಸಿದರು.

ಪೋಷಕ-ಔಷಧಿಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ?

ರೋಗಿಗಳ ಪೋಷಣಾ ಮಟ್ಟವನ್ನು ಪರೀಕ್ಷಿಸಲು, ರೋಗಿಗಳು ಎಷ್ಟು ಮತ್ತು ಯಾವ ರೀತಿಯ ಆಹಾರವನ್ನು ಸೇವಿಸಿದರು ಎಂದು ತಿಳಿಯಲೋಸುಗ ಡಾ॥ ಮೈಕೇಲ್ ಲೇಸರ್, ರೋಗಿಗಳಿಗೆ ವಾರಗಟ್ಟಲೆ ಕೊಟ್ಟ ಆಹಾರದ ಚಾರ್ಟ್ ತಯಾರಿಸಲು ಹೇಳಿದರು. ಈ ಚಾರ್ಟ್‌ನಿಂದ ಆಹಾರದಿಂದಾಗುವ ಅಲರ್ಜಿಯನ್ನು ತಿಳಿಯಬಹುದು. ಆಹಾರದಿಂದ ಅಲರ್ಜಿಯಾಗುವುದು ಕಡಿಮೆಯೇ ಆದರೂ ಹಾಲು, ಗೋಧಿ, ಮುಸುಕಿನ ಜೋಳದಿಂದ ಹೆಚ್ಚು ಅಲರ್ಜಿಯಾಗುತ್ತದೆ. ದಣಿವು, ನಿರಾಶೆ, ಅಸಾಧಾರಣ ಕ್ರಿಯೆಗಳು, ಭ್ರಮೆ ಮತ್ತು ತಲೆನೋವು—ಇವೆಲ್ಲಾ ಸಾಮಾನ್ಯವಾಗಿ ಆಹಾರದಿಂದಾಗುವ ಅಲರ್ಜಿಯ ಲಕ್ಷಣಗಳು. ಕರುಳಿನ ಅವ್ಯವಸ್ಥೆ, ಕಣ್ಣುಗಳಲ್ಲಿ ತುರಿಕೆ, ನೀರು ಸುರಿಯುವುದು, ಮೂಗು ಸೋರುವಿಕೆ, ಗಂಟಲು ಕಡಿತ ಮತ್ತು ಉಸಿರಾಟದ ತೊಂದರೆ—ಇವೆಲ್ಲಾ ಸಾಮಾನ್ಯ ರೋಗಗಳು. ಜ್ವರ, ಮಾಂಸಖಂಡಗಳಲ್ಲಿ ನೋವು, ಚರ್ಮರೋಗಗಳು ಸಹ ಆಹಾರದ ಅಲರ್ಜಿಯಿಂದಾಗುವ ರೋಗಗಳು. ಈ ಅಲರ್ಜಿಯಿಂದಾಗಿ ನಾಲಿಗೆ ಮೇಲೆ ಕೊಳೆಯ ಮೇಲ್ಪದರ ಜಮಾಯಿಸುವುದು, ನಾಲಿಗೆ ಹಿಗ್ಗುವುದು, ನಾಲಿಗೆ ದಪ್ಪವಾಗುವುದು ಹಾಗೂ ಮುಖ

ಹಳದಿಯಾಗಲು ಪ್ರಾರಂಭವಾಗುತ್ತದೆ ; ಅಲ್ಲದೆ ಕಣ್ಣುಗಳ ಕೆಳಭಾಗದಲ್ಲಿ ಕಪ್ಪು ಛಾಯೆಯು ಆವರಿಸಿಕೊಳ್ಳುತ್ತದೆ.

ಯಾವ ಆಹಾರದಿಂದ ಅಲರ್ಜಿಯಾಗುತ್ತವೆಯೋ ಅದೇ ಆಹಾರವನ್ನು ಒಂದು ವೇಳೆ ರೋಗಿಗೆ ಪದೇ ಪದೇ ಕೊಟ್ಟರೆ ಶರೀರ ಆ ಆಹಾರ ಪದಾರ್ಥಕ್ಕೆ ಬಗ್ಗಿಕೊಂಡು, ತೊಂದರೆ ಕಡಿಮೆಯಾಗುತ್ತದೆ.

ಕುಪೋಷಣೆಯ ಲಕ್ಷಣಗಳು :

ವ್ಯಕ್ತಿ ಆರೋಗ್ಯವಾಗಿದ್ದಾನೋ ಇಲ್ಲವೋ ಎನ್ನುವುದನ್ನು ಅವನ ಚರ್ಮ, ಕೂದಲು, ನಾಲಿಗೆ ಮತ್ತು ಬೆರಳುಗಳ ಉಗುರುಗಳಿಂದ ತಿಳಿಯಬಹುದು. ಆರೋಗ್ಯಕರ ವ್ಯಕ್ತಿಯ ಉಗುರುಗಳು ನುಣುಪಾಗಿ, ಗುಲಾಬಿ ಬಣ್ಣದಿಂದಿದ್ದು ನಿಯಮಾನುಸಾರವಾಗಿ ಬೆಳೆಯುತ್ತಿರುತ್ತವೆ. ಉಗುರುಗಳ ಮೇಲೆ ಉದ್ದವಾಗಿ ಉಬ್ಬಿದ ತುದಿಗಳು ಆಹಾರದಲ್ಲಿ ಪ್ರೋಟೀನ್ ಕೊರತೆಯನ್ನು ಸೂಚಿಸುತ್ತವೆ. 'ಎ' ಜೀವಸತ್ವದ ಕೊರತೆಯಿಂದ ಉಗುರುಗಳ ಮೇಲೆ ತರಕಲು ಗೆರೆಗಳು ಮೂಡಲಾರಂಭಿಸುತ್ತವೆ. ಕಬ್ಬಿಣದ (ಐರನ್) ಕೊರತೆಯಿಂದಾಗಿ ಉಗುರುಗಳು ತರಿ ತರಿಯಾಗಿ, ಕಪ್ಪಗೆ ಒಣಗಲಾರಂಭಿಸುತ್ತವೆ. ಅಲ್ಲದೆ, ಶರೀರದಲ್ಲಿ ರಕ್ತದ ಕೊರತೆ, ಚರ್ಮ ಮತ್ತು ಕಿವಿಗಳು ಹಳದಿಯಾಗುವುದು ಮತ್ತು ಕಾಲಿನ ಮೀನಖಂಡ ಬಾತುಕೊಳ್ಳುತ್ತವೆ.

ಜಿಂಕ್ ಲೋಹದ (ಸತುವು) ಕೊರತೆಯಿಂದಾಗಿ ಕೂದಲು ಮತ್ತು ಉಗುರುಗಳು ಬೀಳುವುದು, ಬಿಳಿ ಕಲೆಯಾಗುವುದು ಮತ್ತು ಅವು ಮಂದಗತಿಯಲ್ಲಿ ಮುಂದುವರಿಯುವುದು ಪ್ರಾರಂಭವಾಗುತ್ತದೆ. ಹೆಂಗಸರಲ್ಲಿ ಅನಿಯಮಿತ ಮಾಸಿಕಧರ್ಮ ಮತ್ತು ಪುರುಷರಲ್ಲಿ ನಪುಂಸಕತೆ, ಅಂಗಾಂಗಗಳ ಅಪರಿಪಕ್ವತೆ, ಸಂಭೋಗದಲ್ಲಿ ನೋವು ಇತ್ಯಾದಿಗಳೆಲ್ಲಾ, ಜಿಂಕ್ ಕೊರತೆಯಿಂದಾಗುತ್ತವೆ. ಯಾರಿಗೆ ಸುವಾಸನೆ ಮತ್ತು ರುಚಿಯು ಗೊತ್ತಾಗುವುದಿಲ್ಲವೋ ಅವರಿಗೆ ಜಿಂಕ್ ಕೊರತೆಯಿರುತ್ತದೆ. ಜಿಂಕ್ ಕೊರತೆಯಿಂದಾಗಿ ಮಕ್ಕಳಲ್ಲಿ ಕಿವಿ ಬಾತುಕೊಳ್ಳುವುದು ಪ್ರಾರಂಭವಾಗುತ್ತದೆ. ಸಾಂಕ್ರಾಮಿಕ ಮತ್ತು ಸೈನಸ್ ರೋಗಗಳನ್ನು ಜಿಂಕ್ ಸೇವಿಸುವುದರಿಂದ ಶೀಘ್ರವೇ ದೂರ ಮಾಡಬಹುದು. ಇದರ ಕೊರತೆಯಿಂದಾಗಿಯೇ ಚರ್ಮ ಎಣ್ಣೆಯಂತೆ ಜಿಡ್ಡಾಗಿರುವುದು, ಮೊಡವೆಗಳು ಮೂಡುವುದು, ಟೊಂಕ, ತೊಡೆ, ಎದೆ, ಭುಜಗಳ ಶಿಥಿಲತೆ, ಕೂದಲು ಉದುರುವಿಕೆ, ಹಸಿವಾಗದಿರುವುದು, ನಿರಾಸೆ, ಆಲಸ್ಯ ಇತ್ಯಾದಿ ಲಕ್ಷಣಗಳು ಕಂಡು ಬರುತ್ತವೆ.

ಜೀವಸತ್ವ ಬಿ–೨ರ ಕೊರತೆಯಿಂದಾಗಿ ಚರ್ಮದಲ್ಲಿ ಮೇದಸ್ಸಿನ ಪ್ರಮಾಣ ತುಂಬಾ ಕಡಿಮೆಯಾಗುತ್ತದೆ. ತುಟಿ ಒಡೆಯುವುದು ಮತ್ತು ಧೀರ್ಘಕಾಲದ ವರೆಗೆ ಜೀವಸತ್ವ ಬಿ–೨ರ ಕೊರತೆಯಾದರೆ ಮೇಲಿನ ತುಟಿ ಕ್ರಮೇಣ ಚಿಕ್ಕದಾಗಿ ಕಡೆಗೆ ತೆಳುವಾಗಿಬಿಡುತ್ತವೆ. ಕಣ್ಣುಗಳು ಕೆಂಪಗಾಗುವುದು, ಕಣ್ಣುಗಳಲ್ಲಿ ಉರಿತ, ಹುಬ್ಬುಗಳು ಹಾರುವುದು ಮತ್ತು ಜೊಕ್ಕತನಕ್ಕೆ ಈ ಜೀವಸತ್ವದ ಕೊರತೆಯೇ ಕಾರಣ.

ಜೀವಸತ್ವ ಬಿ–೧೨ರ ಕೊರತೆಯ ಲಕ್ಷಣಗಳು ಈ ರೀತಿ ಇವೆ—ಮುಖದಲ್ಲಿ ಮೊಡವೆ, ಒಸಡುಗಳು ಬಾತುಕೊಂಡು ನೋವು, ರಕ್ತ ಬರುವುದು. ನಾಲಿಗೆ ಜಿಡ್ಡುಗಟ್ಟುವುದು. ಜೀವಸತ್ವ 'ಸಿ'ಯ ಕೊರತೆಯಿಂದಾಗಿ ಮುಖದ ಬಣ್ಣ ಮಸುಕಾಗುತ್ತದೆ.

ಜೀವಸತ್ವ ಬಿ-೬ರ (ಪೈರಿಡಾಕ್ಸೈನ್) ಕೊರತೆಯಿಂದ ಮಂಡೆ ಹುಬ್ಬುಗಳು, ಮೂಗು ಮತ್ತು ಕಿವಿಗಳ ಅಕ್ಕಪಕ್ಕದಲ್ಲಿ ಜಿಡ್ಡುಗಟ್ಟುತ್ತದೆ. ಪ್ರೋಟೀನಿನ ಅಭಾವದಿಂದ ಕೂದಲುಗಳು ಒಣಗಿ ಗಡುಸಾಗುತ್ತದೆ. ಅಲ್ಲದೆ, ನಾಲಿಗೆ, ಮುಖ, ಕೈಗಳು ಒಣಗಿ ಒಡೆಯಲಾರಂಭಿಸುತ್ತವೆ.

ಜೀವಸತ್ವ 'ಎ' ಯ ಕೊರತೆಯಿಂದ ಮೊಡವೆಗಳೇಳುವುದು, ರಾತ್ರಿ ಕಣ್ಣು ಕಾಣದಿರುವುದು, ಓದುವಾಗ ಕಣ್ಣುಗಳಲ್ಲಿ ನೋವುಂಟಾಗುವುದು, ಕಣ್ಣು ತುರಿಕೆ, ಕಣ್ಣುರೆಪ್ಪೆ ಬಾತುಕೊಳ್ಳುವುದು ಮತ್ತು ತಲೆನೋವು ಬರಲು ಪ್ರಾರಂಭವಾಗುತ್ತವೆ.

ರೋಗೋಪಚಾರಕ್ಕೆ ಯೋಗ್ಯ ಪೋಷಣೆ :

ಬಹಳಷ್ಟು ರೋಗಗಳ ಚಿಕಿತ್ಸೆಯು ಉತ್ತಮ ಪೋಷಕಾಂಶಗಳಿಂದಲೇ ಸಾಧ್ಯ. ಯಾಕೆಂದರೆ ಈ ರೋಗಗಳು ಕುಪೋಷಣೆಯಿಂದಲೇ ಹುಟ್ಟಿಕೊಳ್ಳುತ್ತವೆ. ಇವುಗಳ ಲಕ್ಷಣವೇನೆಂದರೆ—ಸಿಡುಕುತನ, ನಿದ್ದೆ ಬರದಿರುವುದು, ನಿರಾಸೆ, ದಣಿವು, ತಲೆನೋವು, ಎದೆ ಮತ್ತು ಹೊಟ್ಟೆಯಲ್ಲಿ ನೋವು, ಮಸುಕಾಗಿ ಕಾಣಿಸುವುದು, ಬೇಗನೇ ಗಂಟಲು ಕೆಡುವುದು, ರಾತ್ರಿಹೊತ್ತು ಭಯವಾಗುವುದು, ಹಸಿವಾಗದಿರುವುದು. ಈ ಮೇಲಿನ ರೋಗಗಳಿಗೆಲ್ಲಾ ಥೈಮಿನ್‌ನ (ಜೀವಸತ್ವ 'ಬಿ') ಕೊರತೆಯೇ ಕಾರಣವೆಂದು ಡಾ|| ಲಾಸ್‌ಡೈಲ್‌ರು ಕಂಡು ಹಿಡಿದಿದ್ದಾರೆ. ಅಧಿಕಾಂಶ ರೋಗಿಗಳು ಆಮ್ಲಕ್ಷಾರಯುಕ್ತ ಆಹಾರ ಸೇವಿಸುತ್ತಾರೆ. ಇವರಲ್ಲಿ ಕಡಿಮೆ ಕ್ಯಾಲೋರಿಯಿರುತ್ತದೆ. ಈ ರೋಗಿಗಳು ಆಹಾರ

ದೊಂದಿಗೆ ೨ ರಿಂದ ೮ ವಾರಗಳವರೆಗೆ ಒಂದೇ ಸಮನೆ ೧೫೦ ರಿಂದ ೩೦೦ ಮಿಲಿ ಗ್ರಾಂ ಥೈಯಾಮಿನ್ ಅಂದರೆ ಜೀವಸತ್ವ ಬಿ-೧ ನ್ನು ತೆಗೆದುಕೊಳ್ಳಬೇಕು. ಜೀವಸತ್ವ ಬಿ-೧ ನ್ನು ಕಡಿಮೆಗೊಳಿಸುವಲ್ಲಿ ತಂಬಾಕು, ಕಾಫಿ, ಚಹ, ಸಿಗರೇಟ್ ಮತ್ತು ಚಾಕಲೇಟುಗಳು ವಿಶೇಷವಾಗಿ ಸಹಕರಿಸುತ್ತವೆ.

ಕೇವಲ ಕುಪೋಷಣೆಯಿಂದ ಹುಟ್ಟಿದ ರೋಗಗಳಲ್ಲಿ ಮಾತ್ರವಲ್ಲದೆ. ಇತರೆ ರೋಗಗಳಲ್ಲೂ ಜೀವಸತ್ವ ಮತ್ತು ಪೌಷ್ಟಿಕ ಆಹಾರಗಳು ಪರಿಣಾಮಕಾರಿ ಯೆಂದು ಸಿದ್ಧವಾಗುತ್ತವೆ. 'ವೈರಸ್' ರೋಗಗಳಲ್ಲಿ ಜೀವಸತ್ವ-'ಸಿ' ಯ ಇಂಟ್ರಾವೀನಸ್ ಇಂಜೆಕ್ಷನ್ ತುಂಬಾ ಲಾಭಕಾರಿ.

ಔದ್ಯೋಗಿಕ ಪ್ರಗತಿಯಿಂದ ಭೂಮಿಗತ ವಿಷಾಕ್ತ-ಧಾತುಗಳಿಂದಾಗಿ ಇಡೀ ವಾತಾವರಣ ದೂಷಿತಗೊಂಡಿದೆ. ಇವರ ಪ್ರಭಾವ ಆರೋಗ್ಯದ ಮೇಲೂ ಬೀಳುತ್ತದೆ. ಈ ದೂಷಿತ ವಾತಾವರಣದ ಪ್ರಭಾವವನ್ನು ಕಡಿಮೆಗೊಳಿಸಲು ಮೊಟ್ಟೆ, ಜೆಂದ (ಅವರೆ) ಕಾಯಿಗಳು ಮತ್ತು ಹಾಲನ್ನು ಸೇವಿಸಬೇಕು; ಇವನ್ನು ಸೇವಿಸುವುದರಿಂದ ಶರೀರಕ್ಕೆ 'ಸಲ್ಫ ಹೈಡ್ರಲ್' (ಸಲ್ಫರ್, ಹೈಡ್ರೋಜನ್ ಕಾಂಪೌಂಡ್) ಸಿಗುತ್ತದೆ. ಈ ಪ್ರಕ್ರಿಯೆಯೇ 'ಚಿರೇಶನ್', ಮೆಣಸಿನ ಕಾಯಿ, ಈರುಳ್ಳಿ ಬೆಳ್ಳುಳ್ಳಿ ಇತ್ಯಾದಿಗಳಲ್ಲಿ ಸಲ್ಫರ್ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತದೆ. ಸಲ್ಫರ್ ಎಕ್ಸ್‌ರೇ ಮತ್ತು ಕೋಶಕೀಯ ವಿಕೀರ್ಣದ ಹಾನಿಯನ್ನು ತಡೆಯುತ್ತದೆ. ೩ ಗ್ರಾಂಗಿಂತ ಹೆಚ್ಚು ಪ್ರಮಾಣದಲ್ಲಿ ಜೀವಸತ್ವ-'ಸಿ' ಯನ್ನು ಸೇವಿಸುವುದರಿಂದ ವಿಷಾಕ್ತ ಧಾತುಗಳ ಪ್ರಭಾವವನ್ನು ನಷ್ಟಗೊಳಿಸಬಹುದು. ಹಾಗಂತ ಜೀವಸತ್ವಗಳ ಒಂದೇ ರೀತಿಯ ಫಾರ್ಮುಲಾ (ಸೂತ್ರ ಪಟ್ಟಿ) ಹೇಳಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಬೇರೆ ಬೇರೆ ಅನುಪಾತದಲ್ಲಿ ಅದರ ಅಗತ್ಯವಿರುತ್ತದೆ.

—ಡಿ. ಎನ್. ಶ್ರೀನಾಥ್

ಅದೃಷ್ಟ ಗಾಜಿನಂತೆ. ಹೊಳಪು ಹೆಚ್ಚಾದಂತೆಲ್ಲಾ ಬೇಗ ಒಡೆಯಬಲ್ಲದು.

—ಸೈರಸ್

ಟೀ ಪಾನೀಯದ ರಮ್ಯ ಕಥೆ

ಒಂದು ಹಳೇ ಜಪಾನೀ ಕಥೆಯ ಪ್ರಕಾರ ಟೀ ಪಾನಿಯವು ಭಾರತ ದೇಶದ ಒಬ್ಬ ಪ್ರಸಿದ್ಧ ಸನ್ಯಾಸಿಯ ಕಣ್ಣು ರೆಪ್ಪೆಗಳಿಂದ ಹುಟ್ಟಿಬಂತು. ಈ ಸನ್ಯಾಸಿಯೇ ಕರಾಟೆಯನ್ನು ಪ್ರಚಾರಕ್ಕೆ ತಂದವನೆಂದೂ ಹೇಳುತ್ತಾರೆ. ಇವನ ಹೆಸರು ಜೋದ್ಧಿ ಧರ್ಮನೆಂದು.

ಜೋದ್ಧಿ ಧರ್ಮನು ಬುದ್ಧ ಮತಪ್ರಚಾರಕ್ಕಾಗಿ ಚೀನಾ ದೇಶದಲ್ಲಿ ಪ್ರವಾಸ ಮಾಡುತ್ತಿದ್ದನು. ಬೀಜಿಂಗ್‌ನಲ್ಲಿ ಈ ಸನ್ಯಾಸಿಯು ತಾನು ಒಂಬತ್ತು ವರ್ಷಗಳವರೆಗೆ ನಿದ್ದೆ ಮಾಡುವುದಿಲ್ಲವೆಂದೂ ಈ ಕಾಲವನ್ನು ಪೂರ್ತಾ ಧ್ಯಾನದಲ್ಲೇ ಕಳೆಯುವುದಾಗಿಯೂ ಪ್ರತಿಜ್ಞೆ ಕೈಗೊಂಡನು. ಆದರೆ ಈ ಪ್ರತಿಜ್ಞೆಯ ಅನುಷ್ಠಾನದಲ್ಲಿ ಅವನಿಗೆ ನಿದ್ದೆ ಬಂತು. ಎಚ್ಚರವಾದಾಗ ಅವನಿಗೆ ತನ್ನ ಈ ಅಶಕ್ತತೆಯ ಮೇಲೆ ತನಗೇ ಅತೀವ ಕೋಪ ಬಂದಿತು. ತನ್ನ ಎರಡು ಕಣ್ಣುರೆಪ್ಪೆಗಳನ್ನು ಜಿಗುಪ್ಸೆಯಿಂದ ಕಿತ್ತೊಗೆದನು. ಕಣ್ಣುರೆಪ್ಪೆಗಳು ಬಿದ್ದ ಜಾಗದಲ್ಲಿ ಒಂದು ಪವಾಡ ನಡೆಯಿತು. ಈ ಕಣ್ಣುರೆಪ್ಪೆಗಳು ಬಿದ್ದ ಕಡೆ ಒಂದು ವಿಚಿತ್ರವಾದ ಪೊದೆಯಂತಹ ವೃಕ್ಷವು ಕಾಣಿಸಿತು. ಇದು ಕೇವಲ ಎರಡು ಎಲೆ ಮತ್ತು ಒಂದು ಮೊಗ್ಗು. ಇದಕ್ಕೆ ನಿದ್ರೆಯನ್ನು ತಡೆಗಟ್ಟುವ ಶಕ್ತಿಯಿತ್ತು.

ಟೀ ಪಾನೀಯಕ್ಕೆ ಈ ಭಾರತ ದೇಶದ ಸಂಬಂಧ ಪ್ರತೀಕವೋ ಎಂಬಂತೆ. ಭಾರತ ದೇಶವು ಪ್ರಪಂಚದ ಟೀ ಬೆಳೆಯುವ ಮತ್ತು ಕುಡಿಯುವ ಜನಾಂಗದ ದೇಶ. ಇಲ್ಲಿಯ ಜನರು ವರ್ಷ ಒಂದರಲ್ಲಿ ಸುಮಾರು ೭೫ ಕೋಟಿ ಕೇಜಿಗಳಷ್ಟು ಟೀ ಸೊಪ್ಪಿನ ಪಾನೀಯವನ್ನು ಕುಡಿಯುತ್ತಾರೆ. ಭಾರತ ದೇಶ ಪ್ರಪಂಚದಲ್ಲಿನ ಟೀ ಉತ್ಪಾದನಾ ದೇಶಗಳಲ್ಲಿ ಮೂರನೇ ಒಂದು ಭಾಗದಷ್ಟು ಉತ್ಪಾದಿಸುತ್ತಿದ್ದರೂ ಇಲ್ಲಿ ತಲಾ ಟೀ ಪಾನೀಯವು ವರ್ಷ ಒಂದರ ಕೇವಲ ೦.೬೪ ಕೇಜಿ ಮಾತ್ರ. ಐರ್ಲೆಂಡ್ ಜನರು ವರ್ಷ ಒಂದರ ತಲಾ ೩.೭೮ ಕೇಜಿ ಟೀ ಕುಡಿದು, ಟೀ ಕುಡಿಯುವುದರಲ್ಲಿ ಅವರು ಒಂದು ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಇಂಗ್ಲೆಂಡಿನ ತಲಾ ವರ್ಷ ಒಂದರ ಟೀ ಸೇವನೆಯ ೩.೩೫ ಕೆ.ಜಿ. ಇದೆ. ಬ್ರಿಟನ್ನಿನ ಜನಸಂಖ್ಯೆ ಪ್ರಪಂಚದ ಜನಸಂಖ್ಯೆಯ ಕೇವಲ ೧.೫ ರಷ್ಟಾದರೂ ಅವರು ಕುಡಿಯುವ ಟೀ ಪ್ರಪಂಚದ ಟೀ ಉತ್ಪಾದನೆಯ ಶೇ. ೩೦

—"ಸಾಧಾರ"

ರಷ್ಟನ್ನು ಆಮದು ಮಾಡಿಕೊಳ್ಳುತ್ತಾರೆ. ಆ ದೇಶದ ಜನರ ಟೀ ಸೇವನೆಯು ತಲಾ ವರ್ಷ ಒಂದರ ೧೬೫೦ ಕಪ್ಪುಗಳು ಅಥವಾ ದಿನಾ ಸುಮಾರು ನಾಲ್ಕೂವರೆ ಬಟ್ಟಲುಗಳು.

೧೯೫೬ನೆಯ ಇಸವಿಯಲ್ಲಿ ನಮ್ಮ ದೇಶದ ಟೀ ಉತ್ಪಾದನೆಯು ೨೩೬.೫ ದಶಲಕ್ಷ ಕೆ.ಜಿ.ಗಳು. ಇದು ಈ ವರ್ಷ ೪೮೫.೬ ದಶಲಕ್ಷ ಕೆ.ಜಿ.ಗಳಿಗೇರಿದೆ. ೧೯೮೧ರ ಉತ್ಪಾದನೆಯು ೫೬೧ ದಶಲಕ್ಷ ಕೆ.ಜಿ.ಗಳಷ್ಟಾಗಿದ್ದು ಇದೊಂದು ದಾಖಲೆಯೇ ಆಗಿದೆ. ಕ್ರಿ.ಶ. ೨೦೦೦ದ ವೇಳೆಗೆ ಆಂತರಿಕ ಬೇಡಿಕೆ ಮತ್ತು ರಫ್ತು ಹೆಚ್ಚಳದಿಂದ ಉತ್ಪಾದನೆಯು ೧೨೦೦ ದಶಲಕ್ಷ ಕೆ.ಜಿ.ಗಳಿಂದ ಸುಮಾರು ೧೪೦೦ ದಶಲಕ್ಷ ಕೆ.ಜಿ. ಗಳಷ್ಟಾಗುವುದೆಂದು ಅಂದಾಜು ಮಾಡಿದ್ದಾರೆ.

ಭಾರತ ದೇಶದಲ್ಲಿ ಟೀ ಪಾನಿಯವು ಸಕ್ಕರೆ ಹಾಲಿನೊಂದಿಗೆ ಸೇವಿಸಲ್ಪಡುವ ಒಂದು ಬಿಸಿ ಪಾನೀಯ. ಆದ್ದರಿಂದ ಟೀ ಸೇವನೆಯು ಹೆಚ್ಚಿದಷ್ಟು ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆ ಮತ್ತು ಹಾಲು ಉತ್ಪಾದನೆ ಏರಬೇಕಾಗುವುದು. ಇದರ ಜೊತೆಗೆ ದಿಢೀರ್ ಟೀ ತಯಾರಿಕೆ ಮತ್ತು ಲಘುಪಾನೀಯಗಳ ಪೈಪೋಟಿಯನ್ನೂ ಎದುರಿಸಬೇಕಾಗುವುದು.

ಟೀ ಉದ್ಯಮದ ಉದ್ಯೋಗಸ್ಥರು ಹೇಳುವಂತೆ ಭಾರತೀಯರು ಒಳ್ಳೆಯ ಚಹಾ ಕುಡಿಯಬೇಕಾದರೆ ಇನ್ನೂ ಉತ್ತಮ ಮಟ್ಟದ ಚಹಾವನ್ನು ಉತ್ಪಾದಿಸಬೇಕು. ಒಂದು ಕೆ.ಜಿ. ಟೀ ಸೊಪ್ಪಿನಿಂದ ಬಸಿಯುವ ಡಿಕಾಕ್ಷನ್ ಪ್ರಮಾಣವನ್ನೂ ಹೆಚ್ಚಿಸಿಕೊಳ್ಳಬಹುದು.

—ಜಿ. ಕೆ. ಎಸ್. ಅಯ್ಯಂಗಾರ್

ನಿನಗೆ ಯಾರೂ ಕೇಡುಮಾಡಬಾರದೆಂದು ಬಯಸುವೆಯಾದರೆ, ನೀನು ಯಾರಿಗೂ ಕೇಡು ಮಾಡಬೇಡ. ನೀನೂ ಬದುಕು, ಇತರರೂ ಬದುಕಲಿ.

—ಇಪಿಕ್ಯೂರಸ್

ಪುಸ್ತಕ: ಜನರ ಮನಸ್ಸನ್ನು ಜಾಗೃತಗೊಳಿಸುವ, ಆಲೋಚನೆಯನ್ನು ಪ್ರಚೋದಿಸುವ ಒಂದು ವಸ್ತು.

—ವಿ. ಸೀತಾರಾಮಯ್ಯ

ನಿರ್ಲಜ್ಜ !

ಇಂದೂ ಎಂದಿನಂತೆಯೇ ಎದುರು ಮನೆಯ ತೆರೆದ ಕಿಟಿಕಿಯೆದುರು ಆರಾಮ ಕುರ್ಚಿಯ ಮೇಲೊರಗಿದ ಜಯದೇವ ಒಂದೇಸಮನೆ ಸಿಗರೇಟಿನ ಹೊಗೆ ಉಗುಳುತ್ತಿದ್ದ.

ಕೋಣೆಯೊಳಗೆ ನುಗ್ಗುತ್ತಲೇ ಈ ದೃಶ್ಯವನ್ನು ಕಂಡ ಪತ್ನಿ ಸಾವಿತ್ರಿ ಕಿಡಿಕಿಡಿಯಾದಳು. ಅವಳ ಮನದ ಅಗ್ನಿಯಲ್ಲಿ ದಾಹಕ ಶಕ್ತಿಯಿರುತ್ತಿದ್ದರೆ ಜಯದೇವ ಇಷ್ಟರೊಳಗೇ ಉರಿದು ಬೂದಿಯಾಗುತ್ತಿದ್ದ ! ಆದರೆ ಅವಳಲ್ಲಿ ಆ ಶಕ್ತಿಯಿರದುದರಿಂದಲೇ ಜಯದೇವ ತನ್ನ ಸುಂದರಾಕೃತಿಯನ್ನು ಪ್ರದರ್ಶಿಸುತ್ತ ಹಾಗೆಯೇ ಒರಗಿದ್ದ. ಮನಸ್ಸಿನ ಬೆಂಕಿ ಸಾವಿತ್ರಿಯನ್ನೇ ಸುಡತೊಡಗಿತು....ಆ ಉರಿಯಿಂದ ಅವಳು ಸ್ವತಃ ಚಡಪಡಿಸತೊಡಗಿದಳು.

ಅಷ್ಟರೊಳಗೆ ಎದುರು ಕೋಣೆಯ ಕಿಟಕಿಯ ಪರದೆ ಮುಚ್ಚಿಕೊಂಡಿತು. ಸಾವಿತ್ರಿ ಪತಿಯತ್ತ ಮುಖ ತಿರುಗಿಸಿ-'ನಿರ್ಲಜ್ಜತನಕ್ಕೂ ಮಿತಿ ಬೇಡವೆ?' ಎಂದಳು. ಒಂದಿಷ್ಟೂ ಗಾಬರಿಯಾಗದೆ, ಸಹಜವಾಗಿಯೇ ಸಿಗರೇಟು ಸೇದುತ್ತ ಜಯದೇವನೆಂದ-"ಮೊದಲು ಮಾನ ಮರ್ಯಾದೆ, ಲಜ್ಜೆ, ನಾಚಿಗೆ-ಎಲ್ಲದರ ಬಗೆಗೂ ಯೋಚಿಸುತ್ತಿದ್ದೆ....ಆದರೆ ನಿನ್ನ ವರ್ತನೆಯಿಂದಾಗಿ ಈಗ ಅದೆಲ್ಲವನ್ನೂ ತೊರೆದಿದ್ದೇನೆ !"

"ನನ್ನ ವರ್ತನೆ ?"

"ಹೌದು....ನೀನೇ ನನ್ನ ಜೀವನದಲ್ಲಿ ಅಶಾಂತಿಯ ಬೀಜ ಬಿತ್ತುತ್ತಿರುವಿ" ಬಹು ಸಮಾಧಾನದಿಂದ ಅವನೆಂದ.

"ನಿಮಗೆ ಒಂದಿಷ್ಟೂ ನಾಚುಗೆಯೆನಿಸುವುದಿಲ್ಲವೆ ? ಮಾವನ ಮನೆಯಲ್ಲಿ ಅವರ ಅನ್ನವನ್ನೇ ತಿನ್ನುತ್ತ ಪರಸ್ತ್ರೀಯರ ಮೇಲೆ ಕಣ್ಣಿಡುವುದು ಸಭ್ಯತೆಯೆ ? ಥೂ....ಅವಳಾದರೂ ಸುಂದರಿಯೆ ? ಎಲುಬು ಮಾತ್ರ ಇರುವ ಈ ಕ್ಷಯ ರೋಗಿಣಿ ಇಂದೋ ನಾಳೆಯೋ ಕಣ್ಣು ಮುಚ್ಚುವಳು....ಆ ವಿಧವೆಯ ಮೇಲೆ ಆಸಕ್ತಿಯೇ ನಿಮಗೆ ? ಅವಳನ್ನೇ ಹಗಲಿರುಳೂ ನೋಡುತ್ತ ಇರುವಿರಲ್ಲಾ ? ಎಂಥ ಅಸಭ್ಯತೆ !

ಜುಲೈ ೧೯೮೨ ರ 'ನವನೀತ' ಹಿಂದೀ ಮಾಸಪತ್ರಿಕೆಯಯಲ್ಲಿ ಪ್ರಕಟವಾದ ಶ್ರೀ ತ್ರಿಲೋಕೀನಾಥಶ್ರೀವಾಸ್ತವ್ ಅವರ 'ಬೇಶರ್ಮ್' ಎಂಬ ಹಿಂದಿ ಕತೆಯ ಸಾರ ಸಂಗ್ರಹ]

ಜಯದೇವ ಬಲು ಜೋರಾಗಿ ನಕ್ಕುಬಿಟ್ಟ....

"ಮನುಷ್ಯ ತುಂಬ ರಹಸ್ಯಮಯನಾಗಿದ್ದಾನೆ, ಸಾವಿತ್ರೀ....ಇಲ್ಲದಿದ್ದರೆ ನಿನ್ನಂತಹ ದಪ್ಪ ದೇಹದ ಹೆಂಗಸನ್ನು ಬಿಟ್ಟು ಆ ಎಲುಬುಗೂಡಿನ ಮೇಲೆ ಮನಸಾಗುತ್ತಿತ್ತೆ ?" ಎಂದ.

'ನಿಮ್ಮ ಈ ಆರಾಮು ಕುರ್ಚಿಯನ್ನು ಒಲೆಗೆ ಹಾಕುವೆ'

'ಹಾಗೆಯೇ ಮಾಡು....ಅಡ್ಡಿ ಬರುವವರಾರು ನಿನ್ನ ತಂದೆಯ ಮನೆ.... ಅವರದೇ ಈ ಕುರ್ಚಿ....ನಿನಗೂ ಅದರ ಮೇಲೆ ಪೂರ್ಣಾಧಿಕಾರ ಇದೆಯನ್ನು.... ಆದರೆ ಇದರಿಂದ ನಿನಗೆ ಸಿಗುವ ಲಾಭವಾದರೂ ಏನು ? ಇಲ್ಲಿ ಕುರ್ಚಿಯಿರದ ಮೇಲೆ ನಾನು ಆ ಮನೆಯ ಕುರ್ಚಿ ಅರ್ಥಾತ್ "ವಿಸಿಟರ್ಸ್‌ಕುರ್ಚಿ'ಯ ಮೇಲೆಯೇ ಹೋಗಿ ಕುಳಿತಿರಬೇಕಾಗುವುದು"—ನಗುತ್ತಾ ಜಯದೇವನೆಂದ.

"ಏನೆಂದಿರಿ ? ನೀವು ಆ ಮನೆಗೆ ಹೋಗುವಿರಾ ?"–ಕಲ್ಲಾಗಿ ನುಡಿದಳು ಸಾವಿತ್ರಿ.

"ಹೋಗುವೆನೆಂದೇನೂ ಹೇಳಲಿಲ್ಲ. ನಾನು ಕೇಂದ್ರಚ್ಯುತನಾದರೆ ಮುಂದೇ ನಾದೀತೋ ಹೇಳಲಾರೆ—ಎಂದಿಷ್ಟೇ ನನ್ನ ಮಾತಿನ ಅರ್ಥ".

ಸಾವಿತ್ರಿ ಸಿಟ್ಟಾಗಿ ಎದ್ದುನಿಂತಳು....ಸೀರೆಯ ಸೆರಗನ್ನು ಟೊಂಕಕ್ಕೆ ಬಿಗಿ ಯುತ್ತಾ ಅವಳೆಂದಳು.–"ಕೇಂದ್ರಚ್ಯುತನಾಗುವುದೆಂದರೇನೆಂದು ನಾನೀಗಲೇ ನಿಮಗೆ ಮನದಟ್ಟು ಮಾಡಿಸುವೆ. ಮಾವನ ಮನೆಯಲ್ಲಿ ಕುಳಿತು ದರ್ಪ ತೋರಿ ಸುತ್ತ, ಅಸಭ್ಯತನ ಮಾಡುತ್ತ ಕಾಲ ಕಳೆಯುವ ನಿಮಗೆ ತಕ್ಕ ಶಿಕ್ಷೆ ವಿಧಿಸಲೇ ಬೇಕು".

ಮರುಕ್ಷಣವೇ ಆಕೆ ಕಾಲಪ್ಪಳಿಸುತ್ತ ಅಲ್ಲಿಂದ ಹೊರಟುಹೋದಳು.ಜಯದೇವ ಪುನಃ ಕಿಟಕಿಯತ್ತ ದೃಷ್ಟಿ ಹರಿಸಿದ. ಅದೇವೇಳೆ ಆ ಕೋಣೆಯ ಪರದೆಯೂ ಸರಿಯಿತು.

ಆರಾಮುಕುರ್ಚಿಯ ಮೇಲೊರಗಿದಾಗ ಅವನಿಗೆ ಬೇರೇನು ಕಾಣಿಸದಿದ್ದರೂ ಎದುರು ಕೋಣೆಯ ಹಾಸಿಗೆಯ ಒಂದಂಶ ಮಾತ್ರ ತೋರುತ್ತಿತ್ತು. ದಪ್ಪ ಗೂದಲಿನ ತಲೆ, ಬಿಳಿಮೋರೆ ಹಾಗೂ ಕುಂಕುಮವಿಲ್ಲದ ಹಣೆ–ಇಷ್ಟು ಮಾತ್ರ ಕಾಣಿಸುವುದು.

ಕ್ಷಯರೋಗದ ಕೀಟಾಣುಗಳು ದೇಹದ ನೆತ್ತರನ್ನೆಲ್ಲ ಹೀರಿ ತೆಗೆಯುತ್ತಿರು ವಾಗ ಕೂದಲು ಮಾತ್ರ ಅದೆಂತು ಸೊಂಪಾಗಿ ಬೆಳೆಯುತ್ತಿದೆ ಯಾವ ಆಸೆ

ಯಿಂದ ಆ ನಯನದ್ವೀಪಗಳು ಪ್ರಜ್ವಲಿಸುತ್ತಿವೆ? ಜಯದೇವ ಆಗಾಗ ಯೋಚಿಸುತ್ತಿದ್ದ.

ಜಯದೇವ ಎಂದಾದರೂ ಆಕೆಯೊಡನೆ ಮಾತಾಡಲೆಳಸಿದ್ದನೆ! ಅವಳನ್ನು ಕಂಡು ಮಂದಹಾಸ ಬೀರಿದ್ದನೇ ಇಲ್ಲ.... ಅಂತಹದೇನನ್ನೂ ಆತ ಇದುತನಕ ಮಾಡಿಲ್ಲ.... ಕಿಟಕಿಯಿದುರು ಕುಳಿತು ಅವಳನ್ನು ನೋಡುತ್ತಿದ್ದನಷ್ಟೇ. ಆ ಮೌನದೃಷ್ಟಿಯಲ್ಲಿ ಶಾಂತ ಕೋಮಲ ಮಮತೆ ಹೊರಹೊಮ್ಮುತ್ತಿರುವಂತೆ ಭಾಸವಾಗುತ್ತಿತ್ತು.

ಜಯದೇವನ ದೃಷ್ಟಿಯೂ ಆ ಮೃತ್ಯುಪಥ ಯಾತ್ರಿಣಿಗೆ ದೀಪಜ್ಯೋತಿಯಂತೆ ಇರುವುದೆ? ಇಲ್ಲದಿದ್ದರೆ ಇವನತ್ತ ದೃಷ್ಟಿ ಹರಿಯುತ್ತಲೇ, ಅವಳ ಕಾಂತಿಹೀನ ಮುಖ ಉಜ್ವಲವಾಗುವುದೇಕೆ?

ಈ ಆರಾಮಕುರ್ಚಿಯ ಮೇಲೊರಗಿ ಅವನೇನೂ ನೋಡಲಾರ. ಆದರೆ ಇಲ್ಲಿ ನಿಂತುಕೊಂಡರೆ ಕೋಣೆಯ ಒಳದೃಶ್ಯ ಚೆನ್ನಾಗಿ ಕಾಣಿಸುವುದು. ಅಲ್ಲಿ ಒಂದು ಮಂಚ. ಆಕೆ ಮಂಚದ ಮೇಲೊರಗಿದ್ದಾಳೆ.... ಅದರ ಪಕ್ಕದಲ್ಲೇ ಒಂದು ಕುರ್ಚಿ.... ಜಯದೇವ ಅದನ್ನೇ 'ವಿಸಿಟರ್ಸ್ ಕುರ್ಚಿ'ಯೆಂದು ಕರೆಯುತ್ತಾನೆ.

ತಲೆಯ ಬದಿಯಲ್ಲಿ ಸಣ್ಣ ಸ್ಟೂಲಿನ ಮೇಲೆ ನೀರಿನ ಹೂಜಿಯಿದೆ.... ಅದಕ್ಕೆ ಗ್ಲಾಸು ಮುಚ್ಚಲಾಗಿದೆ.... ಕಾಲಿನ ಬದಿಯಲ್ಲಿದ್ದ 'ಬುಕ್ ಶೆಲ್ಫ್'ನಲ್ಲಿ ವಿಧದ ಪುಸ್ತಕಗಳೂ ಪತ್ರಿಕೆಗಳೂ ಇವೆ. ಅದರ ಪಕ್ಕದ ಸ್ಟ್ಯಾಂಡಿನಲ್ಲಿ 'ಔಷಧಿಗಳಿವೆ. ಅವಳಸೇವೆಗಾಗಿ ಒಬ್ಬ ಸೇವಕಿಯನ್ನು ನೇಮಿಸಲಾಗಿದೆ. ಅವಳು ಸ್ನಾನ ಮಾಡಿಸುತ್ತಾಳೆ. ತಲೆಬಾಚುತ್ತಾಳೆ.... ಊಟ ಮಾಡಿಸುತ್ತಾಳೆ.... ಕೆಲವೊಮ್ಮೆ ಕಿಟಕಿಯ ಪರದೆಯನ್ನು ಹಾಕುವುದುಂಟು. ಆದರೆ ಅದು ಹೆಚ್ಚು ಹೊತ್ತು ಉಳಿಯುವುದಿಲ್ಲ.... ಮತ್ತೆ ಜಯದೇವ ನಿರ್ಲಿಪ್ತನಾಗಿ ಆಕೆಯನ್ನು ನೋಡತೊಡಗುವ.

ಆ ತರುಣಿಯ ಹೆಸರು ಅಮಿತಾ ಎಂದೂ ಮದುವೆಯಾದ ಎರಡೇ ವರ್ಷಗಳಲ್ಲಿ ಆಕೆ ವಿಧವೆಯಾದಳೆಂದೂ ಜಯದೇವನಿಗೆ ಅದೆಂತೋ ತಿಳಿಯಿತು. ವಿಧವೆಯಾದ ಕೆಲವರ್ಷಗಳಲ್ಲೇ ಅವಳಿಗೆ ಕ್ಷಯರೋಗ ಅಂಟಿತು. ಸುಮಾರು ಮೂರು ವರ್ಷಗಳಿಂದ ಅವಳದನ್ನು ಅನುಭವಿಸುತ್ತಿದ್ದಾಳೆ.

ನಿವೃತ್ತಾಧಿಕಾರಿಯ ಆ ಮಗಳಿಗೆ ಇಬ್ಬರು ಸೋದರರೂ ಇದ್ದಾರೆ. ಯಾರೂ ಅವಳನ್ನು ಕಡೆಗಣಿಸುವುದಿಲ್ಲ. ಆದರೆ ಹೆಚ್ಚು ಪ್ರೀತಿಸುವುದೂ ಇಲ್ಲ. ವಿಧವೆಯಾಗುತ್ತಲೇ ಆಕೆ ತವರಿಗೆ ಬಂದಳು.... ಮಗಳ ಮೇಲೆ ತಂದೆಗೆ ಅಪಾರ ಮಮತೆ.... ಆದರೆ ಅಕಸ್ಮಾತ್ ಈ ಕ್ಷಯರೋಗ ಅಂಟಿದುದರಿಂದ ಅವರಿಗೆ

ಆಘಾತ ಉಂಟಾಯಿತು. ಹೆಂಡತಿ ತೀರಿದ ಬಳಿಕ ತಮ್ಮ ವಾಸಕ್ಕಾಗಿ ಅವರು ಈ ಮೂರನೇ ಮಹಡಿಯಲ್ಲಿ ಕಿರುಕೋಣೆಯೊಂದನ್ನು ಕಟ್ಟಿಸಿದ್ದರು. ಆದರೆ ತಾನೊಂದು ಬಗೆದರೆ ದೈವ ಇನ್ನೊಂದು ಬಗೆಯಿತೆಂಬಂತೆ ಸ್ವಂತಕ್ಕಾಗಿ ಕಟ್ಟಿಸಿದ ಕೋಣೆಯನ್ನು ಮಗಳಿಗೆ ಬಿಟ್ಟುಗೊಟ್ಟು ತಾವು ಕೆಳಗೆ ಇರತೊಡಗಿದರು.

ಮಗಳಿಗಾಗಿ ಸೇವಕಿಯೊಬ್ಬಳನ್ನು ನೇಮಿಸಿ, ಪೌಷ್ಟಿಕ ಆಹಾರದ ವ್ಯವಸ್ಥೆಯನ್ನು ಉತ್ತಮ ಚಿಕಿತ್ಸೆಯ ಏರ್ಪಾಡನ್ನೂ ಅವರು ಮಾಡಿದ್ದರು.

ದಿನಾಲೂ ಬೆಳಿಗ್ಗೆ ಮತ್ತು ಸಂಜೆ ಅವರು ಮಗಳನ್ನು ನೋಡಲು ಬರುತ್ತಾರೆ.... ವೃದ್ಧಾಪ್ಯದಿಂದಾಗಿ ಮೆಟ್ಟಿಲುಗಳನ್ನೇರಿ ಬರಲು ತುಂಬ ಕಷ್ಟವಾಗುತ್ತದೆ....

ಇಬ್ಬರೂ ಅಣ್ಣಂದಿರೂ ಹಾಗೂ ಅತ್ತಿಗೆಯವರು ದಿನಾಲೂ ಒಮ್ಮೆ ಬಂದು ಹೋಗುವರು....ಅತ್ತಿಗೆಯವರಿಗೆ ಹಾರ್ದಿಕ ಪ್ರೀತಿ ಇರದಿದ್ದರೂ ತಮ್ಮ ಮಾವ ಹಾಗೂ ಪತಿ ಮಹಾಶಯರಿಗಾಗಿ ಪ್ರೀತಿಯ ಸೋಗು ಹಾಕಬೇಕಾಗುತ್ತದೆ. ಅವರ ಮಾತಿನಲ್ಲಿ ಇದು ಆಗಾಗ ಪ್ರಕಟವಾಗುವುದು. ಅಮಿತಾ ಎಲ್ಲವನ್ನು ಅರಿತೂ ಅರಿಯದವಳಂತೆ ಇದ್ದುಬಿಡುವಳು.

೧೬ ಅಡಿ ದೂರದಲ್ಲಿದ್ದರೂ ಜಯದೇವನಿಗೆ ಅವರ ವಾರ್ತಾಲಾಪ ಅಲ್ಪ ಸ್ವಲ್ಪ ಕೇಳಿಸುತ್ತದೆ. ಆತ್ಮೀಯತೆಯ ವ್ಯವಹಾರಕ್ಕಾಗಿ ಆ ದುರ್ಬಲ ಜೀವಿ ಅದೆಷ್ಟು ಹಂಬಲಿಸುತ್ತಿದೆಯೆಂಬುವನ್ನು ಅವನು ಬಲ್ಲ.

ಬಹುಶಃ ಈ ಆತ್ಮೀಯತೆಗಾಗಿಯೇ ಅವಳ ಕಂಗಳು ಯಾವಾಗಲೂ ಎದುರು ಕೋಣೆಯತ್ತ ತಿರುಗಿರುತ್ತದೆ....ಕೆಲವೊಮ್ಮೆ ಅವಳ ಬಿಳುಪೇರಿದ ಮೋರೆ ಉಜ್ವಲವಾಗುತ್ತದೆ.

ಆದರೆ ಜಯದೇವನೇನೂ ಒಳ್ಳೇ ಮನುಷ್ಯನಲ್ಲ. ಈ ನೋಟ ಕೇವಲ ಆಟವೆಂದೇ ಅವನೆಣಿಕೆ.

ಜಯದೇವ ಶರಾಬು ಕುಡಿಯುತ್ತಾನೆ....ಕುದುರೆಜೂಜಿಗೆ ಹೋಗುತ್ತಾನೆ.... ಅವನಿಗೆ ತರತರದ ದುರಭ್ಯಾಸಗಳಿವೆ....ಸಚ್ಚಾರಿತ್ರ್ಯದ ಬಗ್ಗೆ ತನಗೆ ಒಂದಿಷ್ಟೂ ವಿಶ್ವಾಸವಿಲ್ಲವೆಂದು ಸಿಗರೇಟಿನ ಹೊಗೆಯುಗುಳುತ್ತ ಆತನೆನ್ನುವ. ಮತ್ತು ನಗುನಗುತ್ತ ಅವನು ಸಾವಿತ್ರಿಯೊಡನೆ ಹೀಗೆನ್ನುವ—"ಒಮ್ಮೆ ನಾನು ನನ್ನ ಗೆಳೆಯನೊಂದಿಗೆ ಮೋಟಾರಿನಲ್ಲಿ ಕುಳಿತು ರಾಂಚಿಗೆ ಹೋಗುತ್ತಿದ್ದೆ. ದಾರಿಯಲ್ಲಿ 'ಶೇರ ಚಾಂಜಿ'ಯ ಪ್ರವಾಸಿ ಬಂಗಲೆಯಲ್ಲಿ ಇರುಳು ಕಳೆಯಬೇಕಾಯಿತು. ಅಲ್ಲಿಯ ಮ್ಯಾನೇಜರ್ ಜಾಣ. ಆತ ಚೆನ್ನಾಗಿ ಮಾಂಸ ಬೇಯಿಸಿ

ಅಡುಗೆ ಮಾಡಿದ. ಪುಷ್ಕಳ ಊಟ ಹಾಕಿದ ಬಳಿಕ ಮೆಲ್ಲನೆ-'ಸಾರ್…ನಿಮ್ಮಿಬ್ಬರಿಗಾಗಿ ಇಬ್ಬರನ್ನು ತರಲೆ?

ಒಬ್ಬಳು ಸಾಕೆ....? ಎಂದ'.

ಸಾವಿತ್ರಿ ಕೈಗಳಿಂದ ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡು "ಮುಂದೇನಾದರೂ ಹೇಳಿದರೆ ಎಚ್ಚರಿಕೆ....ಥೂ....ಒಂದಿಷ್ಟು ಲಜ್ಜೆಯಿಲ್ಲವೆ?"—ಎಂದಳು.

ಸಿಗರೇಟಿನ ಬೂದಿ ಜಾಡಿಸುತ್ತ ಜಯದೇವನೆಂದ :—"ಹೌದು...ನನ್ನ ಮಿತ್ರನೂ ನಮ್ಮಿಬ್ಬರನ್ನು ಹೀಗೆಯೇ ಕೇಳಿದ. ಆದರೆ ಮಾರನೆಯ ದಿನ ಆ ಮಿತ್ರನ ಮುಖ ನೋಡಿ ಕನಿಕರವೆನಿಸಿತು. ಪಾಪ! ಬಡಪಾಯಿ! ಅವನಿಗೆ ನಿದ್ದೆ ಹತ್ತಿರಲಾರದು....ನೀನೇ ಯೋಚಿಸು....ಆ ನಿರ್ಜನಾರಣ್ಯ....ಮಾಗಿಯ ಮೈಕೊರೆಯುವ ಚಳಿ....ಅವನ ಅವಸ್ಥೆ ಏನಾಗಬೇಕು?

ಸಾವಿತ್ರಿ ಜೋರಾಗಿ ನಕ್ಕಳು....ಅವಳು ರೆಪ್ಪೆಯನ್ನೂ ಬಡಿಸಲಾರಳು. ಮಾತಿಗಿಂತಲೂ ಮೊದಲೇ ಅಳು ಹಾಜರು!

ಅಕ್ಕ ಕರೆಯುತ್ತಲೇ ಗಾಯತ್ರಿ ಮಹಾನುಭಾವಿಯಂತೆ ಪ್ರೀತಿಪಾತ್ರಳಾಗಿ ಮೇಲೆ ಬಂದಳು. ಕೋಣೆಯೊಳಗೆ ನಡೆದು ಕುರ್ಚಿಯೊಂದನ್ನೆಳೆದು ಅದರ ಮೇಲೆ ಕುಳಿತುಕೊಳ್ಳುತ್ತ—"ನೀವಿಂದು ಪುನಃ ಅಕ್ಕನ ಮನ ನೋಯಿಸಿದಿರಾ?" ಎಂದಳು.

"ಓಹೊ! ಅಕ್ಕನಿಗಾಗಿಯಾದರೂ ನೀನು ಮೇಲೆ ಬಂದಿಯಲ್ಲ! ನಿನ್ನಂಥ ಸುಂದರ ತರುಣಿಯೊಡನೆ ಏಕಾಂತ ಸುಖವನ್ನನುಭವಿಸಬೇಕಿದ್ದರೆ ಅಕ್ಕನನ್ನು ರೇಗಿಸದೆ ಸಾಧ್ಯವುಂಟೆ?"—ಜಯದೇವ ನಗುತ್ತ ನುಡಿದ.

"ನೀವೆಂಥ ಕೆಟ್ಟ ಮಾತು ನುಡಿಯುತ್ತೀರಿ! ನಾನು ಗಂಭೀರವಾಗಿ ಕೇಳುತ್ತಿದ್ದೇನೆ. ಅಕ್ಕನಿಗೇಕೆ ನೀವಿಂತು ಕಾಟ ಕೊಡುತ್ತಿದ್ದೀರಿ! ಹಗಲಿರುಳೂ ನೀವು ಆ ಚಿತ್ರಗಳನ್ನು ಕಣ್ಣರಳಿಸಿ ಅದೇಕೆ ನೋಡುತ್ತೀರಿ?"

"ನಾನು ನೋಡುತ್ತಿಲ್ಲ, ತೋರಿಸುತ್ತಿದ್ದೇನೆ." "ಏನನ್ನು?"

"ನನ್ನಂತಹ ತರುಣನ ಸುಂದರ ಮುಖಾಕೃತಿಯನ್ನು ಪ್ರತಿಯೊಬ್ಬ ಕುಮಾರಿ, ವಿಧವೆ ಹಾಗೂ ಸುಮಂಗಲಿ ನೋಡಿ ನೋಡಿ ಸಂತುಷ್ಟಳಾಗುವಳು, ಅಲ್ಲವೆ!"

"ನಾನರಿಯೆ"—ನಾಚಿಕೆಯಿಂದ ಕೆಂಪಾಗುತ್ತ ಅವಳೆಂದಳು.

"ನೀವು ಮನೋಭಾವ ಅಡಗಿಸುವುದರಲ್ಲಿ ತುಂಬಾ ಜಾಣರು....ಬಿಳಿಪರ ವಿಚಾರ ಅಂತಿರಲಿ—ಆ ಮೃತ್ಯುಮುಖದಲ್ಲಿ ಒರಗಿರುವ ರೋಗಿಣಿಗೆ ನನ್ನ ಸುಂದರ ಮುಖಾಕೃತಿಯನ್ನು ತೋರಿಸಿ, ಒಂದಿಷ್ಟು ಆನಂದ ದೊರೆಯುವಂತೆ

ಮಾಡಿದರೆ ಅದೇನು ಅಪರಾಧವೇ? ತನ್ನ ಮೇಲೂ ಆಸಕ್ತಿ ಹೊಂದುವ ತರುಣನೊಬ್ಬ ಇದ್ದಾನೆಂದು ಆಕೆ ಭಾವಿಸುತ್ತ ಹಿಗ್ಗಿದರೆ, ಅದರಿಂದ ಅವಳಿಗೆ ತುಂಬಾ ಸಮಾಧಾನ ಎನಿಸದೆ?"

"ನೀವವಳಿಗೆ ಈ ರೀತಿ ಪ್ರೀತಿಯ ಮೋಸ ಮಾಡುತ್ತೀರಾ?"

"ತಪ್ಪೇನದರಲ್ಲಿ!" ಅವಳ ಕೊನೆಯ ದಿನಗಳಾದರೂ ಸುಖಮಯವಾಗಲಿ"

"ನೀವು ಮಹಾಘಾಟಿ!"—ಎನ್ನುತ್ತಾ ಗಾಯಿತ್ರಿ ಓಡಿಹೋದಳು.

ಜಯದೇವ ಮರಳಿ ಕಿಟಕಿಯೆದುರು ಹೋಗಿ ನಿಂತ. ಮೆಲ್ಲಮೆಲ್ಲನೆ ಆತ ಸಿಗರೇಟು ಹಚ್ಚಿದ. ಅವನು ತುಸುಹೊತ್ತು ಕುಳಿತಿರಬೇಕಾಗುವುದು....ಏಕೆಂದರೆ ಎದುರು ಕಿಟಕಿಯ ಪರದೆ ತೂಗುತ್ತಿದೆ....ಬಹುಶಃ ರೋಗಿಣಿ ಉಣ್ಣುತ್ತಿರಬಹುದು.

ರಾತ್ರಿ ೯ ಗಂಟೆ....

ಇನ್ನು ತುಸುಹೊತ್ತಿನಲ್ಲೇ ಪರದೆ ಸರಿಯುವುದೆಂದು ಆತ ಚೆನ್ನಾಗಿ ಬಲ್ಲ. ಅಮಿತಾ ಪರದೆಯೆತ್ತಿ ನೋಡತೊಡಗುವಳು....ಏಕೆಂದರೆ ಮಾರುದ್ದದ ಆ ರಾತ್ರಿ ಕಳೆಯಲು ಆಕೆ ಬಹಳಷ್ಟು ಬುತ್ತಿ ಸಂಗ್ರಹಿಸಬೇಡವೆ?

ಬಡಪಾಯಿ ಸಾವಿತ್ರಿ ಹೆಜ್ಜೆಹೆಜ್ಜೆಗೆ ವ್ಯಂಗ್ಯಬಾಣಗಳನ್ನು ಸಹಿಸಬೇಕಾಗುತ್ತಿದೆ. ಅತ್ತಿಗೆ, ಅಣ್ಣ, ತಾಯಿ—ಎಲ್ಲರೂ ಅವಳ ಪತಿಯನ್ನು ಜರೆಯುವವರೇ. ಅಪಮಾನದ ಮಾತುಗಳನ್ನು ಕೇಳಿ ಕೇಳಿ ಆಕೆ ಬೇಸತ್ತಳು.

"ಜಯದೇವ ಕುದುರೆ ಜೂಜಿನಲ್ಲಿ ಸಾವಿರಾರು ರೂಪಾಯಿ ಲಾಭ ಹೊಡೆಯುತ್ತಿದ್ದಾನೆಂದು ಅಣ್ಣ ಹೇಳುತ್ತಾನೆ"—ಅತ್ತಿಗೆ ನಂಜಿನ ನಗುನಗುತ್ತಾ ನುಡಿದಳು.

"ನಿನ್ನ ಆ ಒಳ್ಳೇ ಅಣ್ಣ ಜೂಜಿನ ಮೈದಾನಿಗೆ ಅದೇಕೆ ಹೋಗಿದ್ದರು? ನನ್ನವರಂತೂ ಕೆಟ್ಟವರು....!"—ಸಿಟ್ಟಿನಿಂದ ನುಡಿದಳು ಸಾವಿತ್ರಿ

ಇಂತಹ ಮಾತುಕತೆಯ ಪರಿಣಾಮ ಮನಸ್ತಾಪವೆಂದು ಎಲ್ಲರೂ ಬಲ್ಲರು. ಆದರೆ ಈ ಘಟನೆಗಳು ಈಗೀಗ ಸಾಧಾರಣವಾಗಿವೆ. ತನ್ನ ಗಂಡನಿಗೇಕೆ ಇನ್ನೂ ಬುದ್ಧಿ ಬಂದಿಲ್ಲ!—ಎಂದು ಸಾವಿತ್ರಿ ಹಣೆ ಹಣೆ ಜಜ್ಜಿಕೊಳ್ಳುವಳು.

ರಾತ್ರಿ ಊಟದ ವೇಳೆ ಅಣ್ಣ ಎಲ್ಲರೆದುರಿಗೇ ಹೀಗೆಂದ :—ಜಯದೇವನನ್ನು ಇನ್ನು ನಾವಿಲ್ಲಿ ಇರಿಸಿಕೊಳ್ಳಲಾರೆವು. ಅವನ ನಡತೆ ಚೆನ್ನಾಗಿಲ್ಲವೆಂದು ಎದುರು ಮನೆಯ ಯಜಮಾನರು ದೂರಿದುತ್ತಿದ್ದಾರೆ. ಆತ ಅವರ ಮಗಳನ್ನೇ ಹಗಲಿರುಳೂ ನೋಡುತ್ತ ಇರುವನಂತೆ!"

ಎದುರು ಮನೆಯವರೇನೂ ದೂರು ಕೊಟ್ಟಿರಲಿಲ್ಲ. ಜಯದೇವನನ್ನು ಅಪಮಾನಿಸಲೆಂದೇ ಸಾವಿತ್ರಿಯ ಅಣ್ಣ ಈ ಮಾತು ಎತ್ತಿದ್ದ.

"ಆ ಹುಡುಗಿಯೆಂದರೆ ಎಲ್ಲರಿಗೂ ಪೀಡೆಯೇ. ಅವಳನ್ನು ಬಿಸಾಡುವಂತಿಲ್ಲ. ಎಂತಲೇ ಮೇಲಿನ ಕೋಣೆಯಲ್ಲಿ ಅವಳಷ್ಟಕ್ಕೇ ಬಿಟ್ಟುಬಿಟ್ಟಿದ್ದಾರೆ...."

"ನೋಡು ಜಯದೇವ, ಮುಂದೆ ನೀವೇನಾದರೂ ಇಂಥ ಅಸಭ್ಯತನ ಮಾಡಿದರೆ ಈ ಮನೆಯಿಂದ ಹೊರಡಬೇಕಾದೀತು"

"ಅಸಭ್ಯತನ ಯಾರದು! ನಿಮ್ಮದೇ ನನ್ನದೇ

"ನಾಲಗೆ ಬಿಗಿಹಿಡಿ....ನೀಚ....!"

"ಅಪ್ಪಾ....ನೀವೇಕೆ ಮೌನವಾಗಿದ್ದೀರಿ?"—ಎಂದು ಅತ್ತ ಜಯದೇವನೊಡನೆ—"ನಾಳೆ ಬೆಳಗಾಗುತ್ತಲೇ ನೀನು ಹೆಂಡತಿಯೊಡನೆ ಈ ಮನೆ ಬಿಟ್ಟು ತೊಲಗಬೇಕು. ಇಲ್ಲದಿದ್ದರೆ....?—ಎಂದು ಒದರಿದ.

"ವಾಹ್! ಎಂಥ ಮಾತು ನುಡಿಯುತ್ತೀರಿ! ಹೆಂಡತಿಯನ್ನು ಕರೆದುಕೊಂಡು ನಾನೆಲ್ಲಿ ಹೋಗಲಿ? ಅವಳಿಗೇನು ತಿನ್ನಿಸಲಿ?"

"ನಿರ್ಲಜ್ಜ....ಅಸಭ್ಯ!—ಎಂದು ಉದ್ಗರಿಸಿ ಅಣ್ಣ ಹೊರಟುಹೋದ. ಈಗ ಸಾವಿತ್ರಿಯ ತಂದೆ ತಮ್ಮ ತಲೆಯನ್ನು ಮೇಲೆತ್ತಿ ನಡುಗುವದನಿಯಲ್ಲಿ "ಇಲ್ಲ, ಜಯದೇವ....ನಾನಿನ್ನು ತಡೆಯಲಾರೆ....ನೀನು ನಾಳೆಯೇ ಇಲ್ಲಿಂದ ಹೊರಟುಹೋಗು....ಈ ಜನ ಉದ್ದೇಶಪೂರ್ವಕವಾಗಿ ನಿನ್ನನ್ನಪಮಾನಿಸುತ್ತಿದ್ದಾರೆ"—ಎಂದರು.

"ಮಾಡಲಿ ಬಿಡಿ....ಅಪಮಾನ ಮಾಡುತ್ತೇವೆಂದು ಹೇಳಿದಾಕ್ಷಣ ಯಾರಿಗೂ ಅಪಮಾನವಾಗುವುದಿಲ್ಲ. ಸುಮ್ಮನೆ ನೀವೇಕೆ ದುಃಖಿಸುತ್ತೀರಿ! ನೀವೀಗಲೇ ನಿದ್ದೆ ಹೋಗುತ್ತೀರಾ? ನಿಮ್ಮೊಡನೆ ಒಂದಿಷ್ಟು ಮಾತಾಡಲಿದೆ."

ಸಾವಿತ್ರಿಯ ತಂದೆ ತುಂಬಿದ ಕಂಗಳಿಂದ ಅವನನ್ನು ನಿಟ್ಟಿಸುತ್ತ—'ಈ ಬಾರಿ ನನ್ನನ್ನು ಕ್ಷಮಿಸು'—ಎಂದರು.

ಆದರೆ ಜಯದೇವನೇನೂ ಅತ್ತ ಲಕ್ಷ್ಯ ಕೊಡದೆ ಅವರ ಕೋಣೆಗೆ ಹೋಗಿ ಎರಡೇ ನಿಮಿಷದಲ್ಲಿ ಮರಳಿದ. ದಾರಿಯಲ್ಲೇ ಸಾವಿತ್ರಿ ನಿಂತಿದ್ದಳು. ಸಿಂಹಿಣಿಯಂತೆ ಗರ್ಜಿಸುತ್ತ—'ತಂದೆಯವರ ಕೋಣೆಗೇಕೆ ಹೋದಿರಿ?' ಎಂದಳು.

"ಕೆಲಸವಿತ್ತು" ಕೆಲಸವಿತ್ತೆ? ಸಿಗರೇಟ್ ಕೊಳ್ಳಲು ಹಣ ಬೇಕಾಗಿತ್ತೆ?"

"ನಿಮ್ಮೂಹೆ ಪೂರ್ತಿ ಸರಿಯಾದುದು."—ಎನ್ನುತ್ತಾ ಜಯದೇವ ಪರ್ಸ್ ತೆರೆದು ೧೦-೧೦ ರೂಪಾಯಿಯ ಮೂರು ನೋಟು ತೋರಿಸಿದ.

"ಎಂತಹ ನಿರ್ಲಜ್ಜರು ನೀವು! ಹೋಗಿ ಕೊಟ್ಟುಬನ್ನಿ ಇದನ್ನು"

"ಕೊಟ್ಟರೆ ನನ್ನ ಖರ್ಚೆಂತು ನಡೆದೀತು?"

"ತಂದೆಯವರ ಖರ್ಚು ಹೇಗೆ ನಡೆಯುತ್ತಿದೆಯೆಂದು ಒಮ್ಮೆಯಾದರೂ ಯೋಚಿಸಿದ್ದೀರಾ! ಅವರೆಲ್ಲಿಂದ ಹಣ ತರುತ್ತಿದ್ದಾರೋ! ಅಣ್ಣನ ಸಂಬಳ ಬಹು ಕಡಿಮೆ. ಹುಣ್ಣಿನ ಮೇಲೆ ಬರೆಯೆಳೆದಂತೆ ನೀವು ಹೆಂಡತಿ ಸಮೇತ ದಿನಾಲೂ ನಾಲ್ಕು ನಾಲ್ಕು ಊಟ ಹೊಡೆಯುತ್ತಿದ್ದೀರಿ.... ನಿಮ್ಮ ಹಾಳು ಚಟಕ್ಕಾಗಿ ಹಣ ಕೇಳಲು ನಾಚಿಗೆಯಾಗಲಿಲ್ಲವೆ? ಎಂಥ ನಿರ್ಲಜ್ಜರು!"

ನಿರ್ಲಜ್ಜ ಎಂಬ ಬಿರುದಿನಿಂದಲೆ ಅವಳು ಆಗಾಗ ಪತಿಯನ್ನು ಸಂಬೋಧಿಸುತ್ತಿದ್ದಳು. "ಅಳಿಯ ಇದೀಗ ಹೊರಹೋದನಲ್ಲವೆ?'—ಸಾವಿತ್ರಿಯ ತಾಯಿ ತನ್ನ ಪತಿಯನ್ನು ಕೇಳುವಳು.

'ಹೂಂ'—ಎನ್ನುತ್ತ ಅವರು ಹೊದಿಕೆ ಹೊದ್ದುಕೊಳ್ಳುವರು.

'ಹಣ ಬೇಡಲು ಬಂದಿದ್ದಾನೆ ಅವನು?'   'ಹೂಂ....'


"ನಿಮಗೆ ಹೂಂ....ಹೂಂ....ಅಲ್ಲದೆ ಬೇರೆ ಮಾತೇ ಹೊರಡುವುದಿಲ್ಲವೇ? ಆ ಲಜ್ಜೆಗೇಡಿಗೆ ಮಾವನಿಂದ ಹಣ ಬೇಡಲು ನಾಚಿಗೆಯಾಗುವುದಿಲ್ಲವೆ? ಈ ಕೋತಿ ನಮಗೆಲ್ಲಿ ಗಂಟು ಬಿತ್ತೋ! ನಾನು ಎರಡು ಕಾಸು ಕೇಳಿದರೆ 'ಇಲ್ಲ, ಇಲ್ಲ' ಎಂದು ರಾಗ ಎಳೆಯುತ್ತೀರಿ.....ಅವನಿಗೆ ಮಾತ್ರ ಬೇಡಿದಷ್ಟು ಕೊಡುತ್ತೀರಿ...."ಅವರೇನೂ ಮಾತಾಡಲಿಲ್ಲ.

ವಾಹ್, ಎಂಥ ವರ್ತನೆ ನಿಮ್ಮದು!—ಎಂದು ಉದ್ಗರಿಸಿ ಆ ಭದ್ರಮಹಿಳೆ ಮಲಗಿ ನಿದ್ದೆ ಹೋದಳು. ಅಯೋಗ್ಯ ಅಳಿಯನ ದುರಭ್ಯಾಸಗಳನ್ನು ಅವರೆಂತು ಸಹಿಸಿಕೊಂಡಿದ್ದಾರೆ—ಎಂದು ಅವಳು ಅಚ್ಚರಿಪಡುವಳು. ಪತಿಯ ಹೃದಯವನ್ನವಳು ಅರಿಯದಾದಳು.

ಅತ್ತ ೫೦೦೦ ರೂಪಾಯಿಗಳ ಕಟ್ಟನ್ನು ಹೊದಿಕೆಯೊಳಗೆ ಅಡಗಿಸಿಡುತ್ತ ಸಾವಿತ್ರಿಯ ತಂದೆ ಹೀಗೆ ಯೋಚಿಸುತ್ತಿದ್ದರು—"ಈ ಅರ್ಧರಾತ್ರಿಯ ವೇಳೆ ನಾನಿದನ್ನು ಅಡಗಿಸಿಡಬೇಕು; ಯಾರಾದರೂ ಕಂಡರೆಂದರೆ ಕತೆ ಮುಗಿದಂತೆಯೇ. ಈ ರಾಕ್ಷಸ ಪ್ರಪಂಚದಲ್ಲಿ ಈ ಹಣವನ್ನು ಬಲು ಎಚ್ಚರಿಕೆಯಿಂದ ವೆಚ್ಚ ಮಾಡಬೇಕು....

ಎಂಥ ಅದ್ಭುತ ಹುಡುಗ? ಇಷ್ಟೊಂದು ಹಣವನ್ನು ಕಸದಂತೆ ನನ್ನತ್ತ ಎಸೆದು ಹೊರಟುಹೋದನಲ್ಲ! ಯಾರಿಗೂ ಈ ಗುಟ್ಟನ್ನು ಹೇಳಗೊಡುವುದಿಲ್ಲ ....ನನ್ನ ಮಾನರಕ್ಷಣೆಗಾಗಿ ಆತ ತನ್ನ ಸರ್ವಸ್ವವನ್ನೂ ಸಮರ್ಪಿಸುತ್ತಿದ್ದಾನೆ.... ಆದರೆ ನನ್ನ ಮನೆಯಲ್ಲೇ ಅವನ ಅಪಮಾನ ನಡೆಯುತ್ತಿದೆ! ಹಾಯ್; ಇವನು ನನ್ನ ಅಳಿಯನಾಗದೆ ಮಗನಾಗಿರುತ್ತಿದ್ದರೆ....!!"

—ಬಿ. ಸುಬ್ರಾಯ ಅಡಿಗ



ಅಹಿಂಸಾ ಪರಮೋಧರ್ಮಃ

—ಮಹಾಭಾರತ

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು.

—ಗಾಂಧೀಜಿ

ಇಂದು ನಾವು ತುರ್ತಾಗಿ ಏನು ಮಾಡಬೇಕು ?

ಇಂದು ಪ್ರಪಂಚದಲ್ಲಿ ಯಾವುದೇ ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿಯನ್ನು ಹೊಂದದೆ ಮುಂದುವರೆಯಲಾರದು. ಆದ್ದರಿಂದಲೇ ನಾವು ಸ್ವಾತಂತ್ರ್ಯಗಳಿಸಿಕೊಂಡನಂತರ ನೆಹರೂ ಹಾಗೂ ಹೋಮಿಭಾಭಾರವರು ನಮ್ಮನ್ನು ಕಾಡುತ್ತಿರುವ ಹಸಿವು ಮತ್ತು ಬಡತನಗಳನ್ನು ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನಗಳ ನೆರವಿನಿಂದ ಮಾತ್ರ ದೂರ ಮಾಡಬಹುದೆಂದು ಒಕ್ಕೊರಲಿನಿಂದ ಹೇಳಿದ್ದರು. ಆದರೆ ನಮ್ಮ ಇಂದಿನ ಬದುಕಿನ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ನಮ್ಮ ವಿಜ್ಞಾನ ಹಾಗೂ ತಂತ್ರಜ್ಞಾನಗಳ ಏಳಿಗೆಯ ಬಗೆಗೆ ವಿಚಾರಮಾಡಿದರೆ ತುಂಬ ನಿರಾಶೆಯುಂಟಾಗುತ್ತದೆ. ಇಂದು ನಮ್ಮ ದೇಶ ಭೀಕರ ಶಕ್ತಿಕ್ಷಾಮಕ್ಕೆ ಸಿಕ್ಕಿಕೊಂಡಿದೆ, ನಮ್ಮ ಆರ್ಥಿಕ ಮುನ್ನಡೆ ಕುಂಠಿತ ಗೊಂಡಿದೆ.

ಇವತ್ತಿನ ಪ್ರಪಂಚದಲ್ಲಿ ನಾವು ಖಂಡಿತವಾಗಿಯೂ ಇಷ್ಟು ಹಿಂದುಳಿಯ ಬೇಕಾದ ಕಾರಣವೇನೂ ಇಲ್ಲ. ನಮಗೇಕಿಷ್ಟು ದೈನ್ಯ, ಹೀನಭಾವನೆ? ನಮ್ಮ ಬಳಿ ಸಾಕಷ್ಟು ಕಬ್ಬಿಣವಿದೆ, ಕಲ್ಲಿದ್ದಿಲಿದೆ, ಥೋರಿಯಂ, ಅಭ್ರಕ, ಮ್ಯಾಂಗನೀಸ್ ಮುಂತಾದ ನೈಸರ್ಗಿಕ ಸಂಪನ್ಮೂಲಗಳು ನಮ್ಮಲ್ಲಿ ಸಾಕಷ್ಟಿವೆ. ಆದರೂ ನಾವು ಬಡವರು! ನಮ್ಮ ನಾಡಿನಲ್ಲಿ ಪ್ರತಿಭೆಗೇನೂ ಕೊರತೆಯಿಲ್ಲ. ರಾಮಾನುಜನ್, ಜಗದೀಶಚಂದ್ರಬೋಸ್, ಮೇಘನಾದಸಾಹಾ, ಡಾ|| ಭಾಭಾರಂಥ ವಿಜ್ಞಾನಿ ಗಳು ಹುಟ್ಟಿದ್ದು ನಮ್ಮ ನಾಡು ಇನ್ನೂ ಸ್ವಾತಂತ್ರ್ಯ ಪಡೆಯದಿದ್ದ ಕಾಲದಲ್ಲಿ. ಆದರೆ ಸ್ವಾತಂತ್ರ್ಯಗಳಿಸಿಕೊಂಡ ಅನಂತರ ನಮ್ಮ ನಾಡಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಬ್ಬನಾದರೂ ವಿಜ್ಞಾನಿ ಏಕೆ ಹುಟ್ಟಲಿಲ್ಲ? ಇವರ ಅಭಿಪ್ರಾಯ ವೇನೆಂದರೆ ಇಂಥ ಬೀಜ ಬಿತ್ತಲು ಅಗತ್ಯವಾದ ಸಾಮಾಜಿಕ ಮತ್ತು ವೈಜ್ಞಾನಿಕ ವಾತಾವರಣವನ್ನು ನಮ್ಮ ನಾಡಿನ ಭೂಮಿಗೆ ನಾವು ಇನ್ನೂ ದೊರಕಿಸಿ ಕೊಟ್ಟಿಲ್ಲ. ಆದರೂ ಸ್ವಾತಂತ್ರ್ಯಾನಂತರ ಜವಾಹರಲಾಲ್ ನೆಹರೂರವರು ನಾಡನ್ನು ಕಟ್ಟಲು ಡಾ|| ಭಾಭಾ ಮತ್ತು ಶಾಂತಸ್ವರೂಪ ಭಟನಾಗರರಂಥ ವಿಜ್ಞಾನಿಗಳನ್ನು ನಮಗೆ ಹುಡುಕಿಕೊಟ್ಟಿದ್ದೇನೊ ನಿಜ. ಆದರೆ ಇಂಥ ವಿಜ್ಞಾನಿ

೧೯೮೭ರ ಸೆಪ್ಟೆಂಬರ್ ತಿಂಗಳ ನವನೀತ ಪತ್ರಿಕೆಯಲ್ಲಿನ ನಿರಂಕಾರ ಸಿಂಹ ಅವರ 'ಅಸಲೀ ಸಂಕಟ್ ಕಹಾಂ ಹೈ' ಎಂಬ ಲೇಖನದ ಅನುವಾದ.

ಗಳಿಗೂ ದೇಶದ ಪ್ರಗತಿಗೆ ಅಡಿಪಾಯವಾಗಬಲ್ಲಂತಹ ವೈಜ್ಞಾನಿಕ ವಾತಾವರಣವನ್ನು ಉಂಟುಮಾಡಲು ಸಾಧ್ಯವಾಗಲಿಲ್ಲ. ಇದರಿಂದಾಗಿಯೆ ಇಂದು ನಮ್ಮ ನಾಡಿನಲ್ಲಿ ಎಲ್ಲ ಸಂಪನ್ಮೂಲಗಳಿದ್ದರೂ ನಾವು ಬಡವರಾಗಿಯೆ ಉಳಿದಿದ್ದೇವೆ.

ನಮ್ಮ ಹತ್ತಿರ ಪ್ರತಿಭೆ ಮತ್ತು ಸಾಧನಸಾಮಗ್ರಿಗಳಿಗೇನೂ ಕೊರತೆಯಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ನಮ್ಮ ನೈಸರ್ಗಿಕ ಸಂಪತ್ತನ್ನೂ ಖನಿಜಸಂಪತ್ತನ್ನೂ ಉಪಯುಕ್ತವಾಗಿ ಬಳಸಿಕೊಂಡು ರಾಷ್ಟ್ರೀಯ ಉತ್ಪಾದನೆಯನ್ನು ಹೆಚ್ಚಿಸಿ, ಜನಸಂಖ್ಯೆಯನ್ನು ನಿಯಂತ್ರಿಸಿಕೊಂಡು ನಾವು ನಮ್ಮ ನಾಡಿನ ಜನತೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬಲ್ಲೆವು. ಆದರೆ ನಾವು ಹೀಗೆ ಮಾಡುತ್ತಿಲ್ಲ.

ಇಂದು ನಮ್ಮ ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ ಬೇಕಾದಷ್ಟು ವಿಷಯಗಳನ್ನು ಕುರಿತಂತೆ ಸಂಶೋಧನೆಗಳು ನಡೆಯುತ್ತಿವೆ. ಆದರೆ ಎಷ್ಟೋ ವೇಳೆ ನಮ್ಮ ನಾಡಿನ ಅಗತ್ಯಗಳಿಗೂ ಈ ಸಂಶೋಧನೆಗಳಿಗೂ ಸಂಬಂಧವೇ ಇರುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆಯುತ್ತಿವೆ ಎಂಬ ಕಾರಣದಿಂದಾಗಿ ನಮ್ಮಲ್ಲೂ ನಮಗೆ ಇವತ್ತಿನ ಪರಿಸ್ಥಿತಿಯನ್ನು ಯಾವ ರೀತಿಯಲ್ಲೂ ಉಪಯೋಗಕ್ಕೆ ಬರದಂತಹ ಸೈದ್ಧಾಂತಿಕ ವಿಷಯಗಳ ಮೇಲೆ ಸಂಶೋಧನೆಗಳು ನಡೆಯುತ್ತಲೇ ಇವೆ. ಇದಕ್ಕಿಂತ ವಿಪರ್ಯಾಸಬೇಕೆ? ಅಭಿವೃದ್ಧಿಗೊಂಡಿರುವ ಹಾಗೂ ಅಭಿವೃದ್ಧಿಯ ಹಾದಿಯಲ್ಲಿರುವ ದೇಶಗಳ ಅವಶ್ಯಕತೆಗಳು ಬೇರೆಬೇರೆಯಾಗಿರುತ್ತವೆ ಎಂಬ ಮೂಲಭೂತ ಅಂಶವನ್ನು ಸಹ ನಮ್ಮ ವಿಜ್ಞಾನ ನೀತಿಯನ್ನು ರೂಪಿಸುವವರು ಕಂಡುಕೊಳ್ಳಲು ಪ್ರಯತ್ನಿಸುತ್ತಿಲ್ಲ. ಸ್ವಾತಂತ್ರ್ಯಗಳಿಸಿ ಇಷ್ಟು ವರ್ಷಗಳು ಕಳೆದರೂ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ ಇಂಥ ಸಂಶೋಧನೆಗಳಿಗಾಗಿ ಕೋಟ್ಯಂತರ ರೂಪಾಯಿಗಳ ತೆರಿಗೆ ಹಣ ನೀರಿನಂತೆ ಹರಿದುಹೋಗುತ್ತಿದೆ. ನಮ್ಮ ಮೂಲಭೂತ ಬೇಡಿಕೆಗಳನ್ನು ಈಡೇರಿಸುವ ದಿಕ್ಕನ್ನು ಸಹ ನಮ್ಮ ಇಂದಿನ ಮುಂದಾಳುಗಳು, ಶಿಕ್ಷಣ ತಜ್ಞರು, ವೈಜ್ಞಾನಿಕ ನೀತಿಯನ್ನು ರೂಪಿಸುವವರು ಇದುವರೆಗೂ ಕಂಡುಕೊಂಡಿಲ್ಲವೆಂಬುದು ತುಂಬ ಖೇದದ ಸಂಗತಿ. ನಾವು ಎದುರಿಸುತ್ತಿರುವ ನಿಜವಾದ ತೊಂದರೆ ಅಂದರೆ ಇದೇ.

ನಾಡಿನ ಅವಶ್ಯಕತೆಗಳು ಹಾಗೂ ಲಭ್ಯವಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನ ಸಾಮಗ್ರಿಗಳ ಸೀಮಿತತೆಗಳ ಕಾರಣದಿಂದಾಗಿ ಇಂದು ನಮಗೆ ಒಂದು

ಹೊಸ ದೃಷ್ಟಿಯು, ಹೊಸ ಕಲ್ಪನೆಯು ಆಗತ್ಯವಿದೆ. ಏಕೆಂದರೆ ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ವೈಜ್ಞಾನಿಕ ಹಾಗೂ ತಾಂತ್ರಿಕ ಸಾಧನಗಳ ಗುಣಮಟ್ಟಗಳಲ್ಲಿ ಯಾವುದೇ ವ್ಯಾಪಕವಾದ ಹೆಚ್ಚಳವಾಗುವ ಸಂದರ್ಭ ಕಂಡುಬರುತ್ತಿಲ್ಲ.

ಇಂದು ನಮ್ಮ ದೇಶಕ್ಕೆ ಅಗತ್ಯವಾಗಿರುವುದೆಂದರೆ ಆಧುನಿಕ ತಂತ್ರಜ್ಞಾನ, ನಿಯಮಬದ್ಧವಾದ ವೈಜ್ಞಾನಿಕ ಸಂಶೋಧನೆಗಳಿಂದ ಪ್ರಯೋಜನ ಪಡೆಯುವುದು ಹಾಗೂ ಪ್ರಗತಿಯನ್ನು ಸಾಧಿಸುವುದು. ನಮ್ಮ ಕೈಗಾರಿಕೆಗಳಿಗೆ ಮತ್ತು ಇತರ ಉದ್ಯಮಗಳಿಗೆ ಒಂದು ನಿಶ್ಚಿತವಾದ ರೂಪ ಕೊಡುವುದು ಸಹ ತುಂಬ ಆವಶ್ಯಕ. ನಿಯಮಬದ್ಧವಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡರೆ ಮಾತ್ರ ನಮ್ಮಲ್ಲಿ ಆರ್ಥಿಕ ಅಭಿವೃದ್ಧಿಯುಂಟಾಗಲು ಸಾಧ್ಯವಾಗುತ್ತದೆ, ವಾಣಿಜ್ಯ ವ್ಯಾಪಾರಗಳಲ್ಲಿ ಬೇರೆ ದೇಶಗಳೊಂದಿಗೆ ಪೈಪೋಟಿ ನಡೆಸುವ ಶಕ್ತಿ ಒದಗಿಬರುತ್ತದೆ. ಕಾಲಕಾಲಕ್ಕೆ ತಂತ್ರಜ್ಞಾನ ಬೆಳೆದಂತೆ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿಕೊಳ್ಳಲು ನಿರಂತರವಾದ ಪರೀಕ್ಷೆ ಮತ್ತು ಸಂಶೋಧನೆಗಳನ್ನು ನಡೆಸುತ್ತಿರುವುದು ತುಂಬ ಅವಶ್ಯಕ. ವಿಶಿಷ್ಟವಾದ ಹಾಗೂ ಮೇಲ್ಮಟ್ಟದ ಇಂಥ ಸಂಶೋಧನೆಗಳಿಂದಲೇ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯ. ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾದರೆ ಅವರಿಂದ ದೇಶದ ಅವಶ್ಯಕತೆಗಳು ಈಡೇರುತ್ತವೆಯೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ನಾವು ಅಳವಡಿಸಿಕೊಳ್ಳಬಹುದಾದಂತಹ ವಿದೇಶಿ ತಂತ್ರಜ್ಞಾನ ಹಳೆಯದಾಗಿ ಹೋಗಿದೆಯೆ ಅಥವಾ ಕೆಲ ಕಾಲಾನಂತರ ನಮ್ಮ ಪಾಲಿಗೆ ನಿರುಪಯುಕ್ತವಾಗಬಹುದೆ ಎಂಬುದನ್ನು ಸಹ ಯೋಚಿಸುವುದು ಅವಶ್ಯಕ.

ಬೇರೆ ದೇಶಗಳ ಮೇಲೆ ಅವಲಂಬಿಸಿಕೊಂಡಿರುವುದನ್ನು ಕಡಮೆಮಾಡುವ ಸಲುವಾಗಿ ನಮ್ಮ ಸಂಶೋಧನಾಕಾರ್ಯಗಳನ್ನು ಅಭಿವೃದ್ಧಿಪಡಿಸುವುದು ಸಹ ಬಹಳ ಅಗತ್ಯವಾಗಿದೆ. ಸಂಶೋಧನೆಯಿಂದ ಪ್ರಯೋಜನ ಪಡೆದುಕೊಳ್ಳಬಲ್ಲಂತಹ ಎಲ್ಲ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳು ಈ ಬಗೆಗೆ ಯೋಚಿಸಬೇಕು. ಬಹಳ ಜನಕ್ಕೆ ಆಸಕ್ತಿ ಹುಟ್ಟಿಸುವಂತಹ ಸಣ್ಣ ಪ್ರಮಾಣದ ಕೈಗಾರಿಕಾ ತಂತ್ರಜ್ಞಾನದ ಬಗ್ಗೆ ಸಹ ಮಹತ್ವನೀಡಿ ಕೆಲಸ ಪ್ರಾರಂಭಿಸಬೇಕು. ಇದರಿಂದಾಗಿ ಬೇಡದ ಕೆಲಸಗಳ ಮೇಲೆ ಬಂಡವಾಳ ಹೂಡಿ, ಅನಂತರ ಕೈಸುಟ್ಟುಕೊಳ್ಳುವುದು ತಪ್ಪಿದ ಹಾಗಾಗುತ್ತದೆ. ಆಯಾ ಅಭಿವೃದ್ಧಿಶೀಲ ದೇಶಗಳ ವಿಶಿಷ್ಟ ಅಗತ್ಯಗಳನ್ನು ಹಾಗೂ ಪರಿಸ್ಥಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು. ಈ ಕೆಲಸಗಳನ್ನು ಕೈಗೆತ್ತಿ

ಕೊಳ್ಳಬೇಕು. ಕಳೆದ ಒಂದು ದಶಕದಿಂದೀಚೆಗೆ ಇಂಥ ತೀವ್ರತರವಾದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳ ಅವಶ್ಯಕತೆ ಎಂದಿಗಿಂತ ಹೆಚ್ಚಾಗಿ ಮನದಟ್ಟಾಗುತ್ತದೆ.

ಇಂದು ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ರಾಷ್ಟ್ರೀಯ ಪ್ರಯೋಗಶಾಲೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳನ್ನು ತತ್ಕಾಲಕ್ಕೆ ನಿಲ್ಲಿಸಿ ಮೊದಲಿಗೆ ನಮ್ಮ ಮೂಲಭೂತ ಅಗತ್ಯಗಳೇನು, ಅವುಗಳನ್ನು ಈಡೇರಿಸಿಕೊಳ್ಳಲು ಯಾವ ದಿಕ್ಕಿನಲ್ಲಿ ಸಂಶೋಧನೆ ನಡೆಸಬೇಕು ಎಂಬುದನ್ನು ಪರಿಗಣಿಸಬೇಕು. ಕ್ಷೇತ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪರಿಣತರ ಒಂದು ಸಮಿತಿಯನ್ನು ರಚಿಸಿ ನಮ್ಮ ಮೂಲಭೂತ ಅವಶ್ಯಕತೆಗಳನ್ನು ಲಭ್ಯವಿರುವ ಸಾಧನಸಾಮಗ್ರಿಗಳ ಹಿನ್ನೆಲೆಯಲ್ಲಿ ಈಡೇರಿಸಬಹುದಾದ ಸಾಧ್ಯಾಸಾಧ್ಯತೆಗಳ ಬಗೆಗೆ ಪರಿಶೀಲನೆ ನಡೆಸಬಹುದು.

ನಮ್ಮ ನಾಡು ವ್ಯವಸಾಯ, ವೈದ್ಯಕೀಯ, ಎಲೆಕ್ಟ್ರಾನಿಕ್ಸ್, ಸಂಚಾರ, ಪರಮಾಣುಶಕ್ತಿ, ಪ್ರತಿರಕ್ಷಣೋಪಾಯವೇ ಮೊದಲಾದ ಕ್ಷೇತ್ರಗಳಲ್ಲಿ ಹಿರಿದಾದ ಸಾಧನೆಗಳನ್ನು ಮಾಡಿದೆ. ಹಸುರುಗ್ರಾಂತಿ, ವಿಸ್ಫೋಟಗಳು, ಆರ್ಯಭಟ ಇಂತಹ ಕೆಲವು ಉದಾಹರಣೆಗಳೇ ನಮ್ಮ ವಿಜ್ಞಾನಿಗಳು ಅಗತ್ಯವಾದ ನೆರವಿನಿಂದ ಕ್ಲಿಷ್ಟವಾದ ಮತ್ತು ಕಷ್ಟಕರವಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಬಲ್ಲರು ಎಂಬುದನ್ನು ತಿಳಿಯಪಡಿಸುತ್ತವೆ. ಆದರೆ ಇಲ್ಲಿ ನಮ್ಮ ಪ್ರಶ್ನೆಯೇನೆಂದರೆ ಕಳೆದ ಮೂರು ದಶಕಗಳ ಕಾಲ ನಾವು ಉದ್ದೇಶಪಟ್ಟು ಸಾಧಿಸಿಕೊಂಡಿರುವ ಮುನ್ನಡೆ ನಮ್ಮ ದೇಶದ ಪರಿಸ್ಥಿತಿಗಳಿಗೆ ಸಂಪೂರ್ಣವಾಗಿ ಉಪಯುಕ್ತ ಎಂಬುದಾಗಿ ಸಿದ್ಧಪಟ್ಟಿದೆಯೆ? ನಮ್ಮ ನಾಡಿನ ವೈಜ್ಞಾನಿಕ ಸಂಶೋಧನೆಗಳ ಹರವು ಬ್ರಿಟಿಷ್ ಹರವಿನ ಮೇಲೆ ಆಧಾರಗೊಂಡಿದೆ. ನಮ್ಮ ಔದ್ಯೋಗಿಕೀಕರಣದ ಹರವು ಮುಖ್ಯವಾಗಿ ಆಮದುಮಾಡಿಕೊಂಡ ತಂತ್ರಜ್ಞಾನವನ್ನು ಅವಲಂಬಿಸಿದೆ. ಇದು ಎಲ್ಲಿಯ ವರೆಗೆಂದರೆ ಸಿಮೆಂಟಿನ ಉತ್ಪಾದನೆಯಿಂದ ಮೊದಲುಗೊಂಡು ಟೂತ್‌ಪೇಸ್ಟ್ ಹಾಗೂ ಬೂಟ್‌ಪಾಲಿಶ್ ತಯಾರಿಸುವವರೆಗೆ ನಾವು ವಿದೇಶಿಸಂಸ್ಥೆಗಳಿಂದ ೫,೦೦೦ ಕ್ಕಿಂತ ಹೆಚ್ಚು ಕರಾರುಗಳನ್ನು ಮಾಡಿಕೊಂಡಿದ್ದೇವೆ. ಪಾಶ್ಚಾತ್ಯ ತಂತ್ರಜ್ಞಾನ ಪ್ರಮುಖವಾಗಿ ಬಂಡವಾಳ ಮತ್ತು ಶಕ್ತಿಸಂಪನ್ಮೂಲಗಳನ್ನು ಅವಲಂಬಿಸಿದೆ, ಕಡಮೆ ದೇಹಶ್ರಮವನ್ನು ಬಳಸಿಕೊಂಡು ಹೆಚ್ಚು ಉತ್ಪಾದನೆ ಮಾಡಿ ಲಾಭಗಳಿಸುವುದು ಅವರ ಗುರಿ.

ಆದರೆ ಭಾರತದಲ್ಲಿ ಬಂಡವಾಳ ಮತ್ತು ಶಕ್ತಿಸಂಪನ್ಮೂಲಗಳು ಕಡಮೆ ಹಾಗೂ ಜನಶಕ್ತಿ ಜಾಸ್ತಿ. ಹಾಗಾಗಿ ನಮ್ಮ ಪಾಲಿಗೆ ಹೆಚ್ಚು ಜನರಿಗೆ ಉದ್ಯೋಗ ದೊರಕಿಸುವಂಥ ಹಾಗೂ ಸಾಮಾನ್ಯ ಜನರ ಆವಶ್ಯಕತೆಗಳನ್ನು ಈಡೇರಿಸು ವಂತಹ ತಂತ್ರಜ್ಞಾನದ ಅಗತ್ಯವಿದೆ.

ಜನತೆಯ ಅಗತ್ಯಗಳು, ರಾಜಕಾರಣಿಗಳ ಘೋಷಣೆಗಳು, ಸರಕಾರದ ನೀತಿ ಇವೆಲ್ಲವರ ನಡುವೆ ತುಂಬ ವ್ಯತ್ಯಾಸವಿದೆ. ಒಂದೆಡೆ ನಮ್ಮ ಮೂಲಭೂತ ಆವಶ್ಯ ಕತೆಗಳು ಆಹಾರ, ನೀರು, ಬಟ್ಟೆ, ವಸತಿ, ಆರೋಗ್ಯ ಮತ್ತು ನೈರ್ಮಲ್ಯ ಎಂದು ಘೋಷಣೆಗಳನ್ನು ಮಾಡುತ್ತಾರೆ. ಆದರೆ ಇನ್ನೊಂದೆಡೆ ನಾಡಿನ ಕೇವಲ ಶೇ. ೫ ರಿಂದ ೧೦ರಷ್ಟು ಹೊಟ್ಟೆತುಂಬಿದ ಜನರ ಅಗತ್ಯಗಳನ್ನು ಪೂರೈಸುವಂತಹ ತಂತ್ರಜ್ಞಾನ ವನ್ನು ದುಬಾರಿ ಬೆಲೆತೆತ್ತು ಆಮದುಮಾಡಿಕೊಳ್ಳುತ್ತಿರುತ್ತಾರೆ. ನಾವು ಪಾಶ್ಚಾತ್ಯ ರಾಷ್ಟ್ರಗಳನ್ನು ಅನುಕರಿಸುವ ಭರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಉಪಯೋಗ ಪಡೆಯಲು ಮುನ್ನುಗ್ಗುತ್ತಿದ್ದೇವೆ, ಆದರೆ ಖಚಿತ ವಾಗಿ ಲಾಭತರುವ ಬಗೆಗೆ ಅನುಮಾನವಿರುವ ಯೋಜನೆಗಳಿಗಾಗಿ ಹಣ ಹಾಗೂ ಜನಶಕ್ತಿಯನ್ನು ಪೋಲುಮಾಡುತ್ತಿದ್ದೇವೆ.

ಇಂದು ಪ್ರಕೃತಿಯ ಸಾಧನಸಂಪನ್ಮೂಲಗಳ ಅನ್ವೇಷಣೆ, ಉಪಯೋಗ ಮತ್ತು ವ್ಯವಸ್ಥೆಯ ಜವಾಬ್ದಾರಿ ಬೇರೆ ಬೇರೆ ಸಚಿವಾಲಯಗಳಿಗೆ, ವಿಭಾಗ ಗಳಿಗೆ, ಶಾಖೆಗಳಿಗೆ ಸೇರಿರುವಂತಹ ವಿಷಯವಾಗಿದೆ. ಇವುಗಳಲ್ಲೇ ಸರಿಯಾದ ಹೊಂದಾಣಿಕೆ, ಪರಸ್ಪರ ಅವಲಂಬನೆ ಇಲ್ಲದಿರುವ ಕಾರಣ ನೈಸರ್ಗಿಕ ಸಂಪನ್ಮೂಲ ಗಳ ಪ್ರಯೋಜನ ಸರಿಯಾಗಿ ಆಗುತ್ತಿಲ್ಲ. ಈ ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯ. ಬೇರೆ ಬೇರೆ ಕ್ಷೇತ್ರಗಳಿಗೆ ಸೇರಿದ ಅನುಭವಿಗಳಾದ, ಪರಿಣತರಾಗಿ ತಜ್ಞರು ಪೂರ್ಣಾವಧಿಯ ಸದಸ್ಯರಾಗಿರುವಂಥ ಒಂದು ಸಕಲ ನೈಸರ್ಗಿಕ ಸಂಪನ್ಮೂಲಗಳ ಅನ್ವೇಷಣಾ ಆಯೋಗ ರಚಿಸಿ, ಅದಕ್ಕೆ ಈ ಕೆಲಸ ವಹಿಸಿ ಕೊಡುವುದು ಉತ್ತಮ. ರಾಷ್ಟ್ರೀಯ ನೀತಿಯನ್ನು ರೂಪಿಸುವುದು, ಉದ್ಯೋಗ ಮೂಲವಾದ ಶಿಕ್ಷಣ ಏರ್ಪಡಿಸುವುದು ಇಂತಹ ವಿಚಾರಗಳನ್ನು ಈ ಆಯೋಗವೆ ಸೂಕ್ತವಾಗಿ ಪರಿಗಣಿಸಬೇಕು.

ಇಂಥ ಸಮನ್ವಯ ಆಯೋಗದ ಪ್ರಮುಖ ಕಾರ್ಯಾಚರಣೆಗಳು ಹೀಗಿರ ಬೇಕು.

ಕಾರ್ಯಮಗ್ನವಾಗಿರುವ ಸಂಸ್ಥೆಗಳ ಸಲಹೆಯನ್ನು ಪಡೆದು ರಾಷ್ಟ್ರೀಯ

ನೀತಿಯನ್ನು ಇದು ರೂಪಿಸಬೇಕು. ನಮ್ಮ ಮೂಲಭೂತ ಅವಶ್ಯಕತೆಗಳೇನು? ಅವುಗಳಿಗೆ ಎಷ್ಟರಮಟ್ಟಿನ ಪ್ರಾಧಾನ್ಯ ನೀಡಬೇಕು ಎಂಬುದನ್ನು ಗುರುತಿಸಬೇಕು. ಅಲ್ಪಾವಧಿಯ ಹಾಗೂ ದೀರ್ಘವಾಧಿಯ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಬೇಕು ಎಂಬುದನ್ನು ಈ ಆಯೋಗ ನಿರ್ಧರಿಸಬೇಕು. ನೈಸರ್ಗಿಕ ಸಂಪನ್ಮೂಲಗಳ ಅನ್ವೇಷಕ್ಕೆ, ಉಪಯೋಗ ಹಾಗೂ ವ್ಯವಸ್ಥೆಯ ಬಗ್ಗೆ ಅಗತ್ಯ ಸಾಮಗ್ರಿಗಳನ್ನು ಸಿದ್ಧಪಡಿಸಬೇಕು. ವೃತ್ತಿಯನ್ನು ಗುರಿಯಾಗಿ ಇಟ್ಟುಕೊಂಡಿರುವ ಶಿಕ್ಷಣ ಮತ್ತು ಜನಶಕ್ತಿಯ ಒಳಕೆಗಾಗಿ ಅಗತ್ಯವಾದ ತರಬೇತಿ ಕಾರ್ಯಕ್ರಮಗಳನ್ನು ಇದು ಏರ್ಪಡಿಸಬೇಕು. ಬೇರೆಬೇರೆ ವಿಶ್ವವಿದ್ಯಾನಿಲಯಗಳಲ್ಲಿ, ಸಂಶೋಧನ ಸಂಸ್ಥೆಗಳಲ್ಲಿ, ಪ್ರಯೋಗಾಲಯಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗಾಗಿ ಸೃಜನಾತ್ಮಕ ಸಲಹೆಗಳನ್ನು ನೀಡಿ ಸಂಘಟಿಸುವುದು ಇದರ ಒಂದು ಕೆಲಸವಾಗಬೇಕು. ಅಲ್ಲದೆ ಇಲ್ಲೆಲ್ಲ ನಡೆಯುತ್ತಿರುವ ಕೆಲಸಕಾರ್ಯಗಳ ಮೌಲ್ಯಮಾಪನ, ಪುನರಾವರ್ತನೆ, ವಿಮರ್ಶೆ ಇತ್ಯಾದಿ ನಡೆಯುವ ಹೊಣೆಗಾರಿಕೆ ಈ ಆಯೋಗಕ್ಕೆ ಸೇರಬೇಕು.

ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲೂ ಸಮನ್ವಯ ಸಮಿತಿ ಅಥವಾ ಸಂಘಟನೆಗಳು ಸ್ಥಾಪನೆಗೊಂಡು ಕೇಂದ್ರ ಸಮನ್ವಯ ಆಯೋಗದ ನೀತಿನಿಯಮಗಳಿಗೆ, ಕಾರ್ಯಕ್ರಮಗಳಿಗೆ ಅನುಗುಣವಾಗಿ ಕೆಲಸಮಾಡಬೇಕು. ಜಿಲ್ಲಾ ಮಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಯೋಗ್ಯವಾದ ಅನುಭವಿಗಳಾದ ವಿಜ್ಞಾನಿಗಳನ್ನು ಹಾಗೂ ತಂತ್ರಜ್ಞರನ್ನು ನೇಮಕ ಮಾಡುವ ಏರ್ಪಾಡಾಗಬೇಕು.

ನಾಡಿನ ಬೇರೆಬೇರೆ ವೈಜ್ಞಾನಿಕ ಹಾಗೂ ಸಂಶೋಧನ ಸಂಸ್ಥೆಗಳ ಪತಿಯಿಂದ ಒಬ್ಬೊಬ್ಬ ವಿಜ್ಞಾನಿಯನ್ನು ಈ ಸಮನ್ವಯ ಸಂಘಟನೆಯಲ್ಲಿ ಸದಸ್ಯರನ್ನಾಗಿ ತೆಗೆದುಕೊಳ್ಳಬಹುದು. ಯಾರಾದರೂ ಒಬ್ಬ ಅನುಭವಿಯಾದ ವಿಜ್ಞಾನಿಯನ್ನು ಇಂಥ ಜಿಲ್ಲಾ ಸಂಘಟನೆಯ ಅಧ್ಯಕ್ಷನನ್ನಾಗಿ ಮಾಡಿ ಸಂಶೋಧನೆ ಮತ್ತು ಅಭಿವೃದ್ಧಿಯ ಕೆಲಸಗಳನ್ನು ನಡೆಸಿಕೊಂಡು ಹೋಗುವುದು ಇಂದು ಅಗತ್ಯವಾಗಿದೆ. ಒಂದು ವೇಳೆ ನಾವು ಹಿಂದಿನವರ್ಷಗಳಲ್ಲಿ ಪಡೆದ ಅನುಭವಗಳ ಪ್ರಯೋಜನ ಪಡೆದುಕೊಂಡು ಕ್ರಾಂತಿಕಾರಕವಾದ ಹೆಜ್ಜೆಯನ್ನು ಮುಂದಿಡದಿದ್ದರೆ ನಮ್ಮ ಪರಿಸ್ಥಿತಿ ಮುಂದೆ ತುಂಬ ಅಧೋಗತಿಗಿಳಿಯುತ್ತದೆ.

ಪ್ರಪಂಚದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳಿಗೂ ಒಂದು ಕೊನೆಯಿದೆ.

ನೆಲ, ನೀರು, ಮಣ್ಣು ಹಾಗೂ ಮರಗಿಡಗಳನ್ನು ಅಭಿವೃದ್ಧಿಪಡಿಸಬಹುದಾದರೂ ಖನಿಜಪದಾರ್ಥಗಳು, ಕಲ್ಲಿದ್ದಲು, ಪೆಟ್ರೋಲಿಯಂಥ ಪದಾರ್ಥಗಳನ್ನು ಹೆಚ್ಚುಮಾಡಲಾಗುವುದಿಲ್ಲ. ಇವುಗಳ ಬದಲಿಗೆ ಏನು ಉಪಯೋಗಿಸಬಹುದೆಂಬುದನ್ನು ಕಂಡುಕೊಳ್ಳಬೇಕು.

ಸಮುದ್ರದ ಅಡಿಯಲ್ಲಿರುವ ಸಂಪನ್ಮೂಲಗಳು ಏನೇನು ಎಂಬ ಬಗ್ಗೆ ಇನ್ನೂ ಸಂಶೋಧನೆ ಪೂರ್ಣಗೊಂಡಿಲ್ಲ. ನಮ್ಮ ನಾಡಿನಲ್ಲಿ ಜನಶಕ್ತಿ, ತಜ್ಞರು, ಸಾಧನ ಸಂಪನ್ಮೂಲಗಳು ಯಾವುದಕ್ಕೂ ಕಡಮೆಯಿಲ್ಲ. ಆದರೆ ನಮ್ಮ ಮೂಲಭೂತ ಅಗತ್ಯಗಳು ಏನು ಹಾಗೂ ಅವುಗಳನ್ನು ಪೂರೈಸಲು ನಾವು ಯಾವ ಯಾವ ಕ್ರಮಗಳನ್ನು ಕೈಗೊಳಬೇಕು ಎಂಬ ಬಗ್ಗೆ ತುರ್ತಾಗಿ ಯೋಚಿಸಬೇಕಾಗಿದೆ.

ಲಕ್ಷ್ಮೀನಾರಾಯಣ ಅರೋರಾ



ಮನುಷ್ಯನ ದೇಹಕ್ಕೆ ಎರಡು ಕಣ್ಣುಗಳಿರುವಂತೆ, ಅವನ ಧರ್ಮಕ್ಕಿರುವ ಎರಡು ಕಣ್ಣುಗಳು: ಅಹಿಂಸೆ ಮತ್ತು ಸತ್ಯ.

—ಬುದ್ಧ

ಆಹಾರ ವಿಷವಾಗಬಹುದೇ ?

ಸಾಮೂಹಿಕ ಸಮಾರಂಭಗಳಲ್ಲಿ ಆಹಾರ ಸೇವಿಸಿದ ನಂತರ ನೂರಾರು ಜನ ಹಠಾತ್ ಅಸ್ವಸ್ಥರಾಗುವುದು ಇಲ್ಲವೇ ಸಾವಿಗೀಡಾಗುವುದು ಇತ್ತೀಚಿನ ದಿನಗಳಲ್ಲಿ ಪ್ರತಿ ದಿನದ ಸುದ್ದಿಯಾಗುತ್ತಿದೆ. ವಿದ್ಯಾರ್ಥಿ ನಿಲಯಗಳು ಮತ್ತು ವಿದ್ಯಾರ್ಥಿಗಳಶಿಬಿರಗಳಲ್ಲೂ ಇಂತಹ ಅನಾಹುತಗಳಾಗುವುದುಂಟು. ಸೇವಿಸಿದ ಆಹಾರ ವಿಷವಾಗಿ ಪರಿಣಮಿಸುವುದೇ ಇಂತಹ ಪ್ರಕರಣಗಳಿಗೆ ಕಾರಣ. ಇವನ್ನು "ಆಹಾರವಿಷತೆ" ಎನ್ನಲಾಗುತ್ತದೆ.

ಆಹಾರ ವಿಷದ ಮುಖ್ಯ ಕಾರಣಗಳು :

೧. ತಯಾರಿಸಿದ ಆಹಾರ ಪದಾರ್ಥಗಳಲ್ಲಿ ಕೆಲವು ಸೂಕ್ಷ್ಮ ಜೀವಾಣುಗಳು ಸೇರಿ, ಅವುಗಳಿಂದಾಗುವ ಪರಿಣಾಮ.

೨. ಆಹಾರ ಪದಾರ್ಥಗಳಲ್ಲಿ ಕೆಲವು ನಮೂನೆಯ ಬೂಸಲು ಬೆಳೆಯುವುದರಿಂದ.

೩. ವ್ಯವಸಾಯೋದ್ಯಮದಲ್ಲಿ ಬಳಸುವ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳ ಅಂಶಗಳು ಆಹಾರದಲ್ಲಿ ಸೇರುವುದು.

ಲಕ್ಷಣಗಳು :

ತೀವ್ರ ರೀತಿಯ ಉದರ ಬೇನೆ, ವಾಂತಿ, ಭೇದಿ, ಜ್ವರ, ತಲೆನೋವು— ಆಹಾರ ವಿಷತೆಯಾದವರಲ್ಲಿ ಕಾಣುವ ಮುಖ್ಯ ಲಕ್ಷಣಗಳು. ಈ ತರಹದ ಲಕ್ಷಣಗಳು ಹಲವಾರು ಜನರಲ್ಲಿ, ಅದರಲ್ಲೂ ಒಂದೇ ತರಹದ ಆಹಾರವನ್ನು ಸೇವಿಸಿದಾಗ ಹಠಾತ್ತನೆ ಪ್ರಕಟವಾಗುವುದು ಈ ಪ್ರಕರಣಗಳ ವೈಶಿಷ್ಟ್ಯ. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದಲ್ಲಿ ಹಲವಾರು ಜನರು ತತ್‌ಕ್ಷಣ ಸಾವಿಗೀಡಾಗಬಹುದು.

ಜೀವಾಣುಗಳಿಂದಾಗುವ ಆಹಾರ ವಿಷತೆ:

ಸ್ಟೆಫೈಲೋ ಕಾಕೈ, ಸಾಲ್ಮೊನೆಲ್ಲಾ, ವಿಬ್ರಿಯೋ ಪ್ಯಾರಾ-ಹಿಮೋಲಿಟಿಕಸ್, ಬಾಟುಲಿಸಂ, ಇತ್ಯಾದಿ ಸೂಕ್ಷ್ಮಾಣುಗಳೇ ಹೆಚ್ಚಿನ ಜೀವ ವಿಷತೆಯ ಪ್ರಕರಣಗಳಿಗೆ ಕಾರಣ.

ಸ್ಟೆಫೈಲೋ ಕಾಕೈಗಳು ಆಹಾರದಲ್ಲಿ ಸೇರಿದಾಗ ನೇರವಾಗಿ ಕರುಳಿನ ಒಳ

ಪೊರೆಯ ಮೇಲೆ ಪರಿಣಾಮ ಬೀರಿದರೆ, ಸಾಲ್ಮೊನೆಲ್ಲಾ ಜೀವಾಣುಗಳಿಂದ ಉಂಟಾಗುವ "ಜೀವ ವಿಷ"ದಿಂದ ವಿಪತ್ತುಂಟಾಗುತ್ತದೆ.

೧೯೬೪ರ ಗಾಂಧೀಜಯಂತಿಯಂದು ಮಹಾರಾಷ್ಟ್ರದ ಹಳ್ಳಿಯ ಶಾಲೆಯೊಂದರಲ್ಲಿ ಹಂಚಿದ ಹಾಲನ್ನು ಕುಡಿದ ೧೫೦ ಮಕ್ಕಳು ಒಂದೇ ತಾಸಿನಲ್ಲಿ ಉದರ ಬೇನೆ, ವಾಂತಿ, ಭೇದಿಯಿಂದ ಅಸ್ವಸ್ಥರಾದರು. ಅವರನ್ನೆಲ್ಲಾ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಮಾಡಲಾಯಿತು. ಹಾಲು ಸರಬರಾಜು ಮಾಡಲು ಮತ್ತು ಹಂಚಲು ಉಪಯೋಗಿಸಿದ ಪಾತ್ರೆಗಳಲ್ಲಿ ಸ್ಟೆಫೈಲೋ ಕಾಕೈಗಳು ಯಥೇಚ್ಛವಾಗಿದ್ದುದು ನಂತರದ ಪರೀಕ್ಷೆಗಳಿಂದ ತಿಳಿಯಿತು. ಸಾಲದ್ದಕ್ಕೆ ಹಾಲನ್ನು ಸರಿಯಾಗಿ ಕಾಯಿಸಿಯೂ ಇರಲಿಲ್ಲ. ಕೆಲವು ವರ್ಷಗಳ ಹಿಂದೆ ದೆಹಲಿಯ ಮಿಠಾಯಿ ಅಂಗಡಿಯೊಂದರಿಂದ ಬರ್ಫಿಯನ್ನು ಕೊಂಡು ತಿಂದ ನೂರಾರು ಜನ ಸ್ವಲ್ಪ ಸಮಯದಲ್ಲೇ ಅಸ್ವಸ್ಥರಾದರು. ಅಂಗಡಿಯನ್ನೇ ಶೋಧಿಸಿದಾಗ ಮಿಠಾಯಿ ಮಾರುತ್ತಿದ್ದವನ ಕೈಯಲ್ಲಿ ಸ್ಟೆಫೈಲೋ ಕಾಕೈನಿಂದಾದ ಕೀವು ಸುರಿಯುತ್ತಿದ್ದ ಬಾವು ಇತ್ತು !

ಸ್ಟೆಫೈಲೋ ಕಾಕೈಗಳ ವೃದ್ಧಿಗೆ ತೇವಭರಿತ ಬೆಚ್ಚನೆಯ ವಾತಾವರಣ ಬಹಳ ಸಹಕಾರಿ. ಶೀತಲ ವಾತಾವರಣ ಅವುಗಳ ಉತ್ಪಾದನೆಯನ್ನು ಕಡಿಮೆ ಮಾಡಬಹುದಾದರೂ ಅವು ಸಂಪೂರ್ಣ ನಾಶವಾಗುವುದಿಲ್ಲ. ಕನಿಷ್ಠ ೬೦° C ಗಿಂತಲೂ ಹೆಚ್ಚಿನ ಶಾಖದಲ್ಲಿ ಆಹಾರ ಪದಾರ್ಥಗಳನ್ನು ಅರ್ಧ ಗಂಟೆಗೆ ಮಿಗಿಲಾಗಿ ಬೇಯಿಸುವುದೊಂದೇ ಅವುಗಳನ್ನು ನಾಶ ಮಾಡಬಹುದಾದ ಏಕೈಕ ವಿಧಾನ.

ಸಾಲ್ಮೊನೆಲ್ಲಾಗಳ ಜೀವವಿಷ ಸ್ಟೆಫೈಲೋ ಕಾಕೈಗಳಿಗಿಂತಲೂ ಹೆಚ್ಚು ಅಪಾಯಕಾರಿ. ಭಾವನಗರದಲ್ಲಿ (೧೯೮೦) ೭೦೦೦ ಜನ ನೆರೆದಿದ್ದ ಭೋಜನ ಕೂಟವೊಂದರಲ್ಲಿ ಆಹಾರ ಸೇವಿಸಿದ ೬೦೦ ಜನ ಮಕ್ಕಳು ಕೂಡಲೇ ಅಸ್ವಸ್ಥರಾದರು. ಸಕಾಲದ ಚಿಕಿತ್ಸೆಯಿಂದ ಒಂದು ಮಗುವನ್ನುಳಿದು ಮಿಕ್ಕವರೆಲ್ಲಾ ಚೇತರಿಸಿಕೊಂಡರು. ಅಲ್ಲಿ ಬಡಿಸಿದ್ದ ಆಲೂಗಡ್ಡೆ ಬಾಜಿ ಮತ್ತು ಬೂಂದಿಯಲ್ಲಿ ಸಾಲ್ಮೊನೆಲ್ಲಾ ಜೀವಾಣುಗಳು ಯಥೇಚ್ಛವಾಗಿದ್ದುದು ನಂತರದ ಪರೀಕ್ಷೆಗಳಿಂದ ತಿಳಿಯಿತು.

ಆಹಾರ ಪದಾರ್ಥಗಳ ಮೇಲೆ ಇಲಿ, ಹೆಗ್ಗಣ, ಜಿರಲೆ ಮುಂತಾದವುಗಳು ಹರಿದಾಡುವುದರಿಂದ ಸಾಲ್ಮೊನೆಲ್ಲಾ ಜೀವಾಣುಗಳು ಕಲಬೆರಕೆಯಾಗುತ್ತವೆ. ಪದೇ ಪದೇ ಬೇಯಿಸಿದ ಮಾಂಸ, ಮೀನಿನ ಪದಾರ್ಥಗಳು, ಹಾಲಿನ ಕೆನೆ,

ಐಸ್ ಕ್ರೀಂ, ಕಸ್ಟರ್ಡ್, ಈ ರೀತಿ ಕೆಡಬಹುದು. ಗೃಹಪ್ರವೇಶ, ಮದುವೆ, ಮುಂಜಿಗಳಂತಹ ಸಮಾರಂಭಗಳಲ್ಲಿ ಖರ್ಚಾಗದೇ ಉಳಿದ ಆಹಾರ ಪದಾರ್ಥ ಗಳನ್ನು ಸ್ವಲ್ಪ ಸಮಯದ ನಂತರ ಮರುಬಳಕೆ ಮಾಡಿದ ಸಂದರ್ಭಗಳಲ್ಲೂ ಇಂತಹ ಪ್ರಕರಣಗಳು ಜರುಗಿವೆ.

ವಿಬ್ರಿಯೋ ಪ್ಯಾರಾ-ಹೀಮೋಲಿಟಿಕಸ್ ಜೀವಾಣು ಮೊದಲಿನೆರಡಕ್ಕಿಂತಲೂ ಹೆಚ್ಚು ವಿಷಕಾರಿ. ಕೊಳಚೆನೀರು, ಸಮುದ್ರದಿಂದ ದೊರೆಯುವ ಏಡಿ, ಸೀಗಡಿ, ಮಳಿವೆ ಇವುಗಳಲ್ಲಿ ಮನೆ ಮಾಡಿರುತ್ತವೆ. ಅವುಗಳನ್ನೇ ಅರ್ಧಂಬರ್ಧ ಬೇಯಿಸಿ ತಿಂದರೆ ವಾಂತಿ ಭೇದಿಯಾಗುವುದು ಖಚಿತ. ಕಲ್ಕತ್ತದ ಕೊಳಚೆ ಪ್ರದೇಶಗಳಲ್ಲಿ ಆಗಾಗ್ಗೆ ಜರುಗುವ ವಾಂತಿ ಭೇದಿ ಪ್ರಕರಣಗಳಿಗೆ ಇವೇ ಕಾರಣ ವೆಂದು ತಿಳಿದುಬಂದಿದೆ.

ಜೀವಾಣುಗಳಿಂದುಟಾಗುವ ಇನ್ನೊಂದು ಅತ್ಯಂತ ಭಯಂಕರ ಆಹಾರ ವಿಷತೆ "ಬಾಟುಲಿಸಂ" ಇವುಗಳ "ಜೀವಕಣ"ಗಳು ಮಣ್ಣು ಮತ್ತು ತರಕಾರಿಗಳಲ್ಲಿ ಸಾಮಾನ್ಯವಾಗಿ ಇರಬಹುದಾದರೂ ಆ ಪರಿಸ್ಥಿತಿಯಲ್ಲಿ ಅವು ಗಳಿಂದ ಅಪಾಯ ಸಂಭವಿಸುವುದಿಲ್ಲ. ಗಾಳಿಯಾಡದ ಟಿನ್‌ಗಳಲ್ಲಿ ಆಹಾರ ಪದಾರ್ಥಗಳನ್ನಿಟ್ಟು ಸೀಲ್ ಮಾಡಿದ, ಆಮ್ಲಜನಕ ರಹಿತ ವಾತಾವರಣ, ಅವು ಗಳ ವೃದ್ಧಿಗೆ ಅತ್ಯಂತ ಸಹಾಯಕಾರಿ. ಅಂತಹ ಆಹಾರವನ್ನೇ ಸೇವಿಸಿದ ೧೨ ರಿಂದ ೩೬ ಗಂಟೆಗಳೊಳಗೆ ಮುಕ್ಕಾಲು ಪಾಲು ಜನ ಸಾಯುತ್ತಾರೆ. ಒಂದು ಸಾವಿರ ಮಿಲಿಯನ್‌ನಲ್ಲಿ ಬಾಟುಲಿಸಂನ ಜೀವವಿಷದ ಒಂದು ಭಾಗ ಸೇರಿದ್ದರೆ ರೋಗಿಯು ಸಾಯುವುದು ಖಚಿತ. ಎಳೆ ನಾಗರ ವಿಷ ಇದರ ಮುಂದೆ ತೀರಾ ಕಳಪೆ!

ಬೂಸಲಿನಿಂದಾಗುವ ಆಹಾರ ವಿಷತೆ :

ಕೆಲವು ಆಹಾರ ಪದಾರ್ಥಗಳ ಮೇಲೆ ಬೆಳೆಯುವ ಬೂಸಲು ಕೆಲ ಸಾರಿ ಕಣ್ಣಿಗೂ ಗೋಚರವಾಗದಿರಬಹುದು. ಅಸ್ಪರ್‌ಜಿಲಸ್ ಫ್ಲೇವಸ್ ಎಂಬ ಬೂಸಲು ನಮ್ಮ ದೇಶದಲ್ಲಿನ ಹೆಚ್ಚಿನ ಪ್ರಕರಣಗಳಿಗೆ ಕಾರಣವಾಗುತ್ತಿದೆ. ಅದರಿಂದ ಉತ್ಪತ್ತಿಯಾಗುವ "ಅಫ್ಲಟಾಕ್ಸಿನ್" ರೋಗಿಯ ಲಿವರ್‌ನಲ್ಲಿ ಹಾನಿ ಕಾರಕವಾಗುತ್ತದೆ. ಕೆಲವು ವರ್ಷಗಳ ಹಿಂದೆ ಬನ್ಸವಾಡ (ರಾಜಸ್ಥಾನ್), ಪಂಚಮಹಲ್ (ಗುಜರಾತ್) ಜಿಲ್ಲೆಗಳಲ್ಲಿನ ೬೦೦ ಜನರಿಗೆ ಕಾಮಾಲೆ ರೋಗ ಕಾಣಿಸಿಕೊಂಡಿತು. ನೂರಕ್ಕಿಂತಲೂ ಹೆಚ್ಚು ಜನ ಸಾವಿಗೀಡಾದರು. ಅವರು

ಸೇವಿಸುತ್ತಿದ್ದ ಜೋಳ ಮತ್ತು ಬಾಜ್ರಗಳಲ್ಲಿ ಅಫ್ಲಟಾಕ್ಸಿನ್ ಹೆಚ್ಚಾಗಿದ್ದುದು ಪ್ರಯೋಗಾಲಯದ ಪರೀಕ್ಷೆಗಳಿಂದ ನಂತರ ತಿಳಿಯಿತು.

ರಾಸಾಯನಿಕ ಪದಾರ್ಥಗಳಿಂದುಂಟಾಗುವ ಆಹಾರ ವಿಷತೆ:

ವ್ಯವಸಾಯೋದ್ಯಮದ ಹಲವಾರು ಹಂತಗಳಲ್ಲಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಮತ್ತು ಕೀಟನಾಶಕಗಳ ಉಪಯೋಗ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಕೆಲವು ಸಾರಿ ಅವು ಆಹಾರ ಸಾಮಗ್ರಿಗಳಲ್ಲಿ ಬೆರೆಯುವ ಅವಕಾಶಗಳಿವೆ. ಈಗೀಗ ದವಸಧಾನ್ಯಗಳು ಕೆಡದಂತೆ ಶೇಖರಿಸಲೂ ಸಹಾ ಅವನ್ನು ಕೆಲವು ಪ್ರಮಾಣದಲ್ಲಿ ಸೇರಿಸಲಾಗುತ್ತಿದೆ. ಕೆಲವರು ಆತ್ಮಹತ್ಯೆಗಾಗಿ ಬಳಸಿದರೆ ಇನ್ನೂ ಕೆಲವರು ತಮ್ಮ ಹಗೆತನ ತೀರಿಸಲು ಆಹಾರದಲ್ಲಿ ಬೆರೆಸಿ ಇತರರಿಗೆ ನೀಡಿದ ನಿದರ್ಶನಗಳೂ ಇವೆ. ಅವುಗಳ ಅಪಾಯದ ಬಗ್ಗೆ ಸಾಕಷ್ಟು ವ್ಯಾಪಕ ಪ್ರಚಾರದ ಅವಶ್ಯಕತೆ ಇದೆ.

ಈಗ ಒಂದೆರಡು ದಶಕಗಳ ಹಿಂದೆ ತಿರುವನಂತಪುರದ ಎನ್.ಸಿ.ಸಿ. ಶಿಬಿರದಲ್ಲಿ ತಯಾರಿಸಿದ ಚಪಾತಿಯನ್ನು ತಿಂದು ೧೫೦ ಕ್ಕೂ ಹೆಚ್ಚು ಎನ್.ಸಿ.ಸಿ. ಕೆಡೆಟ್‌ಗಳು ಸತ್ತ ಪ್ರಕರಣ ನಮ್ಮ ದೇಶದಲ್ಲಿ ಜರುಗಿದ ಮೊದಲ ಪ್ರಕರಣ. ವಿದೇಶಗಳಿಂದ ಆಮದಾಗಿದ್ದ ಗೋಧಿ ಚೀಲಗಳ ಜೊತೆ ಫಾಲಿಡಾಲ್ ಪಿಪಾಯಿಗಳೂ ಇದ್ದುದು ಇದಕ್ಕೆ ಕಾರಣವಾಗಿತ್ತು. ಇತ್ತೀಚೆಗೆ ಮದ್ರಾಸಿನಲ್ಲಿ ನಡೆದ ಒಂದು ಪ್ರಕರಣದಲ್ಲಿ ಮೊಸರನ್ನದಲ್ಲಿದ್ದ ಶುಂಠಿ ಮತ್ತು ಅರಿಶಿನದ ಎಲೆಗಳಲ್ಲಿ ಗ್ಯಾಮೇಕ್ಸೀನ್ ಇದ್ದು ಅದನ್ನು ಸೇವಿಸಿದ ನೂರಾರು ಮಕ್ಕಳ ಅಸ್ವಸ್ಥತೆಗೆ ಕಾರಣವಾಗಿತ್ತು. ಇತಿಹಾಸದಲ್ಲೇ ಅತ್ಯಂತ ಭೀಕರ ಪ್ರಕರಣ ೧೯೭೧-೭೨ರಲ್ಲಿ ಇರಾನ್ ದೇಶದಲ್ಲಿ ಜರುಗಿತು. ಸುಮಾರು ೬೦೦೦ ಕ್ಕಿಂತ ಹೆಚ್ಚು ಜನ ಆಸ್ಪತ್ರೆಗಳಿಗೆ ದಾಖಲಾಗಿ ಒಂದು ಸಾವಿರಕ್ಕಿಂತಲೂ ಹೆಚ್ಚು ಜನ ಸತ್ತರು. ಗೋಧಿಯಲ್ಲಿ ಬೂಸಲು ಬೆಳೆಯುವುದನ್ನು ತಪ್ಪಿಸಲು ಪಾದರಸಯುಕ್ತ ಕೀಟನಾಶಕವನ್ನು ಬಳಸಲಾಗಿದ್ದು ಆ ಗೋಧಿಯಿಂದ ತಯಾರಾಗಿದ್ದ ಬ್ರೆಡ್ಡನ್ನು ಅವರೆಲ್ಲಾ ತಿಂದಿದ್ದರು. ಕೈಗಾರಿಕಾ ಕ್ಷೇತ್ರದ ಕಾರ್ಖಾನೆಗಳಿಂದ ಹೊರಸೂಸುವ ರೊಚ್ಚಿನ ನೀರನ್ನು ನದಿಗಳು ಮತ್ತು ಸಮುದ್ರಕ್ಕೆ ಬಿಡುವುದೂ ಅಪಾಯಕಾರಿಯಾಗಬಲ್ಲುದು. ೧೯೭೦ರ ಮಿನಮಾಟ (ಜಪಾನ್)ದ ಪ್ರಕರಣ ಸ್ವಾರಸ್ಯಕರ. ಸಮುದ್ರದಲ್ಲಿ ಹಿಡಿದ ಮೀನು ತಿಂದ ನೂರಾರು ಜನ ಬೆಸ್ತರು ಸತ್ತರಲ್ಲದೆ ಬದುಕಿದ ಸಾವಿರಾರು ಜನ ಕಣ್ಣು ಕಳೆದುಕೊಂಡರು. ಕಾರಣ: ಕೆಲವು ಕಾರ್ಖಾನೆಗಳಿಂದ ಸಮುದ್ರಕ್ಕೆ ಬಿಡುತ್ತಿದ್ದ ರೊಚ್ಚಿನ ನೀರಿನಲ್ಲಿ ಪಾದರಸ

ಯಥೇಚ್ಛವಾಗಿರುತ್ತಿತ್ತು. ಅದನ್ನು ಸೇವಿಸಿದ ಮೀನಿನಲ್ಲಿ ಪಾದರಸ, ಮೀಥೈಲ್ ರೂಪಾಂತರ ಹೊಂದಿ ಆ ಮೀನುಗಳನ್ನು ತಿಂದವರಿಗೆ ಅಪಾಯಕಾರಿಯಾಗಿ ಪರಿಣಮಿಸಿತು. ಕಲ್ಕತ್ತಾದ ಪ್ರಯೋಗಾಲಯವೊಂದಕ್ಕೆ ಪರೀಕ್ಷೆಗಾಗಿ ಇತ್ತೀಚೆಗೆ ಬಂದ ಆಹಾರ ಪದಾರ್ಥಗಳ ೪೦೦ ಮಾದರಿಗಳಲ್ಲಿ ೯೫ ರಲ್ಲಿ ಮೆಲಾಥಿಯಾನ್, ಗ್ಯಮಾಕ್ಸಿನ್, ಡಿ.ಡಿ.ಟಿ. ಮುಂತಾದ ಕೀಟನಾಶಕಗಳು ಅಪಾಯದ ಮಟ್ಟಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದುವೆಂದರೆ ನಾವು ಪ್ರತಿದಿನ ಸೇವಿಸುವ ಆಹಾರ ಎಷ್ಟು ಸುರಕ್ಷಿತವಾಗಿರಬಹುದೆಂಬುದರ ಅರಿವಾಗಬಹುದು.

ಕೆಲವು ಸಾಮಾನ್ಯ ಮತ್ತು ಶುಚಿತ್ವದ ನಿಯಮಗಳ ಪಾಲನೆಯಿಂದ ಆಹಾರ ವಿಷತೆಯ ಪ್ರಕರಣಗಳು ಜರುಗದಂತೆ ಮಾಡಲು ಸಾಧ್ಯ.

೧. ಅಡಿಗೆ ಮಾಡುವವರು ಮತ್ತು ಆಹಾರ ವಿತರಣೆ ಮಾಡುವವರು ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ಕೊಡಬೇಕು. ಅವರಲ್ಲಿ ಸೋಂಕು ರೋಗಗಳು ಇರದಂತೆ ಎಚ್ಚರಿಕೆ ವಹಿಸಬೇಕು.

೨. ಅಡಿಗೆ ಮತ್ತು ಆಹಾರ ವಿತರಣೆಗೆ ಉಪಯೋಗಿಸುವ ಪಾತ್ರೆಗಳು ಶುಚಿಯಾಗಿರಬೇಕು.

೩. ಆಹಾರ ಪದಾರ್ಥಗಳನ್ನು ಚೆನ್ನಾಗಿ ಬೇಯಿಸಿ ಉಪಯೋಗಿಸಬೇಕು.

೪. ಬೇಯಿಸಿದ ಆಹಾರ ಪದಾರ್ಥಗಳು ಬಿಸಿಯಿರುವಾಗಲೇ, ತಣ್ಣನೇ ಆಹಾರ ಪದಾರ್ಥಗಳು ತಣ್ಣಗಿರುವಾಗಲೇ ಉಪಯೋಗಿಸಬೇಕು.

೫. ತಯಾರಿಸಿದ ಆಹಾರ ಪದಾರ್ಥಗಳನ್ನು ತೇವಮಯ ಬೆಚ್ಚನೆ ಅಡಿಗೆ ಮನೆಯಲ್ಲಿ ಹೆಚ್ಚು ಹೊತ್ತು ಇಡಬಾರದು.

೬. ಹಾಲು ಮತ್ತು ಮೊಟ್ಟೆ ಪದಾರ್ಥಗಳನ್ನು ಸರಿಯಾಗಿ ಬಿಸಿ ಮಾಡಿ ಉಪಯೋಗಿಸಬೇಕು.

೭. ಆಹಾರಗಳನ್ನು ಶೇಖರಿಸಿಡುವ ಜಾಗಗಳಲ್ಲಿ ಜಿರಲೆ, ಇಲಿ, ಹೆಗ್ಗಣ, ಧೂಳು ಸೇರದಂತೆ ಎಚ್ಚರ ವಹಿಸಬೇಕು.

೮. ಬೂಸಲು ಬೆಳೆಯದಿರಲು, ಶೇಖರಿಸುವ ಜಾಗದಲ್ಲಿ ತಣ್ಣನೆಯ ಒಣ ಹವೆ ಇರಬೇಕು.

೯. ಕ್ರಿಮಿನಾಶಕ, ಕೀಟನಾಶಕ ಮತ್ತು ರಸಾಯನಿಕ ಗೊಬ್ಬರಗಳನ್ನು ಅಡುಗೆ ಮನೆಯ ಹತ್ತಿರವಿಡಬಾರದು. ಅವುಗಳಿಗೆ ಸರಿಯಾದ ನಾಮ ಫಲಕಗಳನ್ನು ಹಚ್ಚಿಡಬೇಕು.

—ಡಾ॥ ಎಚ್. ಡಿ. ಚಂದ್ರಪ್ಪಗೌಡ

ಸೋವಿಯತ್ ವಿಶ್ವಕೋಶಗಳು ಮತ್ತು ಅವುಗಳ ಪ್ರಕಾಶನ

ಪ್ರಕಟಣೆಯ ಇತಿಹಾಸದಲ್ಲೇ ರಷ್ಯ ದೇಶಕ್ಕೆ ವಿಶೇಷ ಮನ್ನಣೆ ಸಲ್ಲುತ್ತದೆ. ರಷ್ಯ ದೇಶದ ಜನ ಸಾಹಸಕ್ಕೆ ಹೆಸರಾದವರು. ಪ್ರಪಂಚದ ಯಾವುದೇ ಮೂಲೆಯಲ್ಲಿ ಯಾವುದೇ ಭಾಷೆಯಲ್ಲಿ ಮಹತ್ವದ ಸಂಶೋಧನೆಯೊಂದು ಪ್ರಕಟವಾಯಿತೆನ್ನಿ, ಅದು ಕೆಲವೇ ದಿನಗಳಲ್ಲಿ ರಷ್ಯನ್ ಭಾಷೆಯಲ್ಲಿ ಅನುವಾದವಾಗಿ ಕಾಣಿಸಿಕೊಳ್ಳುತ್ತದೆ. ಇಂಥ ವ್ಯವಸ್ಥೆಯನ್ನು ಬಹಳಷ್ಟು ದೇಶಗಳು ಪಡೆದಿಲ್ಲ. ಜ್ಞಾನದ ಅನಂತ ಮುಖಗಳ ಪರಿಚಯ ಮಾಡಿಕೊಳ್ಳುವ ಬಗ್ಗೆ ರಷ್ಯನರಿಗಿರುವ ಕುತೂಹಲಾಸಕ್ತಿ ಉಳಿದ ಜನಕ್ಕೆ ಇಲ್ಲ. ಹಕ್ಕಿಗಳ ಸ್ವರವನ್ನು ಧ್ವನಿಮುದ್ರಣಗೊಳಿಸಿ ಕ್ಯಾಸೆಟ್ ರೂಪದಲ್ಲಿ ಮಾರಾಟ ಮಾಡುವ, ಕೇಳುವ ಒಂದು ಪ್ರವೃತ್ತಿ ರಷ್ಯನರಿಗೆ ಮಾತ್ರ ಸಾಧ್ಯವಾಗಿರುವಂಥದ್ದು. ಜಗತ್ತಿನ ಪುಸ್ತಕೋದ್ಯಮದಲ್ಲೇ ರಷ್ಯದ್ದು ಸಿಂಹಪಾಲು. ರಷ್ಯನ್ ಭಾಷೆಯ ಪುಸ್ತಕಗಳು ಎಷ್ಟು ಸುಂದರವಾಗಿ, ಅಚ್ಚುಕಟ್ಟಾಗಿ ಪ್ರಕಟವಾಗುತ್ತವೆ ಎಂದರೆ ಓದಲು ಬಾರದ ವ್ಯಕ್ತಿಯೂ ಕೂಡ ಅವುಗಳ ಹೊರಚೆಲುವಿಗೆ ಮಾರುಹೋಗುತ್ತಾನೆ. ಅವುಗಳ ಬೆಲೆ ಕೂಡ ಬಹಳ ಅಗ್ಗ. ಇಷ್ಟು ಅಗ್ಗದ ಬೆಲೆಯಲ್ಲಿ ಪುಸ್ತಕ ಮಾರುವ ದೇಶ ಇನ್ನೊಂದಿಲ್ಲ.

ಇದು ಸಾಮಾನ್ಯ ಆಸಕ್ತಿಯ ಪುಸ್ತಕಗಳ ಸ್ಥಿತಿಯಾದರೆ ವಿಶ್ವಕೋಶಗಳಂಥ ಹೆಬ್ಬೊತ್ತಿಗೆಗಳ ಪ್ರಕಟಣೆಯಲ್ಲಿ ರಷ್ಯ ದೇಶದಲ್ಲಿ ವಿಶ್ವದಾಖಲೆ. ೧೯೧೭ ರಿಂದ ಈಚೆಗೆ, ಸುಮಾರು ೬೫ ವರ್ಷಗಳ ಅವಧಿಯಲ್ಲಿ ರಷ್ಯನ್ ಭಾಷೆಯಲ್ಲೆ ಒಂದು ನೂರು ಬಗೆಯ ವಿಶ್ವಕೋಶಗಳು ಪ್ರಕಟವಾಗಿವೆ; ಒಟ್ಟು ಸಂಪುಟಗಳು ೫೦೦, ಸಂಚಿಕೆಗಳು ೬ ಕೋಟಿಗೂ ಅಧಿಕ. ನಮ್ಮನ್ನು ಮೂಕವಿಸ್ಮಿತರನ್ನಾಗಿಸುವ ಇಂಥ ದೈತ್ಯ ಸಾಹಸವನ್ನು ಕೈಗೊಂಡಿರುವ ಸಂಸ್ಥೆಯ ಹೆಸರು "ಸೋವಿಯತ್ ವಿಶ್ವಕೋಶ ಪ್ರಕಾಶಕರು" (ಸೋವಿಯತ್ ಎನ್‌ಸೈಕ್ಲೊಪೀಡಿಯಾ ಪಬ್ಲಿಷರ್). ಈ ಬಗೆಯ ಕಾರ್ಯ ಬೇರೆ ಯಾವುದೇ ಮುಂದುವರಿದ ರಾಷ್ಟ್ರಗಳಲ್ಲಿ ನಡೆದಿಲ್ಲ. ಸುಮಾರು ೬೦೦ ಜನರನ್ನೊಳಗೊಂಡ ಪರಿಣತ ಸಂಪಾದಕವರ್ಗ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದೆ. ವಿಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ, ಮಾನವಶಾಸ್ತ್ರ, ಇತಿಹಾಸ, ಪ್ರಾಕ್ತನ, ಭಾಷಾವಿಜ್ಞಾನ, ಜಾನಪದ ರಾಜಕೀಯ-ಹೀಗೆ ಜ್ಞಾನಶಾಖೆಯ ಎಲ್ಲ ಕವಲುಗಳಲ್ಲಿ ಪರಿಣತರಾದವರು, ನಿಷ್ಣಾತರಾದವರು ಈ ವಿಶ್ವಕೋಶಗಳಿಗೆ ಲೇಖನಗಳನ್ನು ಬರೆಯುತ್ತಾರೆ. ಅಲ್ಲಿನ ಜನ ವಿಶ್ವಕೋಶ

ಗಳಿಗೆ ಲೇಖನ ಬರೆಯುವುದು ಪ್ರತಿಷ್ಠೆಯ ಕೆಲಸವೆಂದು ಭಾವಿಸಿದ್ದಾರೆ. ಆಂದ್ರೆ ಗ್ರೋಮಿಕೊ ಅಂಥವರು (ರಷ್ಯದ ವಿದೇಶಾಂಗ ಸಚಿವರು) ರಷ್ಯದ ವಿದೇಶಾಂಗ ನೀತಿಯನ್ನು ಕುರಿತು ಲೇಖನ ಬರೆದಿದ್ದಾರೆ. ಲೆನಿನ್ ಹಾಗೂ ನೊಬೆಲ್ ಪ್ರಶಸ್ತಿ ಪಡೆದ ರಷ್ಯದ ಪ್ರಸಿದ್ಧ ವಿಜ್ಞಾನಿ ಆಂದ್ರೆ ಪ್ರಖೊರೊವ್ ಅಂಥವರು ಈ ಸಂಸ್ಥೆಯ ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಪ್ರಕಟಣೆಯ ಮೇಲ್ವಿಚಾರಣೆ ಕೈಗೊಂಡಿದ್ದಾರೆ. ಹಾಗಾಗಿ ಈ ವಿಶ್ವಕೋಶಗಳಿಗೆ ಒಂದು ಗಂಭೀರತೆ, ತೂಕ ಲಭ್ಯವಾಗಿದೆ.

ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಸಿದ್ಧಪಡಿಸಿದ ವಿಶ್ವಕೋಶಗಳು ಸಾಮಾನ್ಯ ವಿಶ್ವಕೋಶಗಳಾದರೆ ವಿಶೇಷವಾಗಿ ಒಂದು ವಿಷಯದಲ್ಲಿ ಆಸಕ್ತ ರಾದವರಿಗೆ, ಪರಿಣತರಾದವರಿಗೆ ಸಿದ್ಧಪಡಿಸಿದ ವಿಶ್ವಕೋಶಗಳು ವಿಷಯ ವಿಶ್ವ ಕೋಶಗಳೆನಿಸಿಕೊಳ್ಳುತ್ತವೆ. ರಷ್ಯನ್ ಭಾಷೆಯಲ್ಲಿ ವಿಷಯ ವಿಶ್ವಕೋಶಗಳು ವಿಫುಲವಾಗಿ ಪ್ರಕಟವಾಗಿವೆ. 'ಸೋವಿಯತ್ ವಿಶ್ವಕೋಶ ಪ್ರಕಾಶಕರು' ಎಂಬ ಸಂಸ್ಥೆ ಮುಂದಿನ ಐದು ವರ್ಷಗಳಲ್ಲಿ ಸುಮಾರು ೪೦ ವಿಷಯಗಳಿಗೆ ಸಂಬಂಧ ಪಟ್ಟಂತೆ ಪರಾಮರ್ಶ ಗ್ರಂಥಗಳನ್ನು ಹೆಬ್ಬೊತ್ತಿಗೆಗಳನ್ನು ಪ್ರಕಟಿಸುವ ಯೋಜನೆ ಒಂದನ್ನು ಹಾಕಿಕೊಂಡಿದೆ.

ಪ್ರಪಂಚದ ಪುರಾಣಗಳಿಗೆ ಸಂಬಂಧಪಟ್ಟಂತೆ ಎರಡು ಸಂಪುಟಗಳಲ್ಲಿ 'ಜಗತ್ತಿನ ಪುರಾಣ ವಿಶ್ವಕೋಶ' (ಎನ್‌ಸೈಕ್ಲೊಪೀಡಿಯಾ ಆಫ್ ವರ್ಲ್ಡ್ ಮೈಥಾಲಜಿ) ಎಂಬ ವಿಶ್ವಕೋಶವನ್ನು ಸಿದ್ಧಪಡಿಸಲಾಗುತ್ತಿದ್ದು ಇದರಲ್ಲಿ ೪೫೦೦ ಲೇಖನಗಳಿರುತ್ತವೆ. ಸಾಹಿತ್ಯ, ಕಲೆ, ಸಂಸ್ಕೃತಿ ಮೊದಲಾದ ವಿಷಯಗಳ ಮೇಲೆ ಪುರಾಣಗಳ ಪ್ರಭಾವ, ಮಾನವನ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸು ವಲ್ಲಿ ಪುರಾಣಗಳು ವಹಿಸಿದ ಪಾತ್ರ ಮುಂತಾದ ವಿಷಯಗಳ ವಿವೇಚನೆ ಈ ಸಂಪುಟಗಳಲ್ಲಿ ದೊರಕುತ್ತದೆ. 'ಜಗತ್ತಿನ ಜನರು' (ಪೀಪಲ್ಸ್ ಆಫ್ ದಿ ವರ್ಲ್ಡ್) ಎಂಬುದು ಮಾನುಕುಲದ ಇತಿಹಾಸವನ್ನು ಕುರಿತ ಪರಾಮರ್ಶನ ಗ್ರಂಥ. ಇದರಲ್ಲಿ ೧೫೦೦ ಲೇಖನಗಳಿರುತ್ತವೆ. ಪ್ರತಿಯೊಂದು ಜನಾಂಗದ ಮೂಲ, ಜನಸಂಖ್ಯೆ, ಭಾಷೆ, ಸಾಂಪ್ರದಾಯಿಕ ಕಸುಬು, ಜೀವನದ ಸ್ಥಿತಿಗತಿಗಳು, ಮೊದಲಾದ ವಿವರಗಳನ್ನು ಈ ಕೃತಿ ಒಳಗೊಂಡಿರುತ್ತದೆ. 'ಗಣಿಗಾರಿಕೆ ವಿಶ್ವ ಕೋಶ' (ಎನ್‌ಸೈಕ್ಲೊಪೀಡಿಯಾ ಆಫ್ ಮೈನಿಂಗ್) ನಾಲ್ಕು ಸಂಪುಟಗಳಲ್ಲಿ ಹೊರಬರುವ ನಿರೀಕ್ಷೆಯಿದೆ. ಇದರಲ್ಲಿ ೮೦೦೦ ಲೇಖನಗಳಿರುತ್ತವೆ. ಪ್ರಾಚೀನ ದಿಂದಲೂ ನಡೆದುಬಂದಿರುವ ಗಣಿಗಾರಿಕೆಯ ವಿಧಾನ, ಆಧುನಿಕ ಬಗೆಯ ಗಣಿ

ಗಾರಿಕೆ, ತೈಲನಿಕ್ಷೇಪಗಳ ಪತ್ತೆ, ಭೂಕಂಪ ಪತ್ತೆಹಚ್ಚುವಿಕೆ ಮೊದಲಾದ ಭೂಗರ್ಭದ ಸಂಗತಿಗಳು ಅಧ್ಯಯನಕ್ಕೊಳಪಡುತ್ತವೆ. ರಷ್ಯದ ಜನಪ್ರಿಯ ಜನಪದ ಕಲೆಯಾದ ಬ್ಯಾಲೆಯನ್ನು ಕುರಿತ ವಿಶ್ವಕೋಶ "ಬ್ಯಾಲೆ ವಿಶ್ವಕೋಶ" (ಎನ್‌ಸೈಕ್ಲೊಪೀಡಿಯಾ ಆಫ್ ಬ್ಯಾಲೆಟ್). ಇದರಲ್ಲಿ ಬ್ಯಾಲೆಯ ಹುಟ್ಟು ಬೆಳವಣಿಗೆ, ಬ್ಯಾಲೆ ನಾಟಕಗಳು, ಬ್ಯಾಲೆ ನರ್ತಕರು, ಬ್ಯಾಲೆ ಕರ್ತೃಗಳು, ಬ್ಯಾಲೆ ಕಲಾವಿದರು, ಬ್ಯಾಲೆ ನಿರ್ದೇಶಕರು, ರಷ್ಯನ್ ಬ್ಯಾಲೆಗಳು, ಇತರ ದೇಶಗಳಲ್ಲಿ ಬ್ಯಾಲೆ ಸಂಪ್ರದಾಯ ಇತ್ಯಾದಿ ಸಂಗತಿಗಳಿರುತ್ತವೆ. ವ್ಯೋಮಮಂಡಲದಲ್ಲಿನ ಅನ್ವೇಷಣೆ ಕುರಿತ ಕೃತಿ "ಗಗನಾನ್ವೇಷಣಾ ವಿಶ್ವಕೋಶ" (ಎನ್‌ಸೈಕ್ಲೊಪೀಡಿಯಾ ಆಫ್ ಸ್ಪೇಸ್ ಎಕ್ಸ್‌ಪ್ಲೊರೇಷನ್) ಇದರಲ್ಲಿ ೨೫೦೦ ಲೇಖನಗಳಿರುತ್ತವೆ. ರಾಕೆಟ್ ನಿರ್ಮಾಣ, ರಾಕೆಟ್ ಉಡಾವಣೆ, ರಾಕೆಟ್ ನಿಯಂತ್ರಣ ವ್ಯವಸ್ಥೆ, ಇಂಧನ ವ್ಯವಸ್ಥೆ, ಪ್ರಸಿದ್ಧ ಗಗನಯಾತ್ರಿಗಳ ಜೀವನಚರಿತ್ರೆ ಮುಂತಾದ ವಿಷಯಗಳು ಖಚಿತ ಮಾಹಿತಿಗಳೊಡನೆ ನಿರೂಪಿತವಾಗಿರುತ್ತವೆ. ರಾಕೆಟ್ ಟೆಕ್ನಾಲಜಿಯಲ್ಲಿ ನಿಷ್ಣಾತರಾದ ಪ್ರಸಿದ್ಧ ರಷ್ಯನ್ ವಿಜ್ಞಾನಿ ವ್ಯಾಲೆಂಟೈನ್ ಗ್ಲುಷ್ಕೋವ್ ಈ ವಿಶ್ವಕೋಶದ ಪ್ರಧಾನ ಸಂಪಾದಕರು.

ರಷ್ಯನ್ ವಿಶ್ವಕೋಶಗಳ ಖ್ಯಾತಿ ಎಷ್ಟೆಂದರೆ ಅವು ರಷ್ಯನ್ ಭಾಷೆಯಿಂದ ಪ್ರಪಂಚದ ಅನೇಕ ಭಾಷೆಗಳಿಗೆ ಅನುವಾದಗೊಳ್ಳುತ್ತಿವೆ. ೩ ಸಂಪುಟಗಳಲ್ಲಿರುವ ಭೌತವಿಜ್ಞಾನ ವಿಶ್ವಕೋಶ (ಎನ್‌ಸೈಕ್ಲೊಪೀಡಿಯಾ ಆಫ್ ಫಿಸಿಕ್ಸ್) ಪೋಲೆಂಡ್ ಹಾಗೂ ಜಪಾನಿ ಭಾಷೆಗಳಿಗೆ ಅನುವಾದಗೊಂಡಿದೆ. ೩ನೆಯ ಮುದ್ರಣ ಕಂಡಿರುವ ೩೪ ಸಂಪುಟಗಳ 'ಬೃಹತ್ ಸೋವಿಯತ್ ವಿಶ್ವಕೋಶ' (ಲಾರ್ಜ್ ಸೋವಿಯತ್ ಎನ್‌ಸೈಕ್ಲೊಪೀಡಿಯಾ) ಇತ್ತೀಚೆಗೆ ಇಂಗ್ಲಿಷ್ (೧೯೭೩) ಹಾಗೂ ಗ್ರೀಕ್ ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಇಂಗ್ಲಿಷ್ ಅನುವಾದವನ್ನು ಅಮೆರಿಕದ ಪ್ರಸಿದ್ಧ ಪ್ರಕಾಶನ ಸಂಸ್ಥೆಯಾದ ಮ್ಯಾಕ್‌ಮಿಲನ್ ಎಜುಕೇಷನಲ್ ಕಾರ್ಪೊರೇಷನ್ ಹೊರತರುತ್ತಿದ್ದು ಇದುವರೆಗೆ ೨೬ ಸಂಪುಟಗಳು ಪ್ರಕಟವಾಗಿವೆ. ಗ್ರೀಕ್ ಅನುವಾದವನ್ನು ಗ್ರೀಕ್ ಅಕಾಡೆಮಿ ಪಬ್ಲಿಷರ್ಸ್ ಎಂಬ ಸಂಸ್ಥೆ ಕೈಗೊಂಡಿದ್ದು ಇದುವರೆಗೆ ೨೨ ಸಂಪುಟಗಳನ್ನು ಪ್ರಕಟಿಸಿದೆ.

ವಿಶ್ವಕೋಶಗಳ ಜೊತೆಗೆ ಬೃಹತ್ ನಿಘಂಟುಗಳನ್ನು ಪ್ರಕಟಿಸುವ ಕಾರ್ಯವೂ ನಡೆದಿದೆ. ಒಂದು ಸಂಪುಟದ ಮಿತಿಯ ಸಾಮಾನ್ಯಾಸಕ್ತಿಯ ಬೃಹತ್ ನಿಘಂಟೊಂದನ್ನು ಸಿದ್ಧಗೊಳಿಸುವ ಕಾರ್ಯ ನಡೆದಿದೆ. ಪ್ರಕಟಿಸಲು ಉದ್ದೇಶಿಸಿರುವ ಪ್ರತಿಗಳ ಮೊತ್ತ ಸುಮಾರು ೧೫ ಲಕ್ಷ. ಮೂರು ಸಂಪುಟಗಳಲ್ಲಿ ಪ್ರಕಟ

ವಾಗಿರುವ ವೈದ್ಯಕೀಯ ಪದಗಳ ವಿಶ್ವಕೋಶ (ಎನ್‌ಸೈಕ್ಲೊಪೀಡಿಯಾ ಆಫ್ ಮೆಡಿಕಲ್ ಟರ್ಮ್ಸ್), ಪಶುವೈದ್ಯ ನಿಘಂಟು (ವೆಟರ್ನರಿ ಡಿಕ್ಷನರಿ) ಈ ದಿಕ್ಕಿನ ಮಹತ್ವದ ಪ್ರಕಟಣೆಗಳು.

ವಿಶ್ವಕೋಶಗಳಲ್ಲಿನ ವಿಷಯಗಳ ಖಚಿತತೆಗೆ ಅಂತರರಾಷ್ಟ್ರೀಯ ಅರಿವಿನ ಅಗತ್ಯ ಬಹುವಾಗಿ ಬೇಕಾಗುತ್ತದೆ. ರಷ್ಯ ತನ್ನ ಸ್ನೇಹವಲಯವನ್ನು ಅನೇಕ ದೇಶಗಳಲ್ಲಿ ವಿಸ್ತರಿಸಿಕೊಂಡಿದ್ದು ನಾನಾಬಗೆಯಲ್ಲಿ ನೆರವು ಪಡೆದಿದೆ. ಸಮಾಜವಾದಿ ರಾಷ್ಟ್ರಗಳಾದ ಬಲ್ಗೇರಿಯಾ, ಜೆಕೊಸ್ಲಾವಾಕಿಯಾ, ಜರ್ಮನ್ ಡೆಮಾಕ್ರಾಟಿಕ್ ರಿಪಬ್ಲಿಕ್, ಪೋಲೆಂಡ್, ರುಮಾನಿಯಾ, ವಿಯಟ್ನಾಂ, ಯುಗೋಸ್ಲಾವಿಯಾ ಮುಂತಾದ ದೇಶಗಳು ಈ ಕಾರ್ಯದಲ್ಲಿ ನೆರವಾಗಿವೆ. ಬೃಹತ್ ಸೋವಿಯತ್ ವಿಶ್ವಕೋಶದ ಎರಡನೆಯ ಮತ್ತು ಮೂರನೆಯ ಮುದ್ರಣದಲ್ಲಿ ಈ ಎಲ್ಲ ದೇಶಗಳಿಂದ ೩೫೦೦ ಲೇಖನಗಳು, ೧೫೦೦ ಕ್ಕೂ ಹೆಚ್ಚು ಸಂಖ್ಯೆಯ ಚಿತ್ರ ಹಾಗೂ ನಕ್ಷೆಗಳ ನೆರವನ್ನು ರಷ್ಯ ಪಡೆದಿದೆ. ಇಷ್ಟೇ ಪ್ರಮಾಣದಲ್ಲಿ ಲೇಖನಗಳನ್ನು ಸುಮಾರು ೧೨,೦೦೦ ಕ್ಕೂ ಹೆಚ್ಚು ಚಿತ್ರಗಳು ನಕ್ಷೆಗಳನ್ನು ಒದಗಿಸಿ ಇತರ ದೇಶಗಳ ಈ ಬಗೆಯ ಕಾರ್ಯಚಟುವಟಿಕೆಗಳಲ್ಲಿ ಮುಕ್ತವಾಗಿ ನೆರವಾಗಿದೆ. ಕ್ಯೂಬ ದೇಶ ತಾನು ೩೦ ಸಂಪುಟಗಳಲ್ಲಿ ಹೊರತರಬೇಕೆಂದು ಯೋಜಿಸಲಾಗಿರುವ "ಕ್ಯೂಬ ವಿಶ್ವಕೋಶ"ಕ್ಕೆ ರಷ್ಯದ ನೆರವನ್ನು ಕೋರಿದ್ದು, ರಷ್ಯ ಅಂಥ ನೆರವು ನೀಡಲು ಮುಂದೆ ಬಂದಿದೆ. ಈ ಬಗೆಯ ಕೆಲಸ ಕಾರ್ಯಗಳಿಗೆ ಮುಕ್ತ ನೆರವು ನೀಡುವ ದೇಶಗಳಲ್ಲಿ ರಷ್ಯ ಮುಂಚೂಣಿಯಲ್ಲಿದೆ.

ರಷ್ಯನ್ ವಿಶ್ವಕೋಶಗಳು ಆ ದೇಶದ ಜನರ ಪ್ರಾಮಾಣಿಕ ದುಡಿಮೆಯ ಪ್ರತೀಕ. ರಷ್ಯನರ ಸಾಹಸ ಪ್ರವೃತ್ತಿ, ಅದಮ್ಯ ಜೀವನೋತ್ಸಾಹಕ್ಕೆ ಪ್ರತ್ಯಕ್ಷ ಸಾಕ್ಷಿ ಈ ನೂರು ಬಗೆಯ ಬೃಹತ್ ವಿಶ್ವಕೋಶಗಳು. ಜಗತ್ತಿನ ಪ್ರಕಟಣ ಪ್ರಪಂಚದಲ್ಲಿ ಇದೊಂದು ಮೈಲಿಗಲ್ಲು. ರಷ್ಯದಂತಹ ರಾಷ್ಟ್ರದಿಂದ ನಾವು ಕಲಿಯುವುದು ಬಹಳವಿದೆ. ಭಾರತೀಯ ಭಾಷೆಗಳಲ್ಲಿ ಈ ಬಗೆಯ ಕಾರ್ಯಸಾಧನೆ ಅಪಾರವಾಗಿ ನಡೆಯಬೇಕಾಗಿದೆ. ಭಾರತೀಯ ಭಾಷೆಗಳ ಮುಂದೆ ಇಂಥ ದೊಡ್ಡ ಆದರ್ಶವೊಂದಿದೆ. ಅವು ಅದರ ಕಡೆಗೆ ಈಗ ಚುರುಕಾಗಿ ಸಾಗಬೇಕಾಗಿದೆ.

ಕೃಷ್ಣ ಹಾಸನ

ಆರೋಗ್ಯವೇ ಭಾಗ್ಯ

—ಗಾದೆ

ಪುಸ್ತಕ ವಿಮರ್ಶೆ

ನಯಾಗರಕ್ಕೆ ಐನೂರು ಮೈಲಿ—ಲೇಖಕರು: ಎಸ್. ಆರ್. ಗೌತಮ, ಅನುಪಮ ಪ್ರಕಾಶನ ೭೪೧:೫೨ ಮೊದಲನೆಯ ಮುಖ್ಯ ರಸ್ತೆ, ವೈಯ್ಯಾಲಿ ಕಾವಲ್, ಬೆಂಗಳೂರು_೩ ಮೊದಲ ಮುದ್ರಣ ೧೯೮೧, ಪುಟಗಳು ೮+೧೫೧ ; ಬೆಲೆ: ೧೫ರೂ.

ಲೇಖಕರು ತಮ್ಮ ಆರು ವರ್ಷದ ಮಗಳಿಗೆ ಹೃದಯದ ಒಳಗೆ ರಂಧ್ರವಾಗಿದ್ದು, ಕೂಡಲೇ ಶಸ್ತ್ರ ಚಿಕಿತ್ಸೆ ನಡೆಯದಿದ್ದರೆ, ಕಾಲಾನುಕ್ರಮದಲ್ಲಿ ಮಗುವಿಗೆ ಹೆಚ್ಚಿನ ಅಪಾಯ ಎದುರಾಗುವ ಸಾಧ್ಯತೆ ಇದ್ದು, ಈ ಶಸ್ತ್ರ ಚಿಕಿತ್ಸೆ ನಡೆಯಲು ಅಮೇರಿಕ ದೇಶ ಒಂದೇ ಸೂಕ್ತ ಸ್ಥಳ ಆಗಿರುತ್ತದೆ. ಇದಕ್ಕಾಗಿ ಸುಮಾರು ೨ ಲಕ್ಷ ರೂಪಾಯಿಗಳ ಅಗತ್ಯ ಇದ್ದು, ಇಷ್ಟೊಂದು ಹಣ ಇಲ್ಲದಾದರೂ 'ಶುಭಸ್ಯ ಶೀಘ್ರಂ' ಎಂದು ಅಮೇರಿಕಾಕ್ಕೆ ಹೊರಡಲು ಕಾರ್ಯ ಮಗ್ನರಾಗುತ್ತಾರೆ. ಇದರ ಜೊತೆಯಲ್ಲೇ ಮಗನಿಗೆ ತಲೆಬುರುಡೆ ಒಳಗೆ ಗೆಡ್ಡೆ ಬೆಳೆದುಕೊಡಲೇ ಶಸ್ತ್ರಕ್ರಿಯೆ ನಡೆಯದಿದ್ದರೆ ಪ್ರಾಣಾಪಾಯಕ್ಕೆ ಎಡೆಗೊಡುವ ಅವಕಾಶ ಇರುತ್ತದೆ. ಮಗಳ ಬೃಹತ್ ಸಮಸ್ಯೆಯ ಮುಂದೆ ಮಗನ ಸಮಸ್ಯೆ ಸಣ್ಣದಾಗಿ ಕಾಣುತ್ತದೆ. ಕಷ್ಟಗಳು ಒಂಟಿಯಾಗಿ ಬರುವುದಿಲ್ಲ ಹಿಂಡು ಹಿಂಡಾಗಿ ಬಂದು ಕಾಡುತ್ತವೆ. ಇಂತಹ ವೇಳೆಯಲ್ಲಿ ಧೃತಿಗೆಡದೆ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕೆಂದು ಕ್ರಿಯಾಶೀಲರಾಗುತ್ತಾರೆ.

ಲೇಖಕರು ತಮ್ಮ ಮಗಳನ್ನು ಬೆಂಗಳೂರಿನಿಂದ ಅಮೇರಿಕಾಕ್ಕೆ ಕರೆದೊಯ್ದು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರೈಸಿಕೊಂಡು ಮನೆಗೆ ಹಿಂದಿರುಗಿದ ದಿನಚರಿಯೇ "ನಯಾಗರಕ್ಕೆ ಐನೂರು ಮೈಲಿ" ಕೃತಿಯ ವಸ್ತುವಾಗಿದೆ. ಕನ್ನಡದಲ್ಲಿ ಹಲವಾರು ಹೆಸರಾಂತ ಬರಹಗಾರರು ತಮ್ಮ ಪ್ರವಾಸದ ಅನುಭವವನ್ನು ಬರೆದು ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯು ಲೇಖಕರೇ ಹೇಳಿರುವಂತೆ —'ಪ್ರವಾಸ ಕಥನದ ಸಿಹಿ ಲೇಪನ ಹೊಂದಿರುವ ಅನಿಸಿಕೆಗಳು, ಅನುಭವಗಳು, ಮಾನವೀಯ ಸಂಬಂಧಗಳು ಹಾಗೂ ಮಾನವೀಯ ಭಾವನೆಗಳ ಪುಸ್ತಕರೂಪವಾಗಿದೆ' ಎಂಬುದನ್ನು ಒಪ್ಪಬಹುದು. ನಿರೂಪಣೆಯು ಸಮರ್ಥಶಾಲಿಯಾಗಿದ್ದು, ಮೊದಲಿನಿಂದ ಕೊನೆಯವರೆಗೂ ಓದುಗರ ಆಸಕ್ತಿಯನ್ನು ಉಳಿಸಿಕೊಂಡು ಹೋಗುತ್ತದೆ. ಘಟನೆಗಳು ಕಣ್ಮುಂದೆ ಹಾದು ಹೋಗುವಷ್ಟು ವಿಷಯ ಪ್ರತಿಪಾದನೆಯು ಶಕ್ತಿಶಾಲಿಯಾಗಿದೆ. ಪ್ರತಿಯೊಂದು ಸನ್ನಿವೇಶವನ್ನೂ ಸೂಕ್ಷ್ಮ ದೃಷ್ಟಿಯಿಂದ ನೋಡಿ ವಿಚಾರ ವಿಮರ್ಶೆಯ ತಕ್ಕಡಿಯಲ್ಲಿಟ್ಟು ತೂಗಿ ಲೇಖಕರು ಕೈಗೊಳ್ಳುವ ನಿರ್ಧಾರವು ಪರಿಣಾಮಕಾರಿಯಾಗಿದೆ.

ಕೃತಿಯಲ್ಲಿ ಹಲವಾರು ವಿಷಯಗಳು ಚರ್ಚಿತವಾಗಿದೆ. ವಾಯುಮಾನದ ಅವ್ಯವಸ್ಥೆ, ಭಾರತದ ದೇಶದ ವೈದ್ಯಕೀಯ ವ್ಯವಸ್ಥೆ, ಅಮೇರಿಕಾದಲ್ಲಿನ ಆಸ್ಪತ್ರೆಗಳ ಅಚ್ಚುಕಟ್ಟುತನ ಅಲ್ಲಿನ ವೈದ್ಯಕೀಯ ಸಿಬ್ಬಂದಿಯು ಕರ್ತವ್ಯಪ್ರಜ್ಞೆ. ಆ ದೇಶದ ಜನಜೀವನ ಮುಂತಾದುವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ. ಸ್ವದೇಶದಲ್ಲಿ ಕೆಲಸ ದೊರೆಯುವ ಭಾರತೀಯ ವೈದ್ಯರು ವಿದೇಶದಲ್ಲಿ ಸುಪ್ರಸಿದ್ಧರಾಗಿದ್ದಾರೆ. ಇದಕ್ಕಾಗಿ ಈ ದೇಶದ ವ್ಯವಸ್ಥೆಯೇ ಬದಲಾಗಬೇಕು ಎಂಬ ಲೇಖಕರ ಅಭಿಪ್ರಾಯಕ್ಕೆ ಒತ್ತುಕೊಡಬಹುದು. ಭಾರತೀಯ ವ್ಯವಸ್ಥೆಗೆ ತಗಲಿರುವ ಈ ರೋಗವನ್ನು ಗುಣಪಡಿಸಲು ಯಾವ ರೀತಿಯ ಚಿಕಿತ್ಸೆ ಅಗತ್ಯವಾಗಿದೆ ಎಂಬುದನ್ನು ಕುರಿತು ಚಿಂತಿಸಿ ಕೂಡಲೇ ನಿವಾರಣೋಪಾಯ ಕೈಗೊಳ್ಳುವುದು ಅಗತ್ಯವಾಗಿದೆ.

ಅಲ್ಲಲ್ಲಿ ವ್ಯಕ್ತವಾಗಿರುವ ನವಿರು ಹಾಸ್ಯ ಪ್ರಸಂಗಗಳು ಕೃತಿಗೆ ಮೆರುಗು ಕೊಡುವುದರ ಜೊತೆಗೆ ಕರ್ತವ್ಯಪ್ರಜ್ಞೆ—ಇರುವವರು ಆ ಬಗ್ಗೆ ಚಿಂತಿಸಲು ಅನುವು ಮಾಡಿಕೊಡುತ್ತದೆ.

ಉದಾಹರಣೆಗೆ ಈ ಕೆಲವು ಸನ್ನಿವೇಶಗಳನ್ನು ಅವಲೋಕಿಸಬಹುದು.

—"ಜಯನಗರ ಎಲ್ಲಿದೆ, ಏತಕ್ಕೆ ಪ್ರಸಿದ್ಧ ಎಂದು ಯಾರಾದರೂ ಕೇಳಿದರೆ, ಇದು ಬೆಂಗಳೂರಿನ ದಕ್ಷಿಣದಲ್ಲಿದೆ, ಆಗ್ನೇಯ ಏಷ್ಯಾದಲ್ಲೇ ಅತ್ಯಂತ ದೊಡ್ಡದಾದ, ಬಹಳ ಚೆನ್ನಾದ ವಿನ್ಯಾಸವುಳ್ಳ, ಅತಿ ಸುಂದರವಾದ ಹಾಗೂ ಅತಿ ಬುದ್ಧಿವಂತ ಸೊಳ್ಳೆಗಳು ವಾಸಿಸುತ್ತಿರುವ ಬಡಾವಣೆ ಎಂದು ಧಾರಾಳವಾಗಿ ಹೇಳಬಹುದು. ಬೆಟ್ಟಕ್ಕೆ ಕಲ್ಲು ಹೊರಬಹುದು. ಸಪ್ತಸಾಗರಗಳ ಉಪ್ಪು ನೀರನ್ನು ಕುಡಿಯಬಹುದು. ಸಹರಾ ಮರುಭೂಮಿಯಲ್ಲಿ ಮರಳನ್ನು ಮಾರಬಹುದು, ಇಲ್ಲದಿದ್ದರೆ ಆರ್ಕ್‌ಟಿಕ್‌ನಲ್ಲಿ ರೆಫ್ರಿಜಿರೇಟರನ್ನೂ ಮಾರಬಹುದು. ಆದರೆ ಈ ಜಯನಗರವ (ಜಯನಗರವೋ ಅಥವಾ ಸೊಳ್ಳೆಗಳ ಮುಂದೆ ಸೋಲನ್ನು ಅನುಭವಿಸಿದ ಅಪಜಯನಗರವೋ) ಖದೀಮ ಸೊಳ್ಳೆಗಳಿಗೆ ಡಿಡಿಟಿಯನ್ನು ಕುಡಿಸಲು ಸಾಧ್ಯವೆ. ಈ ಸೊಳ್ಳೆಗಳು ಒಂದು ರಾತ್ರಿಯಲ್ಲಿ ಹೀರುವ ರಕ್ತವನ್ನೆಲ್ಲಾ ಒಟ್ಟುಗೂಡಿಸಿದರೆ ಬೆಂಗಳೂರಿನ ಆಸ್ಪತ್ರೆಗಳು ನರ್ಸಿಂಗ್ ಹೋಮ್‌ಗಳು ಇವುಗಳಲ್ಲಿ ಇರುವ ಎಲ್ಲಾ ರೋಗಿಗಳಿಗೂ ರಕ್ತದಾನ ಮಾಡಬಹುದು" (ಪುಟ ೨೯–೩೦)

—ಎದೆಯ ಹಾಲು ಬಿಡುವಂತೆ ಮಾಡಲು, ಬೆಳೆದ ಮಗುವಿಗೆ ರಬ್ಬರ್ ನಿಪ್ಪಲ್ ಅನ್ನು ಬಾಯಿಗೆ ಸಿಕ್ಕಿಸುವುದಿಲ್ಲವೇ, ಹಾಗೇ ನಾನು ವೈದ್ಯರುಗಳನ್ನು ಬಿಡಲು ಜ್ಯೋತಿಷಿಗಳ ಮೊರೆ ಹೊಕ್ಕೆ (ಪುಟ ೮೬)

—ಅಮೇರಿಕನ್ನರಿಗೆ ಕಾಲುಗಳಿರುವುದು ನಡೆಯುವುದಕ್ಕೆ ಎಂಬುದು ಮರೆತು ಹೋಗುವ ಕಾಲ ಬಹುದೂರವಿಲ್ಲ. ತಾವು ಹೋಗಬೇಕಾದ ಸ್ಥಳ, ಹತ್ತಿರವಿರಲಿ ದೂರವಿರಲಿ ಕಾರು ಇರಲೇಬೇಕು. ಅವರ ರಸ್ತೆಗಳಲ್ಲಿ ಯಾರಾದರೂ ನಡೆಯುವು ದನ್ನು ನೋಡಿದರೆ ಮೂರ್ಛೆ ಹೋಗುತ್ತಾರೋ ಏನೋ (ಪುಟ ೯ಳ)

—ಮೈಸೂರಾಗಲಿ, ಮದರಾಸಾಗಲಿ, ವಾಟರ್‌ಫೋರ್ಡ್ ಆಗಲೀ ಹೆಂಡತಿಯರು ಹೆಂಡತಿಯರೇ, ಗಂಡಂದಿರು ಗಂಡಂದಿರೇ, ಸ್ವಭಾವ ಜನ್ಯವಾದ ಬುದ್ಧಿ ಭೌಗೋಳಿಕ ಎಲ್ಲೆಗಳಿಂದ ಬದಲಾಗುವುದಿಲ್ಲ. (ಪುಟ ೧೦೧)

—ಗಡಿಯಾರದ ಮುಳ್ಳುಗಳು ಒಮ್ಮೊಮ್ಮೆ ಬಹು ನಿಧಾನವಾಗಿ ಚಲಿಸುತ್ತವೆ. ನಮಗೆ ಆತುರ ಕಾತರ ಹೆಚ್ಚಾದಾಗಲೆಲ್ಲ ಅವುಗಳ ಚಲನೆ ಬಲು ಮಂದವಾಗಿ ಬಿಡುತ್ತದೆ. ಐದರಿಂದ ಆರುಗಂಟೆಯವರೆಗೆ ಒಂದು ಗಂಟೆಯ ಅವಧಿ. ಅಂದರೆ ಮೂರು ಸಾವಿರದ ಆರನೂರು ಸೆಕೆಂಡುಗಳು (ಪುಟ ೧೧೬)

ಮನುಷ್ಯರಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರಿಗೂ ಕಷ್ಟಕೋಟಲೆಗಳು ಎದುರಾಗುತ್ತವೆ. ಸಾಧಾರಣಜನರ ವ್ಯಥೆ ವ್ಯಥೆಯಾಗಿಯೇ ಉಳಿದರೆ ಸಾಹಿತಿಯ ವ್ಯಥೆ ಕಥೆಯಾಗುತ್ತದೆ. ಅಂತೆಯೇ ಶ್ರೀ ಎಸ್. ಆರ್. ಗೌತಮ ಅವರು ಬರೆದಿರುವ 'ನಯಾಗಾರಕ್ಕೆ ಐನೂರಮೈಲಿ' ಕೃತಿಯು ಪ್ರವಾಸಿ ದಿನಚರಿ ಯಾಗಿರದೆ, ಉತ್ತಮ ಸಾಹಿತಿ ಬರೆದ ಕಾದಂಬರಿಯಾಗಿದೆ.

"ನಾನು ಯಾವ ಕಾರಣಕ್ಕಾಗಿ ಅಮೇರಿಕಕ್ಕೆ ಹೋಗಬೇಕಾಗಿಬಂದಿತೋ, ಅಂಥದೇ ಕಾರಣಕ್ಕಾಗಿ ಮನೋವ್ಯಥೆ, ಅನಿಶ್ಚಯತೆ, ಅಸಹಾಯಕತೆ, ಅಂಜಿಕೆ ಗಳಿಗೆ ಸಿಕ್ಕಿ ಒದ್ದಾಡುತ್ತಿದ್ದ ಮೂರು–ನಾಲ್ಕು ತಂದೆ–ತಾಯಿಯರ ಬವಣೆ ಯನ್ನು ಕಂಡು, ನನ್ನ ಸ್ವಾನುಭಾವವನ್ನು ಪುಸ್ತಕ ರೂಪದಲ್ಲಿ ಬರೆದರೆ ಅಂಥ ತಾಯಿ–ತಂದೆಯರಿಗೆ ಒಂದು ನೈತಿಕ ಧೈರ್ಯವನ್ನು ತಂದು ಕೊಡಬಹುದೇನೋ ಎಂಬ ಒಂದು ಆಸೆ, ಆಶಯ ನನ್ನ ನಿರ್ಧಾರ ಕಾರ್ಯರೂಪಕ್ಕೆ ಬರಲು ಕಾರಣ"—ಎಂದು ಲೇಖಕರು ಕೃತಿಯ ಪೀಠಿಕೆಯಲ್ಲಿ ಹೇಳಿದ್ದಾರೆ. ಕೃತಿಯನ್ನು ಓದಿದ ನಂತರ ಸಂಬಂಧಿಸಿದವರಲ್ಲಿ ಇಂತಹ ಭಾವನೆಯನ್ನು ಉದ್ದೀಪಿಸುವಲ್ಲಿ ಯಶಸ್ವಿಯಾಗಿದೆ ಎಂದು ಪ್ರಾಮಾಣಿಕವಾಗಿ ಹೇಳಬಹುದು. ಶ್ರೀಯುತ ಗೌತಮ್ ಅವರಿಂದ ಇಂತಹ ಇನ್ನೂ ಹಲವು ಹತ್ತು ಕೃತಿಗಳು ಹೊರಬಂದು ಕನ್ನಡ ಸಾಹಿತ್ಯ ಶ್ರೀಮಂತಗೊಳ್ಳಲಿ ಎಂದು ಹಾರೈಸಬಹುದು.

ಚಂದ್ರಶೇಖರಾರಾಧ್ಯ

* * *

ಸರ್ವೋದಯ ಪಥ—(ಜಿ. ವಿ. ನಾ. ಅಭಿನಂದನ ಗ್ರಂಥ) ಪ್ರಕಾಶಕರು : ಜಿ.ವಿ.ನಾ ಅಭಿನಂದನ ಸಮಿತಿ, ಚಿಕ್ಕನಾಯಕನಹಳ್ಳಿ; ಪ್ರಧಾನಸಂಪಾದಕರು: ಡಾ॥ ದೇ. ಜವರೇಗೌಡ ಬೆಲೆ : ೬೦ ರೂ.

ಗಾಂಧೀಜಿಯ ಸರ್ವೋದಯ ಪಥದಲ್ಲಿ ನಿಷ್ಠೆಯಿಂದ ನಡೆದು ಕಾಯಾ ವಾಚಾ ಮನಸಾ ಶ್ರಮಿಸಿದ ಧ್ಯೇಯವಾದಿ ಪಯಣಿಗ ಜಿ.ವಿ.ನಾ.. (ಗೂಳೂರು ವೆಂಕಣ್ಣಾಚಾರ್ ನಾರಾಯಣಮೂರ್ತಿ). ಏಳು ದಶಕಗಳ ಸುವರ್ಣ ಬಾಳಿನಲ್ಲಿ ಇವರು ಸಾಧಿಸಿದ ಸಾಧನೆಗಳ ಮೆಚ್ಚಿಗೆಯ ಕುರುಹಾಗಿ ಅಭಿಮಾನಿಗಳು ಗೌರವ ಪುರಸ್ಸರವಾಗಿ ಅರ್ಪಿಸಿರುವ ಅಭಿನಂದನ ಗ್ರಂಥ 'ಸರ್ವೋದಯ ಪಥ' ನಿಜವಾಗಿ ಕನ್ನಡನಾಡು ಹಾಗೂ ನಾಡಿಗೆ ಅರ್ಪಿತವಾಗಿರುವ ಒಂದು ಅಮೂಲ್ಯ ಕೊಡುಗೆ.

ಸರ್ವೋದಯ ದುರ್ಗಮ ಪಥದಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿರುವ ಧೈರ್ಯವಂತ 'ಪಥಿಕ' (ಜಿ.ವಿ.ನಾ.) ದಾರಿಯುದ್ದಕ್ಕೂ ಶಾಶ್ವತ 'ಪದಚಿಹ್ನೆ' ಮೂಡಿಸಿ ಸಮೃದ್ಧ್ಯುತ್ಪಾದಕ 'ಪರಿಸರ' ನಿರ್ಮಿಸಿ, ಸರ್ವರಿಗೂ ಆದರ್ಶ 'ಪಥದರ್ಶನ' ಮಾಡಿಸಿ ಹೊರಟಿರುವ ಧೀಮಂತ ಅಹಿಂಸಾವಾದಿ.

ಜಿ. ವಿ. ನಾ. ಅಭಿನಂದನ ಗ್ರಂಥದ ರಚನೆಯಲ್ಲಿ ಸಂಪಾದಕರು ಮಾಡಿ ಕೊಂಡಿರುವ ವಿಭಾಗ ಪಥಿಕ, ಪದಚಿಹ್ನೆ, ಪರಿಸರ ಮತ್ತು ಪಥದರ್ಶನ ಬಹು ಅರ್ಥವತ್ತಾಗಿದೆ.

ಮೊದಲ ವಿಭಾಗದಲ್ಲಿ ಜಿ. ವಿ. ನಾ. ರವರ ಆತ್ಮೀಯ ಬಂಧುಗಳು ಅವರ ಬಗ್ಗೆ ಮೂಡಿಬಂದ ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ಬಹಳ ರಸವತ್ತಾಗಿ ಓದುಗರ ಮುಂದಿರಿಸಿದ್ದಾರೆ. ಆದರೆ ಇಲ್ಲಿನ ಹಲವು ಲೇಖನಗಳಲ್ಲಿ ವಿಷಯಗಳ ಹಾಗೂ ಘಟನೆಗಳ ಪುನರಾವೃತ್ತಿ ಕಂಡುಬರುತ್ತದೆ. ಲೇಖಕರು ಅಭಿಮಾನ ತುಂಬಿ ಭಾವೋದ್ರೇಕಕ್ಕೆ ಬಲಿಯಾದಾಗ ಹೀಗಾಗುವುದು ವಾಸ್ತವ. ಸಂಪಾದಕರು ಕೊಂಚ ಹೆಚ್ಚು ಕಾಳಜಿ ವಹಿಸಿದ್ದರೆ ಈ ವಿಭಾಗ ಮತ್ತಷ್ಟು ಪರಿಪೂರ್ಣವಾಗು ತ್ತಿತ್ತು.

ಎರಡನೆ ವಿಭಾಗದಲ್ಲಿ ಜಿ. ವಿ. ನಾ. ರವರ ಕೃತಿಗಳ ಪರಿಚಯದೊಡನೆ ವಿಮರ್ಶೆ ನಡೆದಿದೆ.

ಗಾಂಧಿ ಸಾಹಿತ್ಯಕ್ಕೆ ಜಿ. ವಿ. ನಾ. ರವರ ಕೊಡುಗೆ ಬಗ್ಗೆ ಬರೆಯುತ್ತಾ ಡಾ॥ ದೇ.ಜ.ಗೌ.ರವರು 'ಕನ್ನಡಿಯಲ್ಲಿ ಆನೆಯನ್ನು, ಬಟ್ಟಲು ನೀರಿನಲ್ಲಿ ಸೂರ್ಯನನ್ನು ಹಿಡಿಯುವಂತೆ ಶ್ರೀ ನಾರಾಯಣಮೂರ್ತಿಯವರು ಸಮಗ್ರ ಗಾಂಧಿ ಸಾಹಿತ್ಯದ ಪರಿಚಯವನ್ನು ಈ ಕಿರುಹೊತ್ತಗೆಯಲ್ಲಿ ಸಮರ್ಥವಾಗಿ ಮಾಡಿಕೊಟ್ಟಿದ್ದಾರೆ.

ಸಿಂಹಾವಲೋಕನ ಕ್ರಮದಿಂದ ಅದನ್ನು ಸಂಗ್ರಹಿಸಿದ್ದಾರೆ. ಗಾಂಧಿ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಅದನ್ನು ಜೀರ್ಣಿಸಿಕೊಂಡದ್ದರಿಂದ ಅದರಲ್ಲಿಯೇ ತೇಲಿ ಮುಳುಗಿದವರಾದ್ದರಿಂದ, ಅದು ಅವರ ನಾಡಿ ನಾಡಿಯಲ್ಲಿ ಚಿಮ್ಮುತ್ತಿದ್ದುದರಿಂದ ಈ ಸಂಗ್ರಹಕಾರ್ಯ ಸಫಲವಾಗಿದೆ. ಹೀಗೆ ಅವರ ಲೇಖನ ಸಾಮರ್ಥ್ಯ ಹೊಗಳಿದ್ದರೆ ಶ್ರೀ ಪ್ರಧಾನ ಗುರುದತ್ತರವರು ಶ್ರೀ ಜಿ.ವಿ.ನಾ.ರವರ ಭಾಷಾಂತರಗಳನ್ನು ವಿಮರ್ಶಿಸುತ್ತಾ ಅದರಲ್ಲಿರುವ ಲೋಪದೋಷಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಅತ್ಯಂತ ಸೀಮಿತ ಸಾಧನ ಸೌಲಭ್ಯಗಳನ್ನು ಹೊಂದಿರುವ ಕನ್ನಡಿಗರು ಉತ್ಕೃಷ್ಟ ಗ್ರಂಥವೊಂದರ ಉತ್ತಮ ಅನುವಾದವನ್ನು ಪಡೆಯುವ ಭಾಗ್ಯದಿಂದ ವಂಚಿತರಾದವರಲ್ಲಾ ಎಂದು ಕಳಿಕಳಿ ವ್ಯಕ್ತಪಡಿಸಿದ್ದಾರೆ. ಹೀಗೆ ಈ ವಿಭಾಗದಲ್ಲಿ ತುಲನಾತ್ಮಕ ವಿಮರ್ಶೆ ಬಹಳ ಅರ್ಥವತ್ತಾಗಿ ನಡೆದಿದೆ. ಅಭಿನಂದನಾ ಗ್ರಂಥ ಸಾಮಾನ್ಯವಾಗಿ ಹೊಗಳಿಕೆಗೇ ಮೀಸಲಾಗಿರುವುದು ಪದ್ಧತಿ. ಆದರೆ ಇಲ್ಲಿ ಹಾಗಿಲ್ಲದಿರುವುದು ಈ ಗ್ರಂಥದ ವೈಶಿಷ್ಟ್ಯ.

ಈ ಗ್ರಂಥದಲ್ಲಿನ ಅತ್ಯಂತ ರಸವತ್ತಾದ ಹಾಗೂ ಅಮೂಲ್ಯ ವಿಭಾಗವೆಂದರೆ 'ಪರಿಸರ'. ಇಲ್ಲಿ ಜಿಲ್ಲೆಯ ಬಗ್ಗೆ ಸಮಗ್ರ ರೀತಿಯ ವಿಶ್ಲೇಷಣೆ ನಡೆದಿದೆ. ಐತಿಹಾಸಿಕ, ಶೈಕ್ಷಣಿಕ, ಭೂವೈಜ್ಞಾನಿಕ ಸಮೀಕ್ಷೆ ನಡೆದಿದೆ. ಆಳಿ ಅಳಿದ ಪಾಳೆಗಾರರು, ಮಹಾರಾಜರು, ದಿವ್ಯ ತಾರೆಯಂತೆ ಮೆರೆದ ಕಲಾವಿದರು, ಸಾಹಿತಿಗಳ ಸೂಕ್ಷ್ಮ ಪರಿಚಯ ದೊರೆಯುವುದಲ್ಲದೆ, ಈಗ ಸಾಹಿತ್ಯ ಕ್ಷೇತ್ರದಲ್ಲಿ ಬೆಳಗುತ್ತಿರುವ ಆ ಪ್ರಾಂತದ ಪ್ರತಿಭಾನ್ವಿತ ವ್ಯಕ್ತಿಗಳ ಚಿತ್ರಣವೂ ಲಭ್ಯವಿದೆ.

ಈ ವಿಭಾಗದಲ್ಲಿ ಹೆಸರಿಸಲೇಬೇಕಾದ ಲೇಖನಗಳೆಂದರೆ ಶ್ರೀಯುತರಾದ ಎ. ವಿ. ವೆಂಕಟರತ್ನಂರವರ 'ಪಾಳೇಗಾರರು' ಡಾ|| ಸಾ. ಶಿ. ಮರುಳಯ್ಯನವರ 'ಜಾನಪದ' ತೀ. ನಂ. ಶಂಕರನಾರಾಯಣರವರ 'ಸ್ಥಳ ನಾಮಗಳು', ಬಿ. ಕೆ. ಗುರುರಾಜ್‌ರವರ 'ಐತಿಹಾಸಿಕ ಸಮೀಕ್ಷೆ'—ಎಂ. ವಿ. ನಾಗರಾಜರಾವ್‌ರವರ 'ರಂಗಭೂಮಿ ಕೊಡುಗೆ' ಮುಂತಾದವುಗಳು.

ನಾಲ್ಕನೆ ವಿಭಾಗ 'ಪಥ ದರ್ಶನ'ದಲ್ಲಿನ ಶ್ರೀ ಕೆ. ಆರ್. ಕಮಲೇಶ್‌ರವರ 'ಜಿ. ವಿ. ನಾ. ನುಡಿಯುತ್ತಾರೆ' ಒಂದು ಲೇಖನಬಿಟ್ಟು ಉಳಿದವುಗಳೆಲ್ಲಾ ಅಭಿನಂದನಕಾರರ ಜೀವನಕ್ಕೆ ಪ್ರಭಾವ ಬೀರಿದ್ದ ಗಾಂಧೀಜಿಯವರನ್ನೇ ಕುರಿತದ್ದಾಗಿರುವುದರಿಂದ ಈ ಗ್ರಂಥದಲ್ಲಿ ಅವುಗಳ ಪ್ರವೇಶ ಅಪ್ರಸ್ತುತವೆನಿಸದೆ

ಇರದು. ಆದರೂ ಶ್ರೀಯುತ ಕೆ. ವಿ. ಶಂಕರೇಗೌಡ, ಹೆಚ್. ಆರ್. ದಾಸೇಗೌಡ, ಕೆ. ಸಚ್ಚಿದಾನಂದಯ್ಯ, ಸಿ.ಪಿ.ಕೆ, ವಿ. ಜಿ. ಕೃಷ್ಣಮೂರ್ತಿ, ಹೆಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಮುಂತಾದವರುಗಳ ಲೇಖನಗಳು ಬಹಳ ವಿಚಾರ ಪೂರ್ಣವಾಗಿದ್ದು ಗಾಂಧಿ ವಿಚಾರಧಾರೆ ಹಾಗೂ ಸಿದ್ಧಾಂತಗಳನ್ನು ಓದುಗರ ಮನ ಮುಟ್ಟಿಸುವಲ್ಲಿ ಸಮರ್ಥವಾಗಿವೆ.

ಡಾ|| ದೇ.ಜ.ಗೌ.ರವರ ಮುನ್ನುಡಿ ಈ ಗ್ರಂಥಕ್ಕೆ ಮುಕುಟವಿತ್ತಂತಿದೆ. ಇಲ್ಲಿ ಅವರು ಬಳಸಿರುವ ಕಾವ್ಯಮಯ ಶೈಲಿ ಹೃದಯಂಗಮವಾಗಿದೆ. ನೂರುಪುಟ ಗಳಲ್ಲಿ ಇನ್ನೊಬ್ಬರು ಹೇಳುವಷ್ಟನ್ನು ದೇ.ಜ.ಗೌ.ರವರು ಮೂರು ಮಾತಿನಲ್ಲಿ ಮಂಡಿಸಲು ಸಮರ್ಥರಾಗಿದ್ದಾರೆ.

ಸರ್ವೋದಯ, ಗಾಂಧಿತತ್ವ, ಸತ್ಯಾಗ್ರಹ, ಸ್ವಾತಂತ್ರ್ಯೇತಿಹಾಸ, ಭಾರತೀಯ ಚರಿತ್ರೆ ಇವು ನಾರಾಯಣಮೂರ್ತಿಗಳ ಪ್ರಿಯ ವಿಷಯಗಳು, ಅವುಗಳಲ್ಲವರು ಸೃಜನಾತ್ಮಕವೂ, ವಿಮರ್ಶಾತ್ಮಕವೂ ಹಾಗೂ ಕ್ರಿಯಾತ್ಮಕವೂ ಆದ ನಿರ್ದಿಷ್ಟ ಪಾಂಡಿತ್ಯ ಸಂಪಾದಿಸಿದ್ದಾರೆ....ದೈವಭಕ್ತರಾಗಿ, ಸ್ವಾತಂತ್ರ ಯೋಧರಾಗಿ, ಗಾಂಧಿ ಅನುಯಾಯಿಯಾಗಿ, ನಿಷ್ಕಾಮ ಕರ್ಮಿಯಾಗಿ, ಸರ್ವೋದಯ ಸಾಧಕ ರಾಗಿ, ಉತ್ತಮ ಬೋಧಕರಾಗಿ, ಅಜಾತಶತ್ರುವಾಗಿ, ಸಂಘ ಸಂಸ್ಥೆಗಳ ಸಂಸ್ಥಾಪಕರಾಗಿ, ಸಾಹಿತಿಯಾಗಿ, ಪೂರ್ಣವೂ ಸಾರ್ಥಕವೂ ಆದ ಜೀವನವನ್ನು ನಡೆಸಿರುವ ಜಿ.ವಿ.ನಾ. ಅವರು ನಾಡಿನ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಆ ಕೃತಜ್ಞತೆಯ ಸಂಕೇತವಾಗಿ 'ಸರ್ವೋದಯ ಪಥ'ವೆಂಬ ಅಭಿನಂದನ ಗ್ರಂಥ ವನ್ನು ಸಮರ್ಪಿಸುತ್ತಿರುವ ಚಿಕ್ಕನಾಯಕನಹಳ್ಳಿಯ ಮಿತ್ರರ ಸಾಹಸ ಮೆಚ್ಚು ವಂಥದು....' ದೇ.ಜ.ಗೌ.ರವರೊಡನೆ ಇಂತಹ ಉತ್ತಮಗ್ರಂಥ ಹೊರತಂದ ಈ ಮಿತ್ರರಿಗೆ ನನ್ನದೂ ಅಭಿನಂದನೆ ಸಲ್ಲುತ್ತದೆ.

'ಸಂತರೂ ವೀರರಾಗಬೇಕು, ವೀರರೂ ಸಂತರಾಗಬೇಕು. ಇದರಿಂದಲೇ ಭಾರತಕ್ಕೆ ಭವಿಷ್ಯ. ದಬ್ಬಾಳಿಕೆಯನ್ನು ಎದುರಿಸುವ ಸಾತ್ವಿಕ ಕ್ಷಾತ್ರ ಮೈದಾಳೀತು' ಜಿ. ವಿ. ನಾ. ಆಶಯ ಪೂರೈಸಬೇಕಾದ್ದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ.

ಪ್ರಧಾನ ಸಂಪಾದಕ ಡಾ|| ದೇ.ಜ.ಗೌ.ರವರ ನೇತೃತ್ವದಲ್ಲಿ ಸಂಪಾದಕವರ್ಗ ಈ ಉದ್ಗ್ರಂಥ ಹೊರತರುವಲ್ಲಿಸ್ತುತ್ಯಾರ್ಹ ಕಾರ್ಯವೆಸಗಿದ್ದಾರೆ. ಇದು ಎಲ್ಲ ಪುಸ್ತಕಭಂಡಾರಗಳಲ್ಲೂ ಹಾಗೂ ಎಲ್ಲರ ಮನೆಯಲ್ಲೂ ಇರಲೇಬೇಕಾದ ಗ್ರಂಥ.

ಎಸ್. ವಿ. ಶ್ರೀನಿವಾಸರಾವ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ [illegible]ತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng
Manager at Karnataka State Adult Education Council Pre
and Published by Karnataka State Adult Education Coun
Mysore city (India)